Editor: S.Y.GURUSHANTH Publisher: G.N.NAGARAJ RNI No. KARKAN/2006/17926


ಜನಶಕ್ತಿ ಕನ್ನಡ ವಾರ ಪತ್ರಿಕೆ

ದುಡಿಯುವ ಜನರ ಪ್ರಾಣಮಿತ್ರ

JANASHAKTHI KANNADA VARA PATRIKE

ಸಂಪುಟ–19 | ಸಂಚಿಕೆ–23 | ಜೂನ್ 2–8, 2025 | ಪುಟ 16 | ರೂ.10/–
Volume-19 | Issue-23 | June 2-8, 2025 | Pages:16 | Price: 10/-

ಸರಣಿ ಹತ್ಯೆಗಳು: ಹೆಮ್ಮೆಯ ತುಳುನಾಡಿಗೆ ಈ ಗತಿ ತಂದವರಾರು?



ಭಾರತ:

ಅತಿ ಹೆಚ್ಚು ಬಡವರು



ಅತಿ ದೊಡ್ಡ ಆರ್ಥಿಕತೆ ಎಂಬ ಢಾಂಬಿಕತೆ



- ಸಿಐಟಿಯು 55 ರ ಸಂಭ್ರಮ: ವ್ಯಾಪಕ ಚಳುವಳಿ ಕಟ್ಟುವ ಪಣ
- ಗಾಝಾ ನರಮೇಧದ ನೇರ ಪ್ರಸಾರ
- ಕೇರಳ: ಎಲ್.ಡಿ.ಎಫ್. ಮುನ್ನಡೆಯ ಕಥೆ

ಲಿಲ್‌ಬರ್ನ್ ಎಂಬ ದುಡಿವ ಜನರ ಪ್ರಜಾಪ್ರಭುತ್ವದ ವೀರನ ವೈಚಾರಿಕತೆ ಮತ್ತು ತ್ಯಾಗ

ಭಾಗ 28

ಜಿ.ಎನ್. ನಾಗರಾಜ್

ಒಂದು ಬಂಡಿಗೆ ಒಬ್ಬ ವ್ಯಕ್ತಿ, ಒಬ್ಬ 22 ವರ್ಷದ ಯುವಕನನ್ನು ಕಟ್ಟಲಾಗಿದೆ. ಪ್ರತಿ ಮೂರು ಹೆಜ್ಜೆಗೊಮ್ಮೆ ಚಾಟಿಯಿಂದ ಬಾರಿಸುತ್ತಿದ್ದಾರೆ. ಅಂತಿಂತ ಚಾಟಿಯಲ್ಲ, ಮೂರು ಎಳೆಗಳಿಂದ ಕೂಡಿ ಇಡೀ ಚಾಟಿಯನ್ನು ಗಂಟು ಗಂಟಾಗಿ ಕಟ್ಟಿದ ಚಾವಟಿ ಅದು. ಹೀಗೆ ದಾರಿಯುದ್ದಕ್ಕೂ ಐನೂರು ಬಾರಿ ಬಾರಿಸಿ ಬಾರಿಸಿ ಮೈಯೆಲ್ಲಾ ರಕ್ತ ಸುರಿಯುತ್ತಿದೆ. ಲಂಡನ್‌ನ ಹಲವು ಜನರು ಈ ಕ್ರೌರ್ಯವನ್ನು ನೋಡಿ ಮರುಕಪಡುತ್ತಾ ಹಿಂಬಾಲಿಸುತ್ತಿದ್ದರು. ನಂತರ ಬಿಸಿಲಿನಲ್ಲಿ ಎರಡು ಗಂಟೆ ಕಾಲ ಕಂಬಕ್ಕೆ ಕಟ್ಟಿ ನಿಲ್ಲಿಸಲಾಯಿತು. ನಂತರ ಅಧಿಕಾರಿಗಳು ಅವನಿಗೆ ತನ್ನ ತಪ್ಪನ್ನು ಒಪ್ಪಿಕೊಳ್ಳುವಂತೆ ಕೇಳಿದರು.

ಆ ತಪ್ಪೇನಪ್ಪಾ ಅಂದ್ರೆ, ಈ ಯುವಕ ಇಂಗ್ಲೆಂಡ್‌ನ ಅಧಿಕಾರಯುತ ಚರ್ಚ್‌ನ ವಿಚಾರಗಳ ವಿರುದ್ಧವಾದ ಸುಧಾರಣಾ ವಿಚಾರಗಳನ್ನು, ಹಿಂದೆ ವಿವರಿಸಲಾದ ಪ್ಯೂರಿಟನ್ ಪಂಥದ ಸರಳ ಚರ್ಚ್‌ನ ವಿಚಾರಗಳನ್ನು ಪ್ರತಿಪಾದಿಸಿದ ಕಿರುಪುಸ್ತಿಕೆಗಳನ್ನು ಬೇರೆ ದೇಶದಿಂದ ತಂದು ಲಂಡನ್‌ನಲ್ಲಿ ಹಂಚಿದ್ದ ಎಂಬುದು.




ಅಧಿಕಾರಿಗಳ ಆಜ್ಞೆಗೆ ಇಷ್ಟೆಲ್ಲ ನೋವಿನಲ್ಲಿಯೇ ಆ ಯುವಕ ಹೇಳಿದ: ಬಿಷಪ್‌ಗಳು ಈ ದೇಶದ ಕಾನೂನಿನ ಪ್ರಕಾರ ಅಥವಾ ಬೈಬಲ್‌ನ ದೈವವಾಕ್ಯದ ಪ್ರಕಾರ ನನ್ನ ತಪ್ಪೇನು ಎಂದು ತಿಳಿ ಹೇಳುವವರೆಗೂ ನನ್ನ ದೇಹದಲ್ಲಿ ಉಸಿರುವವರೆಗೂ ನನ್ನ ಧಾರ್ಮಿಕ ವಿಚಾರಗಳನ್ನು ಬದಲಾಯಿಸಿಕೊಳ್ಳುವುದಿಲ್ಲ.

ಆದರೆ, ಅಷ್ಟಕ್ಕೇ ನಿಲ್ಲಲಿಲ್ಲ, ತನಗಾಗುತ್ತಿರುವ ನೋವನ್ನು ತಡೆದುಕೊಂಡು ಅಲ್ಲಿ ನೆರೆದಿದ್ದ ಜನರನ್ನು ಉದ್ದೇಶಿಸಿ ತನಗೆ ಏಕೆ ಈ ಅನ್ಯಾಯಕರ ಶಿಕ್ಷೆ ವಿಧಿಸಲಾಗಿದೆ ಎಂಬುದನ್ನು ವಿವರಿಸಿದ. ಜನರ ಸ್ಪಂದನೆಯಿಂದ ಉತ್ತೇಜಿತನಾಗಿ ಬಿಷಪ್‌ಗಳ ಭ್ರಷ್ಟಾಚಾರ, ಚರ್ಚ್‌ಗಳ ಸುಲಿಗೆ ಇವುಗಳನ್ನು ವಿವರಿಸಿ ಖಂಡಿಸತೊಡಗಿದ.

ಸಿಪಾಯಿಗಳು ಅವನನ್ನು ಸುಮ್ಮನಿರಿಸಲು ಸಿಕ್ಕಾಪಟ್ಟೆ ಹೊಡೆಯತೊಡಗಿದರು. ಆಗ ಅವನು ತನ್ನ ಉಡುಪಿನಲ್ಲಿ ಅಡಗಿಸಿ ಇರಿಸಿಕೊಂಡಿದ್ದ ಪ್ಯೂರಿಟನ್ ಪಂಥದ ಸುಧಾರಣಾ ವಿಚಾರಗಳನ್ನು ಪಸರಿಸುವ ಕಿರುಪುಸ್ತಿಕೆಗಳನ್ನು, ಯಾವ "ಅಪರಾಧ"ಕ್ಕಾಗಿ ಶಿಕ್ಷೆ ವಿಧಿಸಲಾಗಿತ್ತೋ ಅದೇ ಅಪರಾಧವನ್ನು ಯಾವ ಅಂಜಿಕೆಯಿಲ್ಲದೆ, ಆ ಸಿಪಾಯಿಗಳ ಕಣ್ಣೆದುರಲ್ಲೇ ಬಹಿರಂಗವಾಗಿ ಎಸಗಿದ.

ಈ ದಿಟ್ಟತನವನ್ನು, ದಾರ್ಷ್ಟ್ಯವನ್ನು ನೋಡಿದ ಲಂಡನ್ ನಾಗರಿಕರು ಅವನಿಗೆ ಹುಟ್ಟಿನಿಂದಲೇ ಸ್ವತಂತ್ರನಾದ ಜಾನ್ (ಫ್ರೀ ಬಾರ್ನ್ ಜಾನ್) ಎಂಬ ಹೆಸರಿನಿಂದ ಕರೆಯತೊಡಗಿದರು. ಇವನಿಗೆ ಮತ್ತಷ್ಟು ಹೆಚ್ಚು ಕಠಿಣವಾದ ಶಿಕ್ಷೆ– ಕತ್ತಲ ಕೋಣೆಯಲ್ಲಿ ಒಬ್ಬಂಟಿಗನಾಗಿ ಕೈ ಕಾಲುಗಳೆರಡನ್ನೂ ಸರಪಳಿಯಲ್ಲಿ ಕಟ್ಟಿ ಹಾಕುವ ಶಿಕ್ಷೆ ವಿಧಿಸಲಾಯಿತು.

ಈ ಯುವಕನ ಹೆಸರು ಜಾನ್ ಲಿಲ್‌ಬರ್ನ್. ಒಬ್ಬ ಉದ್ಯಮಿ ಹಾಗೂ ಸಣ್ಣ ಭೂಮಾಲಕನ ಮಗ. ಅಪ್ಪ ತನ್ನ ಈ ಮಗನನ್ನು ಆಗ ತಾನೇ ಉದಯಿಸುತ್ತಿದ್ದ ಉದ್ಯಮ ಯುಗದ ಪದ್ಧತಿಯಂತೆ ಆಗ ಬಹು ದೊಡ್ಡ ಲಾಭಕರ ಉದ್ಯಮವಾಗಿದ್ದ ಲಂಡನ್‌ನ ಉಣ್ಣೆ ವಾಣಿಜ್ಯೋದ್ಯಮಿಯ ಬಳಿ ತರಬೇತಿ ಪಡೆಯಲು ಅಪ್ರೆಂಟಿಸ್ ಆಗಿ ಹಚ್ಚಿದ. ಹೀಗೆ ಲಿಲ್‌ಬರ್ನ್ ಉದ್ಯಮ ಯುಗದ ಪರಿಸರದಲ್ಲಿ ಬೆಳೆದ.



ಈ ಹೊಸ ಯುಗದಲ್ಲಿ ಅಪಾರ ಭೂಮಿ, ಲಾಭಕರ ವ್ಯವಹಾರವನ್ನು ಹೊಂದಿದ್ದ ಚರ್ಚ್‌ನ ಹಿಡಿತ, ಸುಲಿಗೆಗಳ ಬಗ್ಗೆ ಹರಡುತ್ತಿದ್ದ ಸುಧಾರಣಾ ವಿಚಾರಗಳೆಡೆಗೆ ಆಕರ್ಷಿತನಾದ. 14 ನೆಯ ಶತಮಾನದ ಬೈಬಲ್‌ನ ಇಂಗ್ಲೀಷ್ ಅನುವಾದ, ವೈಕ್ಲಿಫ್‌ನ ವಿಚಾರಗಳು, ಕ್ರಿಶ್ಚಿಯನ್ ಧರ್ಮ ಪ್ರಸಾರಕ್ಕಾಗಿ ರೋಮಿನ ಚಕ್ರವರ್ತಿಗಳ ದಮನಕ್ಕೊಳಗಾದ ಹುತಾತ್ಮರ ಕತೆಗಳು, 16 ನೆ ಶತಮಾನದ ಮಾರ್ಟಿನ್ ಲೂಥರ್, ಕಾಲ್ವಿನ್ ಮೊದಲಾದ ಪ್ರಾಟೆಸ್ಟೆಂಟ್ ಪಂಥದ ವಿಚಾರಗಳನ್ನು ಗಂಭೀರವಾಗಿ ಅಧ್ಯಯನ ಮಾಡಿದ. ಇವುಗಳ ಮುಂದುವರಿದ ಬೆಳವಣಿಗೆಯಂತಿದ್ದ ಪ್ಯೂರಿಟನ್ ಪಂಥದ ವಿಚಾರಗಳು ಅವನನ್ನು ಸೆಳೆದವು.

ಆಗ ಇಂಗ್ಲೆಂಡ್‌ನ ಚರ್ಚ್ ತನ್ನ ಮತ್ತು ರಾಜ ಪ್ರಭುತ್ವದ ಹಿಡಿತವನ್ನು ಬಳಸಿ ತನ್ನ ಧಾರ್ಮಿಕ ಆಚರಣೆ ಮತ್ತು ವಿಚಾರಗಳ ವಿರುದ್ಧದ ಈ ಯಾವ ವಿಚಾರಗಳು ಹರಡುವುದನ್ನು ಸಹಿಸುತ್ತಿರಲಿಲ್ಲ. ಬಹಳ ಕಠಿಣ ಶಿಕ್ಷೆಗೆ ಗುರಿ ಮಾಡುತ್ತಿದ್ದರು. ಲಿಲ್‌ಬರ್ನ್‌ಗೆ ನೀಡಿದ ಶಿಕ್ಷೆ ಒಂದು ಸ್ಯಾಂಪಲ್.

ಈ ದಿಟ್ಟ ಯುವಕ ಲಿಲ್‌ಬರ್ನ್ ತನ್ನ ಮೇಲೆ ಎಸಗಲಾದ ಕ್ರೌರ್ಯದಿಂದ, ಸೆರೆಮನೆ ವಾಸದಿಂದ ಎದೆಗುಂದಲಿಲ್ಲ. ಬದಲಾಗಿ ಸೆರೆಮನೆಯಿಂದಲೇ ಬಹು ದೊಡ್ಡ ದಾಳಿ ಆರಂಭಿಸಿದ. ಇಲ್ಲಿಯವರೆಗೆ ಬೇರೆಯವರು ಬರೆದ ಧಾರ್ಮಿಕ ವಿಚಾರಗಳ ಪುಸ್ತಿಕೆಗಳನ್ನು ಪ್ರಸಾರ ಮಾಡುತ್ತಿದ್ದವನು ತಾನೇ ಕರಪತ್ರ ಮತ್ತು ಕಿರುಪುಸ್ತಿಕೆಗಳನ್ನು ಬರೆಯತೊಡಗಿದ. ಒಂದಾದ ಮೇಲೊಂದರಂತೆ ಮೂರು ಕಿರುಪುಸ್ತಿಕೆಗಳನ್ನು ಪ್ರಕಟಿಸಿದ.

ಆದರೆ ಧಾರ್ಮಿಕ ವಿಚಾರಗಳ ಬಗೆಗೆ, ಇಂಗ್ಲೆಂಡ್ ಚರ್ಚ್‌ನ ವಿಚಾರಗಳಿಗಿಂತ ಭಿನ್ನವಾದ ವಿಚಾರಗಳ ಬಗೆಗಿನ ಪುಸ್ತಿಕಗಳಲ್ಲ. ತನಗೆ ವಿಧಿಸಿದ ಶಿಕ್ಷೆಯ ಹಾಗೂ ಎಸಗಿದ ಕ್ರೌರ್ಯದ ಬಗ್ಗೆ, ತಾನು ಜನರನ್ನು ಉದ್ದೇಶಿಸಿದ ಮಾತುಗಳ ಬಗ್ಗೆ ವಿವರಿಸಿದ ಕರಪತ್ರಗಳವು.

ಇದು ಮೇಲ್ನೋಟಕ್ಕೆ ಕಾಣುವಂತೆ ಪುಟ್ಟಂಪೂರ ರಾಜಕೀಯದ ಪ್ರಕಟಣೆಗಳಲ್ಲವೇ? ಹೀಗೆ ಲಿಲ್‌ಬರ್ನ್‌ನ ಕರಪತ್ರಗಳ, ಕಿರುಪುಸ್ತಿಕೆಗಳ ಮೂಲಕ ಇಂಗ್ಲೆಂಡ್‌ನ ಜನರಿಗೆ ಅಲ್ಲಿಯ ನ್ಯಾಯದಾನ ವಿಧಾನ, ಹಿಂಸೆ ದಮನಗಳ ಬಗ್ಗೆ ಜನರಿಗೆ ತಿಳಿಯಪಡಿಸಿ ಎಚ್ಚರಿಸುವ ರಾಜಕೀಯ ಕಾರ್ಯ ಆರಂಭವಾಯಿತು.

ಒಂದು ಪುಸ್ತಿಕೆಯ ತಲೆಬರಹ, "ಕಾಡು ಮೃಗದ ಕೃತ್ಯ" ಎಂದಿತ್ತು. ಮತ್ತೊಂದು ಪುಸ್ತಿಕೆ, ಇಂಗ್ಲೆಂಡ್‌ನ "ಚರ್ಚ್‌ಗಳಿಂದ ಹೊರ ಬನ್ನಿ" ಎಂದು ಜನರಿಗೆ ಕರೆ ಕೊಟ್ಟಿತು. ಇದರಲ್ಲಿ "ಬದುಕಿದರೂ ಸತ್ತರೂ ನಾನು ನನ್ನ ಅಭಿಪ್ರಾಯವನ್ನು ದಿಟ್ಟತನದಿಂದ ಮುಂದಿಡುವೆ" ಎಂದು ಘೋಷಿಸಿದ. ಈ ಮಾತಿಗೆ ಬದ್ಧನಾಗಿ ಹಲವಾರು ಬಾರಿ ಜೈಲುವಾಸ, ದೈಹಿಕ ಹಿಂಸೆ, ಹಲವಾರು ಕಷ್ಟಗಳನ್ನು ಎದುರಿಸಿದ.

ರಾಜ ಪ್ರಭುತ್ವದಲ್ಲಿ, 1637 ರಲ್ಲಿ ಇದೆಲ್ಲ ನಡೆದುದು ಎಂಬುದನ್ನು ಗಮನಿಸಿದರೆ ಈ ಯುವಕನ ವ್ಯಕ್ತಿತ್ವದ ಗಟ್ಟಿತನದ ಅರಿವಾಗುತ್ತದೆ.

1641 ರವರೆಗೂ ನಾಲ್ಕು ವರ್ಷಗಳ ಕಾಲ ಹೀಗೆ ಜೈಲಿನಲ್ಲಿ ಕೊಳೆಯಬೇಕಾಯಿತು. ರಾಜನಿಗೂ ಪಾರ್ಲಿಮೆಂಟಿನ ಪರ ಶಕ್ತಿಗಳಿಗೂ ಯುದ್ಧ ಆರಂಭವಾದ ಮೇಲೆ ಪಾರ್ಲಿಮೆಂಟ್ ಅವನನ್ನು ಬಿಡುಗಡೆ ಮಾಡಿತು.

ಈ ಯುವಕ ರಾಜನ ಸೈನ್ಯವನ್ನು ಸೋಲಿಸಲು ಪಾರ್ಲಿಮೆಂಟ್ ಪರ ಸೈನ್ಯಕ್ಕೆ ಸೇರಿ ಹೋರಾಡಿದ. ಕ್ಯಾಪ್ಟನ್ ಪದವಿಯಿಂದ ಲೆಫ್ಟಿನೆಂಟ್ ಕರ್ನಲ್ ಸ್ಥಾನವನ್ನು ಪಡೆದ.

ಪಾರ್ಲಿಮೆಂಟ್‌ನಲ್ಲಿ ಇಂಗ್ಲೆಂಡ್‌ನ ಚರ್ಚ್‌ಗೆ ವಿರುದ್ಧವಾಗಿ ಹಲವು ಕ್ರಿಶ್ಚಿಯನ್ ಪಂಥಗಳಲ್ಲಿ ಪ್ರೆಸ್ಬಿಟೇರಿಯನ್ ಎಂಬ ಪಂಥ ಬಲವಾಗಿತ್ತು. ಅವರು ಪಾರ್ಲಿಮೆಂಟ್‌ನ ಪರವಾದ ಸೈನ್ಯದ ಸೈನಿಕರು ಎಲ್ಲರೂ ಒಂದೇ ರೀತಿಯ ಧಾರ್ಮಿಕ ವಿಚಾರಗಳನ್ನು ಅನುಸರಿಸುತ್ತೇವೆಂಬ ಪ್ರತಿಜ್ಞೆಯನ್ನು ಕೈಗೊಳ್ಳಬೇಕಾಗಿತ್ತು. "ಇಂತಹ ಧಾರ್ಮಿಕ ಹೇರಿಕೆಯ ಆಳ್ವಿಕೆಗಾಗಿ ಹೋರಾಡುವುದಕ್ಕಿಂತ ನಾನು ಗೆಣಸು, ಕ್ಯಾರೆಟ್ ಅಗೆದು ಬದುಕಲು ಸಿದ್ಧ" ಎಂದು ಹೇಳಿ ಅದನ್ನು ಲಿಲ್‌ಬರ್ನ್ ಸ್ವೀಕರಿಸಲು ನಿರಾಕರಿಸಿದ.

ಲಿಲ್‌ಬರ್ನ್ ಈಗ ನಾಗರಿಕನಾಗಿ (ಸೈನ್ಯದ ಹೊರಗಿದ್ದು) ಆಡಳಿತಗಾರರೊಡನೆ ಪುಸ್ತಿಕೆಗಳ ಮೂಲಕ ತನ್ನ ಸಂಘರ್ಷ ಮುಂದುವರೆಸಿದ. ಆ ಕಾರಣಕ್ಕಾಗಿ ಮತ್ತೆ ಮತ್ತೆ ಬಂಧನಕ್ಕೊಳಗಾದ. ಎಂತಹ ಬಿಗಿ ಕಾವಲಿನಲ್ಲಿಯೂ ಜೈಲಿನೊಳಗಡೆಯಿಂದಲೇ ಪುಸ್ತಿಕೆಗಳನ್ನು ಬರೆಯುತ್ತಾ ಪ್ರಕಟಿಸುತ್ತಾ ವಿವಿಧ ಆಳುವ ವರ್ಗಗಳ ಮುಂದೆ ಸವಾಲುಗಳನ್ನು ಎಸೆಯುತ್ತಾ ಹೋದ ಲಿಲ್‌ಬರ್ನ್.

ಎಲ್ಲ ಮಾನವರೂ ಸಮಾನರು, ಎಲ್ಲ ಕಾನುನುಗಳೂ ಜನ ಭಾಷೆಯಲ್ಲಿರಬೇಕು

ರಾಜನಿಗೆ ಸೋಲುಣಿಸುತ್ತ ಪಾರ್ಲಿಮೆಂಟಿನ ಕೈ ಮೇಲಾದಂತೆ ಲಿಲ್‌ಬರ್ನ್‌ಗೆ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಅಡ್ಡಿಯಾಗಿರುವುದು ರಾಜ ಪ್ರಭುತ್ವ ಮಾತ್ರವಲ್ಲ ಪಾರ್ಲಿಮೆಂಟ್‌ನ ಒಳಗಿರುವ ಲಾರ್ಡ್‌ಗಳೆಂಬ ಸಾಮಂತರು, ಮಹಾ ಜಹಗೀರುದಾರರುಗಳು, ದೊಡ್ಡ ಉದ್ಯಮಿಗಳು ಎಂಬುದು ಸ್ಪಷ್ಟವಾಗುತ್ತಾ ಹೋಯಿತು. ರಾಜ ಪಾರ್ಲಿಮೆಂಟ್‌ನ ಮೇಲೆ ಯುದ್ಧ ಘೋಷಿಸಿದಾಗ ಜನ ಬೆಂಬಲ ಪಡೆಯಲು ಏನೆಲ್ಲ ಭರವಸೆ ನೀಡಲಾಗಿತ್ತೋ ಅದನ್ನೆಲ್ಲ ಅದೇ ಪಾರ್ಲಿಮೆಂಟ್‌ನ ಮಹಾನರು ಕೈ ಬಿಡುತ್ತಿರುವುದು ಎದ್ದು ಕಾಣಲಾರಂಭವಾಯಿತು.

ಆಗ ಲಿಲ್‌ಬರ್ನ್" ಸ್ವಾತಂತ್ರ್ಯದ ಹೆಸರಿನಲ್ಲಿ ಜನರನ್ನು ಯುದ್ಧಕ್ಕೆ ಆಹ್ವಾನಿಸಿ ಈಗ ಹೊಸ ದಬ್ಬಾಳಿಕೆಯನ್ನು ಸ್ಥಾಪಿಸಲಾಗಿದೆ. ಸಂಸದರು ಭೋಗ ಭಾಗ್ಯಗಳಲ್ಲಿ ಮುಳುಗಿದ್ದಾರೆ. ಸಾವಿರ ಸಾವಿರ ಜನ ಊಟ ಊಟ ಎಂದು ಕೂಗುತ್ತಿದ್ದಾರೆ ಎಂದು ಬರೆದ. ಅವನ ಲಕ್ಷ್ಯ ಸಾಮಾಜಿಕ ಮತ್ತು ಆಸ್ತಿಯ ಅಸಮಾನತೆಯತ್ತ ಹೊರಳಿತು.

"ಸ್ವಾತಂತ್ರ್ಯವನ್ನು ದೋಚುವ ರಾಜ, ಪಾರ್ಲಿಮೆಂಟ್ ನ ಎಲ್ಲ ಪ್ರಯತ್ನಗಳ ವಿರುದ್ಧ ಇಂಗ್ಲೀಷರ ಜನ್ಮ ಸಿದ್ಧ ಹಕ್ಕಿನ ಸಮರ್ಥನೆ " "ಸ್ವತಂತ್ರ ಮನುಷ್ಯನ ಸ್ವಾತಂತ್ರ್ಯ" ಮೊದಲಾದ ಎಂಬ ಪುಸ್ತಿಕೆಗಳಲ್ಲಿ ಪ್ರಜಾಪ್ರಭುತ್ವದ ಹೊಸ ಹೊಸ ತತ್ವಗಳನ್ನು ರೂಪಿಸಿದರು.

"ಪ್ರತಿಯೊಬ್ಬ ಮನುಷ್ಯನಿಗೂ ದೇವರು ಕಾರಣವನ್ನು ಅನ್ವೇಷಿಸುವ ಸಾಮರ್ಥ್ಯ ನೀಡಿದ್ದಾನೆ. ಆಗಿನಿಂದ ಪ್ರತಿಯೊಬ್ಬ ಹೆಣ್ಣೂ ಗಂಡೂ ಕೂಡಾ ನಿರ್ದಿಷ್ಟವಾಗಿ ಪ್ರಕೃತಿ ಸಹಜವಾಗಿ ಸಮಾನರು. ಅಧಿಕಾರ, ಘನತೆ, ಗಾಂಭೀರ್ಯ ಇವುಗಳೆಲ್ಲದರಲ್ಲಿ ಸಮಾನರು. ಅವರಲ್ಲಿ ಯಾರೊಬ್ಬರೂ ಮತ್ತೊಬ್ಬರ ಮೇಲೆ ಯಾವುದೇ ಆಡಳಿತಾಧಿಕಾರ, ನ್ಯಾಯಾಂಗದ ಅಧಿಕಾರ ಇವುಗಳ ಕಾರಣವಾಗಿ ಅಧಿಕಾರ ಹೊಂದಿಲ್ಲ. ಅಧಿಕಾರ ಚಲಾಯಿಸುವಂತಿಲ್ಲ.

ಇಂತಹ ಅಧಿಕಾರವನ್ನು ಎಷ್ಟರಮಟ್ಟಿಗೆ ಸ್ವಇಚ್ಛೆಯಿಂದ ಪರಸ್ಪರ ಅನುಕೂಲಕ್ಕಾಗಿ ಬಿಟ್ಟುಕೊಟ್ಟಿದ್ದಾರೋ ಅಷ್ಟು ಮಾತ್ರ ಅಧಿಕಾರವನ್ನು ಹೊಂದಿರುತ್ತಾರೆ. ಹಾಗೆ ನೀಡದ ಅಧಿಕಾರವನ್ನು ಯಾವುದೇ ಧಾರ್ಮಿಕ ಅಥವಾ ಆಡಳಿತದ ಸಂಸ್ಥೆ ಅವರ ಮೇಲೆ ಚಲಾಯಿಸುವುದು ಪ್ರಕೃತಿ ವಿರುದ್ಧ, ಅಕಾರಣ, ಪೈಶಾಚಿಕ, ದಬ್ಬಾಳಿಕೆ" ಎಂದು ಸಾರಿದರು.

ಮುಂದೆ ಸಾಮಾಜಿಕ ಒಪ್ಪಂದ ಎಂದು ರೂಸೋ ಮೊದಲಾದ ರಾಜಕೀಯ ತತ್ವಶಾಸ್ತ್ರಜ್ಞರು ಕರೆದ ಜನತೆಯ ಸಾರ್ವಭೌಮ ಅಧಿಕಾರದ ಮೊದಲ ಸ್ಪಷ್ಟ ನೀರೂಪಣೆ ಇದು.

ಇವೇ ಪುಸ್ತಿಕೆಗಳಲ್ಲಿ ಲಿಲ್‌ಬರ್ನ್

ಪ್ರತಿ ಕಾನೂನೂ ಜನ ಭಾಷೆಯಲ್ಲಿರಬೇಕು. ಪ್ರತಿಯೊಬ್ಬರೂ ಅದನ್ನು ಅರ್ಥ ಮಾಡಿಕೊಳ್ಳಲು, ಮಸೇಚ್ಛೆಯ ಚಲಾವಣೆ, ಸ್ವಾತಂತ್ರ್ಯ ಮೇಲಿನ ಆಕ್ರಮಣಗಳಿಂದ ತಮ್ಮನ್ನು ತಾವು ಸಂರಕ್ಷಿಸಿಕೊಳ್ಳುವುದು ಸಾಧ್ಯವಾಗಬೇಕು. ವಕೀಲರು ಅವುಗಳನ್ನು ತಿರುಚುವುದಕ್ಕೆ, ಮರೆಮಾಚುವುದಕ್ಕೆ ಅವಕಾಶ ಇರಬಾರದು

ಚರ್ಚ್‌ಗಳ ತೆರಿಗೆ ಸುಲಿಗೆ ನಿಲ್ಲಬೇಕು

ಸರ್ಕಾರ ಜನರ ಮೇಲೆ ತೆರಿಗೆ ಹಾಕುವುದಕ್ಕೆ ಬದಲಾಗಿ ಭೂಮಿಯ ಒಡೆತನದ ಆಧಾರದ ಮೇಲೆ ತೆರಿಗೆ ಹಾಕಬೇಕು.


ಜನರ ತುರ್ತು ಅಗತ್ಯಗಳಾದ ಆಹಾರ, ಉಡುಪುಗಳ ವ್ಯವಹಾರವನ್ನು ಕೆಲವರಿಗೇ ಏಕಸ್ವಾಮ್ಯವಾಗಿ ಕೊಡಬಾರದು.

ಪ್ರತಿ ವರ್ಷವೂ ಸಂಸತ್ತಿಗೆ ಚುನಾವಣೆ ನಡೆಯಬೇಕು.

ಹೀಗೆ ಜನ ಸಾಮಾನ್ಯರ ಹಲವು ಹಕ್ಕುಗಳನ್ನು ಮಂಡಿಸಿದರು.

ಈ ಪುಸ್ತಿಕೆಗಳೂ, ಅವುಗಳಲ್ಲಿನ ವಿಚಾರಗಳು ಲಂಡನ್ ನ ಒಳಗಿನ ಕುಶಲಕೆಲಸಗಾರರನ್ನು, ಸಣ್ಣ ವ್ಯಾಪಾರಿಗಳು, ಉದ್ದಿಮೆದಾರರನ್ನು ಸೆಳೆಯಿತು. ಈ ಜನರೆಲ್ಲಾ ಲಿಲ್‌ಬರ್ನ್ ಅನ್ನು ಜೈಲಿಗೆ ಹಾಕಲು ಸೆಳೆದೊಯ್ಯುವಾಗೆಲ್ಲಾ ದೊಡ್ಡ ಅವನ ಹಿಂದೆಯೇ ಹಿಂಬಾಲಿಸುತ್ತಿದ್ದರು. ಅವನ ಬಿಡುಗಡೆಗಾಗಿ ಎರಡು ಮೂರು ಸಾವಿರ ಜನ ಸಹಿ ಮಾಡಿದ ಅರ್ಜಿಗಳು ಪಾರ್ಲಿಮೆಂಟ್‌ಗೆ ಸಲ್ಲಿಸುತ್ತಿದ್ದರು.

ಈ ಸಂದರ್ಭದಲ್ಲಿ ಅವರಂತೆಯೇ ಚಿಂತಿಸುವ ವಿಲಿಯಂ ವಾಲ್ವಿನ್, ಓವರ್ಟನ್ ಎಂಬ ಇಬ್ಬರು ಜೊತೆಗಾರರು ದೊರಕಿದರು. ಪುಟ 4 ಕ್ಕೆ





ಕೋಮುವಾದದ ನಿಗಿನಿಗಿ ಕೆಂಡವಾದ ಕರಾವಳಿಯನ್ನು ಬಿಡಿಸಬೇಕು ಯಾರು?

ಎದೆ ಝಲ್ಲೆನ್ನುವ ಸಂಗತಿಗಳು ಮತ್ತೆ ಮತ್ತೆ ಜರುಗುತ್ತಿವೆ. ಕರಾವಳಿಯನ್ನು ತಮ್ಮ ಕೋಮುವಾದೀ ಪ್ರಯೋಗಶಾಲೆಯನ್ನಾಗಿಸಿ ಕೊಂಡವರಿಗೆ ಈಗ ಅದನ್ನು ತಮ್ಮ ರಂಗಸ್ಥಳ ಮಾಡಿಕೊಂಡಿದ್ದಾರೆ. ರಾಜ್ಯದ ಅತ್ಯಂತ ಬುದ್ಧಿವಂತರ? ವಿದ್ಯಾವಂತರ? ಜಿಲ್ಲೆ ಎನಿಸಿಕೊಂಡು ಮುಂದುವರೆದ ಜಿಲ್ಲೆ ಈಗ ಕೋಮುವಾದ, ಮತಾಂಧತೆಯಲ್ಲಿ ಎಲ್ಲರನ್ನೂ ಹಿಂದಿಕ್ಕಿ ನಾಗಾಲೋಟದಲ್ಲಿ ಓಡುತ್ತಿದೆ.

ವಿಮಲಾ ಕೆ.ಎಸ್.

ವ್ಯಾಪಾರ ವಹಿವಾಟುಗಳು ಮತ್ತು ನೈಜ ಜೀವನ ಕ್ರಮದ ಭಾಗವಾಗಿ ಹಿಂದೊಮ್ಮೆ ಎಲ್ಲರೂ ಸಹಜೀವನ ನಡೆಸುತ್ತಿದ್ದ ಜಿಲ್ಲೆ ಈಗ ಬಡವರು, ದುಡಿದು ತಿನ್ನುವವರ ಪಾಲಿಗೆ ದುಃಸ್ವಪ್ನವಾಗುವತ್ತ ಹೊರಟಿದೆ.

80ರ ದಶಕದಲ್ಲಿ ಮಂಗಳೂರು ನಗರದಲ್ಲಿ ಇದ್ದ ನನಗೆ, ಯಾವತ್ತೂ ಆ ನೆಲ ಒಂದು ಅಸುರಕ್ಷತೆಯ ತಾಣ ಎಂದು ಅನಿಸಿರಲೇ ಇಲ್ಲ. ಬೆಂಗಳೂರಿನಿಂದ ರಾತ್ರಿ ಹೊರಟು ಮಂಗಳೂರು ತಲುಪಿ, ಬೆಳಕು ಹರಿಯುವ ಮುಂಚೆಯೇ ಯಾವ ಅಂಜಿಕೆ ಅಳುಕುಗಳಿಲ್ಲದೇ, ಕಂಕನಾಡಿ ಬಸ್ ಸ್ಟ್ಯಾಂಡ್‌ನಿಂದ ನಿರಾತಂಕವಾಗಿ ನಡೆದು ಹಾಸ್ಟಲ್‌ಗೆ ಹೋಗುತ್ತಿದ್ದ ಆ ಮಂಗಳೂರು ಹೀಗಿರಲಿಲ್ಲ ಎಂದರೆ ಹುಬ್ಬೇರುತ್ತಾ?

90ರ ದಶಕದಲ್ಲಿ ಹೆಚ್ಚು ಮುನ್ನೆಲೆಗೆ ಬಂದ ಹಲವು ಘಟನೆಗಳು ನಿಧಾನವಾಗಿ ಕೋಮುವಿಭಜನೆಯನ್ನು ಗಾಢವಾಗಿಸತೊಡಗಿದ್ದು ಮರೆಯಲಾಗದು. ಚರ್ಚ್ ಮೇಲಿನ ಧಾಳಿ, ಅಂತರ್‌ಧರ್ಮೀಯ ಯುವಕ ಯುವತಿಯರ ಸ್ನೇಹವನ್ನೂ ಸಹಿಸದೇ ಶುರುವಿಟ್ಟುಕೊಂಡ ಧಾಳಿಗಳು, ಪಿಲಿಕುಳದಲ್ಲಿ ಜೋಡಿಗಳನ್ನು ಯುವಕರ ಗುಂಪೊಂದು ಹಿಂಸೆ ಮಾಡಿದ್ದು, ಬಸ್ಸಿನಲ್ಲಿ ಅಕ್ಕಪಕ್ಕ ಕುಳಿತಿದ್ದರೆಂದೋ, ಅಥವಾ ಸೀಟು ಸಿಗದೇ ನಿಂತ ಗೆಳೆಯನ ಪುಸ್ತಕಗಳನ್ನು ಹಿಡಿದುಕೊಂಡಳೆಂದೋ, ಬಸ್ಸುಗಳನ್ನು ಅಡ್ಡಗಟ್ಟಿ ದೌರ್ಜನ್ಯ ನಡೆಸಿದ ಘಟನೆಗಳು ವರದಿಯಾಗತೊಡಗಿದಾಗ ಬೆಚ್ಚಿ ಬೀಳುತ್ತಿದ್ದೆವು. ಆ ನಂತರ ಪಬ್ ದಾಳಿ, ಹೋಂ ಸ್ಟೇ ಧಾಳಿಯಾಗಿ ಮತಾಂಧತೆ, ಕೋಮುವಾದ ತನ್ನ ಬೇರು ಬಿಳಿಲುಗಳಾಗುವ ಮಟ್ಟಕ್ಕೆ ಬೆಳೆದುಬಿಟ್ಟಿತು. ಇವೆಲ್ಲವನ್ನೂ ನೈತಿಕ ಪೋಲೀಸ್ ಗಿರಿ ಎಂದು ಕರೆಯತೊಡಗಲಾಯಿತು.

ಈಗ ಅಂದು ನೆಟ್ಟ ವಿಷದ ಬೀಜ ಬಲಿಯತೊಡಗಿದೆ. ಜಿಲ್ಲೆಯ ಶ್ರಮಜೀವಿಗಳ ಬದುಕು ದುರ್ಭರವಾಗುತ್ತ ಹೋದಂತೆಲ್ಲ, ತಮ್ಮ ರಾಜಕೀಯದ ಬಲವರ್ಧನೆಗಾಗಿ ಭಾರತೀಯ ಜನತಾ ಪಕ್ಷ (ಬಿಜೆಪಿ) ಕೋಮುವಾದವನ್ನೇ ಆಯುಧವಾಗಿ ಬಳಸಲು ಹೊಂಚು ಹಾಕಿದ್ದು ಹಿಂದುಳಿದ ವರ್ಗಗಳ, ಬಡ ಕುಟುಂಬಗಳ ಹದಿಹರೆಯದ ಯುವಕರನ್ನು. ಇಂದೀಗ ಅವರೆಲ್ಲ ಸಿಕ್ಕ ಸಿಕ್ಕಲ್ಲಿ ಕತ್ತಿ ಝಳಪಿಸುತ್ತ, ಒಂದು ಕಾಲದಲ್ಲಿ ಅನ್ಯೋನ್ಯವಾಗಿ ಬದುಕುತ್ತಿದ್ದ ಸಾಮರಸ್ಯದ ಬೇರುಗಳನ್ನು ಕಡಿದು ನಾಶ ಮಾಡುವ ಕೋಮುವಿಷ ಹರಡುವ ಕಾಲಾಳುಗಳಾಗಿ ಮಾರ್ಪಟ್ಟಿದ್ದಾರೆ.

ಫಕ್ಕನೆ ನೆನಪಾಗುತ್ತದೆ. 2000ದ ದಶಕದಲ್ಲಿ ಮಹಿಳಾ ಸಂಘಟನೆಯ ಕಾರ್ಯನಿಮಿತ್ತ ಮಂಗಳೂರಿಗೆ ಹೋದಾಗ, ಅಲ್ಲಿನ ಗೆಳತಿಯರು ಕಣ್ಣೀರು ತುಂಬಿ ಹೇಳುತ್ತಿದ್ದ ಮಾತು. ನನ್ನ ಮಗ ಪುಂಡರ ಗುಂಪಿನ ಭಾಗವಾಗುತ್ತಿದ್ದಾನೆ. ಮನೆಯ ಮೇಲೆ ಭಗವಾಧ್ವಜ ಹಾರಿಸಲು ಹಣ ಕೇಳ್ತಾನೆ. ಕೊಡುವುದಿಲ್ಲ ಎಂದರೆ ಹೊಡೀಲಿಕ್ಕೆ ಬರ್ತಾನೆ.. ಎಂತ ಮಾಡೂದು..?

ಕಾಂಗ್ರೆಸ್ ಪಕ್ಷದ ಧುರೀಣರು ಹಣವೂ ಕೊಟ್ಟು...

ಹಾಗೆಯೇ ಅಂದು ಸಾಕಷ್ಟು ಜನಪ್ರತಿನಿಧಿಗಳನ್ನು ಹೊಂದಿದ್ದ ಕಾಂಗ್ರೆಸ್ ಪಕ್ಷದ ಧುರೀಣರು ಹಿಂದೂ ಸಮಾಜೋತ್ಸವ, ವಿರಾಟ್ ಹಿಂದೂ ಸಮಾಜೋತ್ಸವಗಳ ಭಾಗವಾಗಿ, ಹಣವೂ ಕೊಟ್ಟು, ಹೆಸರೂ ಕೊಟ್ಟು ತಾವೇ ಕೈಯ್ಯಾರೆ ಸಂಘಿಗಳ ಕೈಗೆ ಜಿಲ್ಲೆಯನ್ನು ದಾನವಾಗಿ ಕೊಟ್ಟಿದ್ದು ಕಡಿಮೆ ಅಪರಾಧವಲ್ಲ. ಮತಗಳಿಕೆಯ ರಾಜಕಾರಣವಾಗಿ ಹಿಂದೂ ಸಮಾಜೋತ್ಸವಕ್ಕೆ ಬೆಂಬಲಿಸಿದರೆ, ಹಿಂದೂಗಳ ಮತಗಳು ತಮಗೆ ಸಿಗುತ್ತವೆ ಎಂದು ಭ್ರಮೆಗೊಂಡವರು. ಸಂಘಿಗಳು ಹೇಳುವ ಹಿಂದುತ್ವ ಮತ್ತು ಹಿಂದೂ ಧರ್ಮಗಳ ಮಧ್ಯೆ ವ್ಯತ್ಯಾಸಗಳನ್ನು ಗುರುತಿಸದಿರುವಷ್ಟು ಮತಿಹೀನತೆಯ ಪ್ರದರ್ಶನವಿಂದು ಇಡೀ ಜಿಲ್ಲೆಯನ್ನು ಕೋಮುವಾದಿಗಳ ಮತ್ತು ಕ್ರಿಯೆಗೆ ಪ್ರತಿಕ್ರಿಯೆಯಾಗಿ ಹಿಂಸೆಗೆ, ಪ್ರತಿಹಿಂಸೆಗೆ ಇಳಿಯುವ ಮತೀಯವಾದಿಗಳ ಕುಸ್ತಿಯ ತಾಣವನ್ನಾಗಿ ಮಾಡಿದೆ. ಇದರ ಫಲವಾಗಿ ದಕ್ಷಿಣ ಕನ್ನಡದಲ್ಲಿ ಮನುಷ್ಯರ ಹೆಣಗಳು ಬೀದಿಗಳಲ್ಲಿ ಬೀಳುತ್ತಿವೆ.

ರೌಡಿ ಶೀಟರ್ ಕೊಲೆಯನ್ನೂ ರಾಜಕೀಯಕ್ಕೆ ಬಳಸಿಕೊಂಡ ಬಿಜೆಪಿ

ಈ ಮೊದಲು ವಿವಿಧ ಪ್ರಕರಣಗಳಲ್ಲಿ ಭಾಗಿಯಾದ ಆರೋಪ ಇರುವವರು, ರೌಡಿ ಶೀಟರ್ ಎಂದು ಹೇಳಲ್ಪಡುವ, ಫಾಸಿಲ್ ಮತ್ತು ದಲಿತ ಯುವಕ ಕೀರ್ತಿ ಎಂಬ ಇಬ್ಬರನ್ನು ಕೊಲೆ ಮಾಡಿದ ಆರೋಪಿ ಸುಹಾಸ್ ಶೆಟ್ಟಿಯ ಕೊಲೆ ನಡೆಯುತ್ತದೆ. ಕೊಲೆಯಂತಹ ಹೇಯ ಕೃತ್ಯ ಯಾರು ಮಾಡಿದರೂ ನೆಲದ ಕಾನೂನಿನ ಅನ್ವಯ ಶಿಕ್ಷೆಯಾಗಬೇಕು. ಆದರೆ ದಕ್ಷಿಣ ಕನ್ನಡದ ಭಾರತೀಯ ಜನತಾ ಪಕ್ಷ ಮತ್ತು ಅದರ ಅಂಗಸಂಸ್ಥೆಗಳು ಅದನ್ನೂ ರಾಜಕೀಯಕ್ಕೆ ಬಳಸಿಕೊಂಡರು. ಅಹಿತಕರ ಘಟನೆಗಳು ನಡೆದರೆ ಸ್ಥಳೀಯ ಜನಪ್ರತಿನಿಧಿಗಳು ಧಾವಿಸಿ ಬಂದು ಅದನ್ನು ತಡೆಯಬೇಕು. ಜನರಲ್ಲಿ ನ್ಯಾಯದ ಪರವಾಗಿ ವಿಶ್ವಾಸ ಮೂಡಿಸಬೇಕು. ಸರಕಾರ, ಅಧಿಕಾರದ ಮೇಲೆ ಪ್ರಭಾವ ಬೀರಿ ನ್ಯಾಯಕ್ಕಾಗಿ ಒತ್ತಾಯಿಸಬೇಕು. ಆದರೆ ಇಲ್ಲಿ ನಡೆಯುವುದೇ ಬೇರೆ. ಕೊಲೆಯಾದವನನ್ನು ಹಿಂದೂ ಎಂದು ಹೈಪ್ ಕೊಟ್ಟು, ಸಾವಿರಾರು ಜನರನ್ನು ಸೇರಿಸಿ, ತಾವೇ ಅದರ ಮುಂದಾಳತ್ವ ವಹಿಸಿ, ಪ್ರಚೋದನಕಾರಿ ಭಾಷಣ ಮಾಡಿ ಜನರನ್ನು ಭಾವೋದ್ರೇಕಗೊಳಿಸುವ ಕ್ಷುಲ್ಲಕ ರಾಜಕಾರಣವನ್ನು ಮಾಡಿದ್ದು. ಇದಕ್ಕೆ ಸ್ಥಳೀಯ ಪೋಲಿಸರ ಬೆಂಗಾವಲು ಬೇರೆ!

ಹಾಡುಹಗಲೇ ಕೊಚ್ಚಿ ಕೊಲೆ ಮಾಡುವಷ್ಟು ದಾರ್ಷ್ಟ್ಯ ಬಂತೆಲ್ಲಿಂದ?

ಇದರ ಮುಂದುವರೆದ ಭಾಗವಾಗಿ ಬಡ ಕುಟುಂಬದ ಮಾನಸಿಕ ಕ್ಷೋಭೆಯಲ್ಲಿದ್ದ ಕೂಲಿಕಾರ, ವಲಸಿಗ ಅಶ್ರಫ್‌ನನ್ನು ಸುಮಾರು 30 ಜನರ ಗುಂಪೊಂದು ಹೊಡೆದು ಕೊಲ್ಲುತ್ತದೆ. ಯಥಾಪ್ರಕಾರ ಪೋಲಿಸರ ನಿರ್ಲಕ್ಷ್ಯ. ನಂತರವೂ ಮುಸ್ಲಿಂ ಸಮುದಾಯದ ನಾಲ್ಕೈದು ಜನರಿಗೆ ಚೂರಿ ಇರಿತವಾಗಿದೆ. ಈಗ ಇನ್ನೊಂದು ಕೊಲೆ. ಈತನೂ ಕೂಲಿ ಕಾರ್ಮಿಕ. ಬೆಳಿಗ್ಗೆ ಎದ್ದು ಮನೆಯಿಂದ ಕೂಲಿ ಕೆಲಸಕ್ಕೆ ಬಂದ ಇಬ್ಬರನ್ನು ಹಾಡುಹಗಲೇ ಕೊಚ್ಚಿ ಕೊಲೆ ಮಾಡುವಷ್ಟು ದಾರ್ಷ್ಟ್ಯ ಬಂತೆಲ್ಲಿಂದ? ಎರಡೇ ದಿನ ಮೊದಲು ಬಜ್ಪೆಯಲ್ಲಿ ನಡೆದ ಬಹಿರಂಗ ಸಭೆಯೊಂದರಲ್ಲಿ ಜಾಗರಣ ವೇದಿಕೆಯ ಲೀಡರ್ 'ಪ್ರತೀಕಾರ ನಡೆಸಿಯೇ ಸಿದ್ಧ' ಎಂದು ಕೊಡುವ ಕರೆಗೆ ಅಂಗೀಕಾರವೆಂಬಂತೆ, ಚಪ್ಪಾಳೆ ಹೊಡೆದವರು ದಕ್ಷಿಣ ಕನ್ನಡ ಜಿಲ್ಲೆಯ ಬಹುತೇಕ ಬಿಜೆಪಿ ಶಾಸಕರು.

ಹೆಸರಿಗೆ ಕಾಂಗ್ರೆಸ್ ಸರಕಾರ. ಆದರೆ...

ಹೀಗೆ ದ್ವೇಷದ ಕಿಚ್ಚು ಹೊತ್ತಿಸಿ, ಯಾರಿಂದಲೋ ಯಾರನ್ನೋ ಹತ್ಯೆ ಮಾಡಿಸಿ, ಅವರನ್ನು ಜೈಲಿಗೆ ಕಳಿಸಿ, ಇವರು ಸುಖವಾಗಿ ಅಧಿಕಾರವನ್ನು ಅನುಭವಿಸಿಕೊಂಡಿರುವ ದುಃಸ್ಥಿತಿಗೆ ದಕ್ಷಿಣ ಕನ್ನಡ ಜಿಲ್ಲೆ ಬಂದು ನಿಂತಿದೆ. ಸುಹಾಸ್ ಶೆಟ್ಟಿಯ ಕೊಲೆಯಾದಾಗ ಮಂಗಳೂರು ಬಂದ್ ಕರೆ ನೀಡಲಾಗುತ್ತದೆ. ದ್ವೇಷ ಭಾಷಣ ನಡೆಯುತ್ತದೆ. ಬೃಹತ್ ಮೆರವಣಿಗೆ ನಡೆಯುತ್ತದೆ. ಪೋಲೀಸ್ ಬಂದೋಬಸ್ತಿನಲ್ಲಿ. ಆದರೆ ಈಗ ಕೂಲಿ ಕೆಲಸಕ್ಕೆ ಹೋದ, ಇಬ್ಬರು ಪುಟ್ಟ ಮಕ್ಕಳ ತಂದೆ ದುಡಿಮೆಯಿಂದಲೇ ಕುಟುಂಬವನ್ನು ಸಾಕುತ್ತಿದ್ದ ಯುವಕನ ಕೊಲೆಯಾದ ತಕ್ಷಣ ಜಿಲ್ಲೆಯಾದ್ಯಂತ ನಿಷೇಧಾಜ್ಞೆ ಜಾರಿಯಾಗುತ್ತದೆ. ಕಾನೂನು ಸುವ್ಯವಸ್ಥೆ ಕಾಪಾಡುವ ನೂತನ ವಿಧಾನವಿದು. ಬಂದ್‌ಗೆ ಕರೆ ಕೊಡುವ ಭಜರಂಗಿಗಳು, ಸಂಘಿಗಳನ್ನು ನಾಮಕಾವಸ್ಥೆ ಸ್ಟೇಷನ್‌ಗೆ ಕರೆತಂದು ಜಾಮೀನು ಕೊಟ್ಟು ಮನೆಗೆ ಕಳಿಸಲಾಗುತ್ತಿದೆ. ರಾಜ್ಯದಲ್ಲಿ ಇರುವುದು ಹೆಸರಿಗೆ ಕಾಂಗ್ರೆಸ್ ಸರಕಾರ. ಆದರೆ ಅಧಿಕಾರ ನಡೆಸುತ್ತಿರುವುದು ಸಂಘಪರಿವಾರ ಎಂದನಿಸಿದರೆ ಅದು ಯಾರ ತಪ್ಪು.

ಬಿಜೆಪಿಗೆ ಅದಲ್ಲದೇ ಬೇರೆ ಮಾರ್ಗವೇ ಇಲ್ಲ

ಇಷ್ಟಕ್ಕೂ ಇಂತಹ ಸ್ಥಿತಿಗೆ ಕಾರಣವೇನೆಂದರೆ, ಒಂದು ಕಡೆ ಹಿಂದೂ– ಮುಸ್ಲಿಂ ಮಧ್ಯೆ ದ್ವೇಷ ಹುಟ್ಟಿಸುವ ಮಾತುಗಳನ್ನು ಆಡುತ್ತಲೇ ಅಧಿಕಾರದ ಗದ್ದುಗೆಗೆ ಏರಿದ ಬಿಜೆಪಿಗೆ ಅದಲ್ಲದೇ ಬೇರೆ ಮಾರ್ಗವೇ ಇಲ್ಲ. 90ರ ದಶಕದಲ್ಲಿ ಪ್ರಾರಂಭ ಮಾಡಿದ ಇಟ್ಟಿಗೆ ಪೂಜೆ, ಕರಸೇವೆ, ರಥಯಾತ್ರೆ, ರಾಮಮಂದಿರ ವಿಷಯಗಳ ಮೂಲಕ ಜನರ ಮನಸ್ಸಿನೊಳಗೆ ಇಳಿದಾದ ಮೇಲೆ, ಅದೇ ಭಾವಪ್ರಚೋದಕ ಹಾದಿಯಲ್ಲಿಯೇ ಮುಂದುವರೆಯುವ ರಾಷ್ಟ್ರೀಯ ಅಜೆಂಡಾ ಅವರದು.

ಇವರ 'ವರ್ಗ ಬಂಧುತ್ವ'ಕ್ಕೆ ಧಕ್ಕೆ ಇಲ್ಲ

ಇನ್ನು, ಕಾಂಗ್ರೆಸ್ ಪಕ್ಷದ ಹಲವು ನಾಯಕರು ಮತ್ತು ಮುಸ್ಲಿಂ ಸಮುದಾಯದ ದೊಡ್ಡ ವ್ಯಾಪಾರಿಗಳು ಹಾಗೂ ಭಾಜಪದ ವ್ಯವಹಾರಸ್ಥರ 'ವರ್ಗ ಬಂಧುತ್ವ'ಕ್ಕೆ ಇಂತಹ ಯಾವುದೇ ಕಾರಣಗಳು ಧಕ್ಕೆ ತಂದೊಡ್ಡುತ್ತಿಲ್ಲ. ಬೀದಿಯಲ್ಲಿ ಕಾಳಗ ಮಾಡಿ ಮುಸಲ್ಮಾನ್ ಯುವಕರನ್ನು ಕೊಲ್ಲುವ ಪ್ರೇರೇಪಣೆ ನೀಡುವವರೇ, ಮುಸ್ಲಿಂ ವ್ಯವಹಾರಸ್ಥ ಬಂಡವಾಳಗಾರರ ಜೊತೆಗಿನ ಸಖ್ಯವನ್ನು ಅಬಾಧಿತವಾಗಿ ಉಳಿಸಿಕೊಳ್ಳುತ್ತಾರೆ. ಹಣ ಮತ್ತು ಸಂಪತ್ತಿಗೆ ಜಾತಿ, ಧರ್ಮ, ಅಸಹನೆ, ದ್ವೇಷಗಳ ಪರಿವೆ ಇಲ್ಲ. ಹಾಗಾಗಿಯೇ ಎರಡೂ ಸಮುದಾಯಗಳ ಉಳ್ಳವರು ಸುಖವಾಗಿ ಬದುಕುವ ದಾರಿಯನ್ನು ಬಡವರ ಮಕ್ಕಳನ್ನು ಬಾವಿಗೆ ತಳ್ಳಿ ಭದ್ರ ಮಾಡಿಕೊಳ್ಳುತ್ತಿದ್ದಾರೆ. ಕಾಳಗಕ್ಕೆ ಇಳಿಯುವವರು ಮುಗ್ಧರು. ಅವರ ಬಲಿದಾನದಲ್ಲಿ ಬಾವೈಕ್ಯತೆಯನ್ನು ಹಾಳುಗೆಡವಿ, ಶ್ರೀಮಂತ ಹಿಂದೂ ಮುಸ್ಲಿಂರು ಧನೈಕ್ಯತೆಯಲ್ಲಿ ಐಷಾರಾಮವಾಗಿ ಇರುತ್ತಾರೆ.

ಮುಸಲ್ಮಾನ್ ಸಮುದಾಯದವರು ನಡೆಸುವ ವಾಣಿಜ್ಯ ಸಂಕೀರ್ಣಗಳಿಗೆ ಸೆಕ್ಯುರಿಟಿ ಸಿಬ್ಬಂದಿಗಳನ್ನು ಒದಗಿಸುವ ಕಂಟ್ರಾಕ್ಟ್ ಪಡೆದಿರುವವರು ಕಟ್ಟಾ ಹಿಂದುತ್ವವಾದಿ, ಪ್ರತಿದಿನ ವಿಷಕಕ್ಕುವ ಮತ್ತು ಕಾನೂನು ಪಾಲಕರ ಶ್ರೀರಕ್ಷೆಯಲ್ಲಿ ಬದುಕುವ ಜನವೇ ಎನ್ನುತ್ತಾರೆ ದಕ್ಷಿಣ ಕನ್ನಡದ ರಾಜಕಾರಣದ ಇಂಚಿಂಚೂ ಬಲ್ಲವರು. ಆಳುವ ಪಕ್ಷದ ಜನಪ್ರತಿನಿಧಿಗಳೂ ಕೂಡಾ ತಮ್ಮ ಕುಟುಂಬದ ವ್ಯಾಪಾರ ವ್ಯವಹಾರಗಳ ಬಗೆಗಲ್ಲದೇ ತಮ್ಮದೇ ಸಮುದಾಯದ ಯುವಕರ ಜೀವಬಲಿ, ಅವರ ಕುಟುಂಬ ಅನಾಥವಾಗುವ ಕುರಿತು ಒಂದಿನಿತೂ ಕಾಳಜಿ ಇಲ್ಲ ಎಂದು ಜನ ಮಾತನಾಡಿಕೊಳ್ಳುತ್ತಿರುವುದು ಹೊಸತೇನಲ್ಲ. ಇಡೀ ಜಿಲ್ಲೆಗೆ ಒಬ್ಬರೇ ಬಿಜೆಪಿಯೇತರ ಶಾಸಕರು, ಅದೂ ಮುಸ್ಲಿಂ ಶಾಸಕರು. ಆದರೆ ಅವರ ಲಕ್ಷ್ಯ ಈ ಕೋಮುದ್ವೇಷಿಗಳನ್ನು ನಿಯಂತ್ರಣಕ್ಕೆ ತರುವತ್ತ ಇದ್ದಂತೆ ಕಾಣುವುದಿಲ್ಲ. ಅವರಿಗೆ ಸಮುದಾಯದವರಿಗಿಂತ ಸಮುದಾಯದ ಶತ್ರುಗಳೇ ಹೆಚ್ಚು ಆಪ್ತರು ಎಂಬುದು ದಕ್ಷಿಣ ಕನ್ನಡದಲ್ಲಿ ಬಹಿರಂಗ ಗುಟ್ಟು. ಇತ್ತೀಚಿನ ಘಟನೆಗಳು, ಅದನ್ನು ಬಹಳ ಗಂಭೀರವಾಗಿ ಅವರು ಪರಿಗಣಿಸದಿರುವ ರೀತಿ ನೋಡಿದರೆ ಇದೇ ಸತ್ಯವಾ ಎಂದು ಅನುಮಾನ ಮೂಡಿದರೆ ಅಲ್ಲವೆಂದು ಸಾಬೀತು ಮಾಡುವುದು ಅವರ ಜವಾಬ್ದಾರಿ.

ಇನ್ನು ಅಶ್ರಫ್, ವಲಸಿಗ ಕಾರ್ಮಿಕ ಗುಂಪುಹತ್ಯೆಯಾದ ಕೆಲವೇ ದಿನಗಳಲ್ಲಿ ಮಂಗಳೂರಿಗೇ ಹೋಗಿ ಸುದ್ದಿಗೋಷ್ಠಿ ನಡೆಸಿ, ಜಿಲ್ಲೆಗೆ ಒಂದು ಕೋಮುವಾದ ನಿಗ್ರಹದಳ ರಚಿಸುವ ಮಾತನಾಡಿ ಬಂದ ಗೃಹ ಸಚಿವರು ಮುಂದೇನು ಮಾಡಿದರೆಂದು ಯಾರಿಗೂ ತಿಳಿದಿಲ್ಲ. ಅವು ಪರಿಸ್ಥಿತಿಯ ಉಪಶಮನದ ಆಟಗಳಾ ಎಂಬ ಪ್ರಶ್ನೆಗೂ ರಾಜ್ಯದ ಕಾಂಗ್ರೆಸ್ ಸರಕಾರ ಉತ್ತರಿಸಬೇಕು.

ದಕ್ಷಿಣ ಕನ್ನಡದ ಉಸ್ತುವಾರಿ ಜವಾಬ್ದಾರಿ ಹೊತ್ತಿರುವ ಸಚಿವ ದಿನೇಶ್ ಗುಂಡೂರಾವ್ ರವರು ಈ ವಿಷಯವನ್ನು ಇನ್ನಷ್ಟು ಗಂಭೀರವಾಗಿ

ಪುಟ 6 ಕ್ಕೆ

ಸತತ ಹನ್ನೊಂದನೇ ವರ್ಷವೂ ಎಂಎಸ್‌ಪಿಯಲ್ಲಿ ರೈತರಿಗೆ ಒಕ್ಕೂಟ ಸರಕಾರದ ವಿಶ್ವಾಸದ್ರೋಹ: ಎಐಕೆಎಸ್ ಖಂಡನೆ

ದೀರ್ಘಾವಧಿ ದತ್ತಾಂಶಗಳು ಎಂಎಸ್‌ಪಿ ದರದಲ್ಲಿ ಇಳಿಕೆಯನ್ನು ತೋರಿಸುತ್ತಿವೆ ಆಹಾರ ಉತ್ಪಾದನೆಯ ಭಾಗವಾಗಿ ಖರೀದಿ ಕಳೆದೆರಡು ದಶಕಗಳಲ್ಲಿ ಸುಮಾರಾಗಿ ಹೆಚ್ಚಿಯೇ ಇಲ್ಲ

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು 2025-26ರ ಮುಂಗಾರು ಋತುವಿಗೆ ಘೋಷಿಸಿರುವ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಪ್ರಧಾನಿ ನರೇಂದ್ರ ಮೋದಿಯವರ ಮತ್ತೊಂದು ದ್ರೋಹವಾಗಿದೆ; ನಿಖರವಾಗಿ ಹೇಳಬೇಕೆಂದರೆ ಸತತ ಹನ್ನೊಂದನೇ ವರ್ಷದಿಂದ ಮಾಡುತ್ತಿರುವ ದ್ರೋಹವಾಗಿದೆ ಎಂದು ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ಬಲವಾಗಿ ಟೀಕಿಸಿದೆ. 2025-26ರ ಮುಂಗಾರು ಋತುವಿಗೆ ರೂ.2.07 ಲಕ್ಷ ಕೋಟಿ ಮೌಲ್ಯದ ಎಂಎಸ್‌ಪಿ ಪ್ಯಾಕೇಜ್ ಅನ್ನು ಅನುಮೋದಿಸುವ ಮೂಲಕ ರೈತರಿಗೆ ಒಂದು ಪ್ರಮುಖ ಉತ್ತೇಜನ ನೀಡಿದೆ ಎಂದು ಬಿಜೆಪಿ ಸರ್ಕಾರ ದೊಡ್ಡದಾಗಿ ಹೇಳಿಕೊಂಡಿದೆ. ಕಾರ್ಪೊರೇಟ್ ಮಾಧ್ಯಮಗಳು ತಕ್ಷಣವೇ ಅದಕ್ಕೆ ತಾಳಹಾಕುತ್ತ ಹೊಸ ಎಂಎಸ್‌ಪಿ ಉತ್ಪಾದನಾ ವೆಚ್ಚಕ್ಕಿಂತ ಕನಿಷ್ಠ ಶೇ.50ರಷ್ಟು ಲಾಭವನ್ನು ಖಚಿತಪಡಿಸುತ್ತದೆ ಎಂದು ಗಿಣಿಪಾಟ ಒಪ್ಪಿಸುತ್ತಿವೆ. ಆದರೆ ವಾಸ್ತವದಲ್ಲಿ ಇದು ಸತ್ಯದಿಂದ ಬಹಳ ದೂರದಲ್ಲಿದೆ. ಬಿಜೆಪಿ ಸರ್ಕಾರವು ಸಾರ್ವಜನಿಕರನ್ನು ಉದ್ದೇಶಪೂರ್ವಕವಾಗಿ ದಾರಿ ತಪ್ಪಿಸಲು ಸಂಖ್ಯೆಗಳ ಕಸರತ್ತಿನಲ್ಲಿ ಮತ್ತು ದತ್ತಾಂಶಗಳನ್ನು ವಿರೂಪಗೊಳಿಸುವಲ್ಲಿ ತೊಡಗಿದೆ ಎಂದು ಎಐಕೆಎಸ್ ಹೇಳಿದೆ.

ಡಾ.ಎಂ.ಎಸ್. ಸ್ವಾಮಿನಾಥನ್ ನೇತೃತ್ವದ ರಾಷ್ಟ್ರೀಯ ರೈತ ಆಯೋಗವು 2006ರ ತನ್ನ ವರದಿಯಲ್ಲಿ ರೈತರನ್ನು ಕೃಷಿ ಬಿಕ್ಕಟ್ಟಿನಿಂದ ರಕ್ಷಿಸಲು, ಅವರಿಗೆ ಸಮಗ್ರ ಕೃಷಿ ವೆಚ್ಚ 'ಸಿ2' ಗಿಂತ ಕನಿಷ್ಠ 50% ಹೆಚ್ಚಿನ ಫಲದಾಯಕ ಬೆಲೆಯನ್ನು ನೀಡಬೇಕು ಎಂದು ಸ್ಪಷ್ಟವಾಗಿ ಹೇಳಿದೆ. ಆದಾಗ್ಯೂ, 19 ವರ್ಷಗಳ ನಂತರವೂ ಅವು ಪೊಳ್ಳು ಭರವಸೆಗಳಾಗಿ ಉಳಿದಿವೆ. ಖಚಿತವಾದ ಖರೀದಿ ಇಲ್ಲದ ಕಾರಣ ಘೋಷಿಸಲಾದ ಎಂಎಎಸ್‌ಪಿ ಕೂಡ ಹೆಚ್ಚಾಗಿ ಕಾಗದದ ಮೇಲೆಯೇ ಉಳಿದಿದೆ. ಘೋಷಿಸಲಾದ ಎಂಎಸ್‌ಪಿ ಮತ್ತು ರೈತರು ನಿಜವಾಗಿ ಪಡೆಯುವ ಬೆಲೆಯ ನಡುವೆ ಗಣನೀಯ ಅಂತರವಿದೆ. ಸಾಗುವಳಿ ಸಮೀಕ್ಷೆಗಳ ವೆಚ್ಚವು ಭತ್ತದ ರೈತರು ಪಡೆದ ಸರಾಸರಿ ಬೆಲೆ 2021-22ರಲ್ಲಿ ಎ2+ಎಫ್‌ಎಲ್ (ಮೂಲ ವೆಚ್ಚ+ಕುಟುಂಬ ಶ್ರಮ) ಸೂತ್ರದ ಎಂಎಸ್‌ಪಿ ಗಿಂತಲೂ ಶೇ.36ರಷ್ಟು ಕಡಿಮೆಯಾಗಿದೆ ಎಂದು ತೋರಿಸುತ್ತದೆ (ಇತ್ತೀಚಿನ ಲಭ್ಯ ದತ್ತಾಂಶ ಪ್ರಕಾರ). ತೆಲಂಗಾಣದಲ್ಲಿ ತೊಗರಿ ರೈತರು ಪಡೆದ ಸರಾಸರಿ ಬೆಲೆ 2021-22ರಲ್ಲಿ ಎಂಎಸ್‌ಪಿ ಗಿಂತ ಶೇ.11ರಷ್ಟು ಕಡಿಮೆಯಾಗಿದೆ. ಇದರರ್ಥ ಎಂಎಸ್‌ಪಿಯ ಪ್ರಯೋಜನವು ಹೆಚ್ಚಿನ ರೈತರಿಗೆ ತಲುಪುತ್ತಿಲ್ಲ. ಕೃಷಿ ಸಚಿವಾಲಯ ಬಿಡುಗಡೆ ಮಾಡಿದ ಎಂಎಸ್‌ಪಿಯ ದೀರ್ಘಾವಧಿ ದತ್ತಾಂಶವು ಬಹುತೇಕ ಎಲ್ಲಾ ಬೆಳೆಗಳಿಗೆ, ವಿಶೇಷವಾಗಿ ಭತ್ತಕ್ಕೆ ನಿಜಬೆಲೆಯಲ್ಲಿ ಎಂಎಸ್‌ಪಿ ಬೆಳವಣಿಗೆಯಲ್ಲಿ ಇಳಿಕೆಯಾಗುತ್ತಿರುವುದನ್ನು ತೋರಿಸುತ್ತದೆ. ಉದಾಹರಣೆಗೆ, ಭತ್ತದ ನಿಜ ಬೆಲೆಗಳಲ್ಲಿ ಎಂಎಸ್‌ಪಿ 2004-05 ಮತ್ತು 2013-14ರ ನಡುವೆ ವಾರ್ಷಿಕ ಶೇ.1.17ರ ದರದಲ್ಲಿ ಬೆಳೆದಿದ್ದರೆ, 2014-15ರಿಂದ 2025-26ರ ಅವಧಿಯಲ್ಲಿ ಈ ದರ ವಾರ್ಷಿಕ ಶೇ.0.53ಕ್ಕೆ ಇಳಿದಿದೆ. ಅಧ್ಯಯನ ಮಾಡಿದ 16 ಬೆಳೆಗಳಲ್ಲಿ, 9 ಬೆಳೆಗಳು 2014-15ರಿಂದ 2025-26ರ ನಡುವೆ ನಿಜ ಎಂಎಎಸ್‌ಪಿ ಬೆಳವಣಿಗೆಯಲ್ಲಿ ತೀವ್ರ ಕುಸಿತವನ್ನು ತೋರಿಸಿವೆ. ಭತ್ತ, ಮೆಕ್ಕೆಜೋಳ, ತೊಗರಿ, ಉದ್ದು ಮತ್ತು ನೆಲಗಡಲೆ ಮುಂತಾದ ಬೆಳೆಗಳಿಗೆ, ಕಳೆದ ದಶಕದಲ್ಲಿ ನಿಜ ಬೆಳವಣಿಗೆಯ ದರವು ವಾರ್ಷಿಕಶೇ. ಒಂದಕ್ಕಿಂತ ಕಡಿಮೆಯಿತ್ತು ಎಂದು ಎಐಕೆಎಸ್ ಹೇಳಿದೆ.

ಸರ್ಕಾರದ ಪತ್ರಿಕಾ ಪ್ರಕಟಣೆಯು ಅತ್ಯಂತ ಪ್ರಮುಖವಾದ ಮುಂಗಾರು ಬೆಳೆಯಾದ ಭತ್ತದ ಬಗ್ಗೆ ಬಹುತೇಕ ಮೌನವಾಗಿದೆ, ಏಕೆಂದರೆ ಅದರ ಎಂಎಸ್‌ಪಿಯನ್ನು ಕ್ವಿಂಟಲ್‌ಗೆ ಕೇವಲ ರೂ.69ರಷ್ಟು ಹೆಚ್ಚಿಸಲಾಗಿದೆ. ಸರಕಾರಕ್ಕೆ ಇದು ಒಂದು ಮುಜುಗರ ಉಂಟುಮಾಡುವ ಸತ್ಯ. ಕೃಷಿ ವೆಚ್ಚಗಳು ಮತ್ತು ಬೆಲೆಗಳ ಆಯೋಗ (ಸಿಎಸಿಪಿ) ಅಂದಾಜು ಮಾಡಿದ ರಾಷ್ಟ್ರೀಯ ಸರಾಸರಿ ವೆಚ್ಚದ ಪ್ರಕಾರ, ಭತ್ತದ ಅ2+50% ಬೆಲೆ ಕ್ವಿಂಟಲ್‌ಗೆ ರೂ.3,135ಕ್ಕೆ ಬರುತ್ತದೆ, ಆದರೆ ಘೋಷಿತ ಎಂಎಸ್‌ಪಿ ಕೇವಲ ರೂ.2,369, ಅಂದರೆ ಪ್ರತಿ ಕ್ವಿಂಟಲ್‌ಗೆ ರೂ.766 ನಷ್ಟವಾಗಿದೆ. ರಾಜ್ಯಗಳು ಭತ್ತಕ್ಕೆ ಅಂದಾಜು ಮಾಡಿದ ವೆಚ್ಚವನ್ನು ನೋಡಿದರೆ, ಅದು ಪಂಜಾಬ್‌ನಲ್ಲಿ ರೂ.2787, ತೆಲಂಗಾಣದಲ್ಲಿ ರೂ.3673 ಮತ್ತು ಮಹಾರಾಷ್ಟ್ರದಲ್ಲಿ ಪ್ರತಿ ಕ್ವಿಂಟಲ್‌ಗೆ ರೂ.4159 ಆಗಿದೆ. ಈ ರಾಜ್ಯಗಳು ಕ್ರಮವಾಗಿ ಕ್ವಿಂಟಲ್‌ಗೆ ರೂ.4,281, ರೂ.5,510 ಮತ್ತು ರೂ.4,783 ಎಂಎಸ್‌ಪಿಗಳನ್ನು ಶಿಫಾರಸು ಮಾಡಿದ್ದವು. ಇದು, ಅನೇಕ ರಾಜ್ಯಗಳಲ್ಲಿ, ಸರ್ಕಾರಿ ಅಂಕಿಅಂಶಗಳ ಪ್ರಕಾರ ಕೂಡ, ರೈತರು ಭತ್ತದ ಬೆಳೆ ಮಾರಾಟದಿಂದ ತಮ್ಮ ಉತ್ಪಾದನಾ ವೆಚ್ಚವನ್ನು ಮರುಪಡೆಯಲು ಹೆಣಗಬೇಕಾಗಿದೆ. ಸಿಎಸಿಪಿ ಪ್ರಕಾರ, 2023-24ರಲ್ಲಿ ಭಾರತದಾದ್ಯಂತ ಕೇವಲ ಶೇ.17.3ರಷ್ಟು ಭತ್ತ ಬೆಳೆಯುವ ರೈತರು ಮಾತ್ರ ಎಂಎಸ್‌ಪಿ ದರದಲ್ಲಿ ಖರೀದಿಯಿಂದ ಪ್ರಯೋಜನ ಪಡೆದಿದ್ದಾರೆ. ಬಿಜೆಪಿ-ಎನ್‌ಡಿಎ ಆಡಳಿತದ ರಾಜ್ಯಗಳಾದ ಉತ್ತರ ಪ್ರದೇಶ (ಶೇ.5.8), ಬಿಹಾರ (ಶೇ.4.1), ಅಸ್ಸಾಂ (ಶೇ.5ಕ್ಕಿಂತ ಕಡಿಮೆ) ಮತ್ತು ಕಾಂಗ್ರೆಸ್ ಆಡಳಿತದ ಕರ್ನಾಟಕದಲ್ಲಿ ಎಂಎಸ್‌ಪಿ ಬೆಲೆಗಳಲ್ಲಿ ಭತ್ತದ ಖರೀದಿ ಬಹಳ ಕಡಿಮೆ, ಜೆಎಂಎಂ ಆಡಳಿತದ ಜಾರ್ಖಂಡ್‌ನಲ್ಲಿ ಶೇ. 5ಕ್ಕಿಂತ ಕಡಿಮೆ.

ಹೆಚ್ಚಿನ ರಾಜ್ಯಗಳು ಕೃಷಿ ವೆಚ್ಚಗಳು ಸಿಎಸಿಪಿ ವೆಚ್ಚದ ಅಂದಾಜುಗಳಿಗಿಂತ ಹೆಚ್ಚಿವೆ ಎಂದು ಉಲ್ಲೇಖಿಸಿವೆ. 2023-24ರ ಕೃಷಿ ವರ್ಷಕ್ಕೆ "ಕೃಷಿ ಅಂಕಿಅಂಶಗಳ ಒಂದು ನೋಟ" (Agricultural Statistics at a Glance)ದಿಂದ ಪಡೆದ ದತ್ತಾಂಶಗಳನ್ನು ನೋಡಿದರೆ, ಖರೀದಿ ಮಟ್ಟಗಳು ಮತ್ತು ಎಂಎಸ್‌ಪಿ ಹೆಚ್ಚಳದ ನಡುವೆ ಹೊಂದಾಣಿಕೆಯ ಕೊರತೆಯಿದೆ ಎಂಬುದು ಸ್ಪಷ್ಟವಾಗಿದೆ. ತೊಗರಿ ಉತ್ಪಾದನೆಯ ಶೇ.0.23, ನೆಲಗಡಲೆ ಉತ್ಪಾದನೆಯ ಶೇ.0.72 ಮತ್ತು ಹತ್ತಿ ಉತ್ಪಾದನೆಯ ಶೇ.9.3ರಷ್ಟನ್ನು ಮಾತ್ರ ಖರೀದಿಸಲಾಗಿದೆ.

ನೈಜರ್ ಬೀಜಕ್ಕೆ ರೂ.820, ರಾಗಿಗೆ ರೂ.596, ಹತ್ತಿಗೆ ರೂ.589 ಮತ್ತು ಎಳ್ಳು ರೂ.579 ಪ್ರತಿ ಕ್ವಿಂಟಲ್‌ಗೆ ಎಂಎಸ್‌ಪಿ ಹೆಚ್ಚಿಸಲಾಗಿದೆ ಎಂಬುದು ಸರ್ಕಾರದ ಉತ್ಪ್ರೇಕ್ಷಿತ ಹೇಳಿಕೆ ಎಂದು ಎಐಕೆಎಸ್ ಹೇಳಿದೆ. ಈ ಹೆಚ್ಚಿದ ಬೆಲೆಗಳು ಸಹ ಸಿ2+50% ಮಾನದಂಡಕ್ಕಿಂತ ತೀರಾ ಕಡಿಮೆಯಾಗಿದ್ದು, ರೈತರು ಭಾರೀ ನಷ್ಟ ಭರಿಸಬೇಕಾಗುತ್ತದೆ.

ಮೋದಿ ಸರಕಾರದ ಈ ಭಾರೀ ಉತ್ತೇಜನೆ ಎಂದು ಹೇಳಿಕೊಳ್ಳುವ ಎಂಎಸ್‌ಪಿಗಳು ವಾಸ್ತವವಾಗಿ ರೈತರಿಗೆ ಆಗಿರುವ ನಷ್ಟದ ಬಗ್ಗೆ ಇನ್ನೂ ಕೆಲವು ಅಂಕಿ-ಅಂಶಗಳನ್ನು ಎಐಕೆಎಸ್ ನೀಡಿದೆ:

1. ನೈಜರ್ (ಕರಿಎಳ್ಳು) ಬೀಜಕ್ಕೆ ಎಂಎಸ್‌ಪಿ ಕ್ವಿಂಟಲ್‌ಗೆ ರೂ.9,537 ಎಂದು ನಿಗದಿಪಡಿಸಲಾಗಿದೆ, ಆದರೆ ಸಿ2+50% ಬೆಲೆ ರೂ.12,037 ಆಗಿರಬೇಕು-ಅಂದರೆ ರೈತನಿಗೆ ರೂ.2,500 ನಷ್ಟವಾಗುತ್ತದೆ.
2. ರಾಗಿಯ ವಿಷಯದಲ್ಲಿ, ಸರ್ಕಾರವು ಪ್ರತಿ ಕ್ವಿಂಟಲ್‌ಗೆ ರೂ. 4,886 ಎಂದು ನಿಗದಿಪಡಿಸಿದೆ, ಆದರೆ ಸಿಎಸಿಪಿಯ ಮುನ್ಸೂಚನೆಗಳ ಪ್ರಕಾರ ಸಿ2+50% ಬೆಲೆ ರೂ. 5,964 ಆಗಿರಬೇಕು-ಅಂದರೆ ರೈತನಿಗೆ C2+50% ಬೆಲೆಗಿಂತ ರೂ. 1,078 ಕಡಿಮೆ ಸಿಗುತ್ತದೆ.
3. ಹತ್ತಿಯ ಅಂಕಿಅಂಶಗಳನ್ನು ನೋಡಿದರೆ, ಸಿ2+50% ಬೆಲೆ ಕ್ವಿಂಟಲ್‌ಗೆ ರೂ.10,075 ಆಗಿದ್ದು, ಸರ್ಕಾರ ಕೇವಲ ರೂ.7,710 ಎಂಎಸ್‌ಪಿ ಘೋಷಿಸಿದೆ-ಇದರಿಂದಾಗಿ ರೈತರು ಪ್ರತಿ ಕ್ವಿಂಟಲ್‌ಗೆ ರೂ.2,365 ನಷ್ಟಕ್ಕೆ ಬೆಳೆ ಮಾರಾಟ ಮಾಡಬೇಕಾಯಿತು. ತೆಲಂಗಾಣ ಸರ್ಕಾರ 2024-25ರಲ್ಲಿ ಕ್ವಿಂಟಲ್‌ಗೆ ರೂ.16,000 ಬೇಡಿಕೆ ಇಟ್ಟಿತ್ತು ಎಂಬುದು ಗಮನಾರ್ಹ.
4. ಎಳ್ಳಿನಲ್ಲಿ, C2+50% ಬೆಲೆ ರೂ.12,948 ಆಗಿರಬೇಕು, ಆದರೆ ಸರ್ಕಾರ ರೂ.9,537 ಎಂಎಸ್‌ಪಿ ಘೋಷಿಸಿದೆ-ಇದರ ಪರಿಣಾಮವಾಗಿ ರೈತನಿಗೆ ಕ್ವಿಂಟಲ್‌ಗೆ ರೂ.3,102 ನಷ್ಟವಾಗಿದೆ.
5. ಜೋಳದಲ್ಲಿ, ಸರ್ಕಾರ ಘೋಷಿಸಿದ ಎಂಎಸ್‌ಪಿ ಕ್ವಿಂಟಲ್‌ಗೆ ರೂ.3,699, ಆದರೆ ಸಿಎಸಿಪಿ ಪ್ರಕಾರ C2+50% ವೆಚ್ಚ ರೂ.4,809-ಅಂದರೆ ರೈತನಿಗೆ ಕ್ವಿಂಟಲ್‌ಗೆ ರೂ.1,110 ಕಡಿಮೆ ಸಿಗುತ್ತದೆ. ಇಷ್ಟೇ ಅಲ್ಲ, ಕರ್ನಾಟಕಕ್ಕೆ ಸಿಎಸಿಪಿ -ಯೋಜಿತ ವೆಚ್ಚ ರೂ.3,802, ಮತ್ತು ರಾಜ್ಯದ ಯೋಜಿತ ವೆಚ್ಚ ಕ್ವಿಂಟಾಲ್‌ಗೆ ರೂ.5,232, ಅದರೆ ಮಹಾರಾಷ್ಟ್ರದ ಯೋಜಿತ ವೆಚ್ಚ ರೂ.4,163-ಅಂದರೆ ಈ ರಾಜ್ಯಗಳಲ್ಲಿ, ಬೆಳೆ ಮಾರಾಟದಿಂದ ಬರುವ ಆದಾಯವು ಕೃಷಿ ವೆಚ್ಚವನ್ನು ಸಹ ಭರಿಸುವುದಿಲ್ಲ.
6. ಬಜ್ರಾ (ಮುತ್ತು ರಾಗಿ) ಮತ್ತು ಜೋಳದ ವಿಷಯದಲ್ಲೂ ಇದೇ ಪರಿಸ್ಥಿತಿ ಇದೆ. ಬಜ್ರಾಗೆ ಎಂಎಸ್‌ಪಿ ಅನ್ನು ಕ್ವಿಂಟಾಲ್‌ಗೆ ರೂ.2,775 ಮತ್ತು ಮೆಕ್ಕೆಜೋಳಕ್ಕೆ ರೂ.2,400 ಎಂದು ನಿಗದಿಪಡಿಸಲಾಗಿದೆ, ಆದರೆ ಸಿಎಸಿಪಿಯ ಪ್ರಕ್ಷೇಪಗಳ ಆಧಾರದ ಮೇಲೆ C2+50% ವೆಚ್ಚವು ಕ್ರಮವಾಗಿ ರೂ.3,313 ಮತ್ತು ರೂ.2,928 ಆಗಿದೆ. ಪ್ರಧಾನಿ ನರೇಂದ್ರ ಮೋದಿಯವರ ತವರು ರಾಜ್ಯವಾದ ಗುಜರಾತ್‌ನಲ್ಲಿಯೂ ಸಹ, ರಾಜ್ಯ ಸರ್ಕಾರವು ಮೆಕ್ಕೆಜೋಳದ ಉತ್ಪಾದನಾ ವೆಚ್ಚವನ್ನು ರೂ.2,991 ಎಂದು ಅಂದಾಜಿಸಿದೆ ಮತ್ತು ರೂ.4,550 ಎಂಎಸ್‌ಪಿ ಯನ್ನು ಸೂಚಿಸಿದೆ. ಇದರರ್ಥ ಗುಜರಾತಿನ ರೈತ ಕೇಂದ್ರದ ಎಂಎಸ್‌ಪಿ ನಲ್ಲಿ ಮೆಕ್ಕೆಜೋಳವನ್ನು ಮಾರಾಟ ಮಾಡಿದರೆ, ಅವನಿಗೆ ಅವನ ಉತ್ಪಾದನಾ ವೆಚ್ಚಕ್ಕಿಂತ ರೂ.591 ಕಡಿಮೆ ಸಿಗುತ್ತದೆ.

ರೈತರಿಗೆ ಆಗಿರುವ ಮೇಲಿನ ನಷ್ಟಗಳು ಸಹ ಸರ್ಕಾರ-ಯೋಜಿತ ವೆಚ್ಚಗಳನ್ನು ಆಧರಿಸಿವೆ ಎಂಬ ಸಂಗತಿಯತ್ತವೂ ಎಐಕೆಎಸ್ ಗಮನ ಸೆಳೆದಿದೆ. ಎಲ್ಲರಿಗೂ ತಿಳಿದಿರುವ ಸಂಗತಿಯೆಂದರೆ, ನಿಜವಾದ ಉತ್ಪಾದನಾ ವೆಚ್ಚವು ಸಿಎಸಿಪಿ ಅಂದಾಜು ಮಾಡಿದ ವೆಚ್ಚಕ್ಕಿಂತ ಹೆಚ್ಚಾಗಿದೆ. ನಿರಂತರವಾಗಿ ಹೆಚ್ಚುತ್ತಿರುವ ಲಾಗುವಾಡು ವೆಚ್ಚಗಳು ರೈತರ ವೆಚ್ಚವನ್ನು ಹೆಚ್ಚಿಸುತ್ತಿವೆ, ಆದರೆ ಅವರಿಗೆ ಅವರ ಉತ್ಪನ್ನಗಳಿಗೆ ನ್ಯಾಯಯುತ ಬೆಲೆ ಸಿಗುತ್ತಿಲ್ಲ. ದೇಶದಲ್ಲಿ ಚಾಲ್ತಿಯಲ್ಲಿರುವ ಕೃಷಿ ಬಿಕ್ಕಟ್ಟು ಮತ್ತು ನಡೆಯುತ್ತಿರುವ ರೈತರ ಆತ್ಮಹತ್ಯೆಗಳಿಗೆ ಇದೇ ಕಾರಣ ಎಂದು ಅದು ಹೇಳಿದೆ.

ಒಕ್ಕೂಟ ಸರಕಾರ ದತ್ತಾಂಶಗಳ ಕಸರತ್ತು ನಡೆಸುವುದನ್ನು ಮತ್ತು ಸಾರ್ವಜನಿಕರನ್ನು ದಾರಿ ತಪ್ಪಿಸುವುದನ್ನು ಬಿಡಬೇಕು ಎಂದು ಎಚ್ಚರಿಸಿರುವ ಅಖಿಲ ಭಾರತ ಕಿಸಾನ್ ಸಭಾ, ಇಂತಹ ಠಕ್ಕುತನದ ದಾವೆಗಳನ್ನು ಬಯಲಿಗೆಳೆಯಬೇಕು ಎಂದು ತನ್ನ ಎಲ್ಲಾ ಘಟಕಗಳಿಗೆ ಕರೆ ನೀಡಿದೆ ಮತ್ತು ರೈತರ ಬೆಳೆಗಳಿಗೆ ನ್ಯಾಯಯುತ ಬೆಲೆಗಾಗಿ ಒಂದು ಉಗ್ರ ಚಳುವಳಿಯನ್ನು ಪ್ರಾರಂಭಿಸಲು ರೈತ ಸಂಘಟನೆಗಳೊಂದಿಗೆ ಒಗ್ಗೂಡಿ ಕೆಲಸ ಮಾಡುವುದಾಗಿ ಅದು ಹೇಳಿದೆ.

ಲಿಲ್‌ಬರ್ನ್ ಎಂಬ ದುಡಿವ ಜನರ..... ಪುಟ 2 ರಿಂದ

ಅವರೂ ಕೂಡಾ ಲಿಲ್‌ಬರ್ನ್ ರೀತಿಯಲ್ಲಿಯೇ ಆಯಾ ಸಮಯದ ಘಟನೆಗಳು, ಚರ್ಚೆಗಳಿಗೆ ಸ್ಪಂದಿಸುವ ಪುಸ್ತಿಕೆಗಳನ್ನು, ಕರಪತ್ರಗಳನ್ನು ಬರೆದು ವಿಚಾರಗಳ ಪ್ರಸಾರಕ್ಕೆ ನೆರವಾದರು.

ಈ ಪುಸ್ತಿಕೆಗಳು, ವಿಚಾರಗಳು ಲಂಡನ್ ನಗರದಲ್ಲಿ ಹೆಚ್ಚು ಜನಪ್ರಿಯವಾದರೂ ಕೂಡಾ ಹಳ್ಳಿಗಾಡುಗಳಿಗೂ ಹಬ್ಬಿತು. ಹಳ್ಳಿಗಳ ರೈತರು, ಕೂಲಿಕಾರರು ಕೂಡಾ ಲಂಡನ್‌ಗೆ ಬಂದು ಲಿಲ್‌ಬರ್ನ್ ಬಿಡುಗಡೆಗೆ ಒತ್ತಾಯ ಮಾಡಿದ ಉದಾಹರಣೆಗಳಿವೆ.

ಇದು ಸಾಮಾನ್ಯ ಜನರ ಮೇಲೆ ಮಾತ್ರವಲ್ಲದೆ, ಇದೇ ಜನಮೂಲಕ್ಕೆ ಸೇರಿದ ಪಾರ್ಲಿಮೆಂಟ್ ಸೈನಿಕರು, ಕುದುರೆ ಸವಾರರ ಮೇಲೆ, ತಳಮಟ್ಟದ ಸೇನಾಧಿಕಾರಿಗಳ ಮೇಲೆ ಕೂಡ ವ್ಯಾಪಕವಾಗಿ ಪ್ರಭಾವ ಬೀರಿತು.

ಈ ವಿಚಾರಗಳನ್ನು ಒಪ್ಪುವವರು, ಪಸರಿಸುವವರು ಲೆವಲರ್ಸ್ ಎಂದು ಹೆಸರಾದರು. ಹೀಗೆ ಜಗತ್ತಿನ ಮೊತ್ತ ಮೊದಲ ರಾಜಕೀಯ ಪಕ್ಷ, ಅದರಲ್ಲೂ ದುಡಿವ ಜನರ ರಾಜಕೀಯ ಪಕ್ಷವೊಂದು ರೂಪುಗೊಳ್ಳಲಾರಂಭಿಸಿತು.

ಪುಸ್ತಿಕೆಗಳನ್ನು ಸುಟ್ಟರು. ಲಿಲ್‌ಬರ್ನ್ ಮಂಡಿಯೂರಬೇಕೆಂದು ಆಜ್ಞೆ

ಈ ಪುಸ್ತಿಕೆಗಳ ವಿಚಾರಗಳು ಸಂಸತ್ತಿನ ಲಾರ್ಡ್‌ಗಳ ಸಭೆಯನ್ನು ಪದೇ ಪದೇ ಸಿಟ್ಟಿಗೆಬ್ಬಿಸಿತು. ಅವರು ಲಿಲ್‌ಬರ್ನ್ ನನ್ನು ತಮ್ಮ ವಿಚಾರಣಾ ಸಭೆಯ ಮುಂದೆ ಹಾಜರಾಗಿ ಮಂಡಿಯೂರಬೇಕೆಂದು ಆಜ್ಞೆ ಮಾಡಿದರು. ಲಿಲ್‌ಬರ್ನ್ ಇಂತಹ ನಿರಂಕುಶ ದಬ್ಬಾಳಿಕೆಗೆ ವಿಧೇಯತೆ ತೋರಿಸುತ್ತಾನೆಂದು ನಿರೀಕ್ಷಿಸಲು ಸಾಧ್ಯವೇ! ಅವನು ಮಂಡಿಯೂರಲು ನಿರಾಕರಿಸಿದ್ದು ಮಾತ್ರವಲ್ಲ, ಈ ವಿಚಾರಣಾಧಿಕಾರಿಗಳ ಮಾತನ್ನು ಕೇಳುವುದಿಲ್ಲ ಎಂದು ಘೋಷಿಸಿ ತನಗೆ ಅವು ಕೇಳದಂತೆ ಕಿವಿಗಳ ಒಳಕ್ಕೆ ಬೆರಳು ತೂರಿಸಿ ಮುಚ್ಚಿಕೊಂಡ.

ನ್ಯಾಯ ವಿಚಾರಣೆಯ ಈ ಧಿಕ್ಕಾರದಿಂದ ಕುದ್ದು ಹೋದ ಲಾರ್ಡ್‌ಗಳು ಮತ್ತೆ ಕಠಿಣ ಶಿಕ್ಷೆ ವಿಧಿಸಿದರು. ಅವನ ಕೈಗೆ ಪೆನ್ನು, ಕಾಗದ ಸಿಗದಂತೆ ಕಾವಲು ಆಜ್ಞೆ ಮಾಡಿದರು.

ಮೇಲೆ ಉಲ್ಲೇಖಿಸಿದ ಆ ಪುಸ್ತಿಕೆಗಳನ್ನು ಬಹಿರಂಗವಾಗಿ ಸುಟ್ಟು ಹಾಕಲು ಆಜ್ಞೆ ಮಾಡಲಾಯಿತು.

ಮುಂದೆ ಲೆವಲರ್ಸ್‌ಗಳು ರಾಜನನ್ನು ಇದೇ ಸಂಸತ್ ವಿಚಾರಣೆಯ ಕಟ ಕಟೆಯಲ್ಲಿ ನಿಲ್ಲಿಸಿದ್ದಯ, ಅವನು ಅಪರಾಧಿಯೆಂದು ಘೋಷಿಸಲು ಅವನಿಗೆ ಮರಣದಂಡನೆ ವಿಧಿಸಲು ಒತ್ತಡ ಹಾಕಿ ಯಶಸ್ವಿಯಾಗಿದ್ದು ಲೆವಲರ್ಸ್‌ಗಳ ಒಂದು ಮುಖ್ಯ ಸಾಧನೆ.

ಅಷ್ಟೇ ಅಲ್ಲ, ಹಿಂದಿನ ಸಂಚಿಕೆಯಲ್ಲಿ ಹೇಳಿದಂತೆ ಬ್ರಿಟನ್‌ನಲ್ಲಿ ಲಿಖಿತ ಸಂವಿಧಾನ, ಸಾರ್ವತ್ರಿಕ ವಯಸ್ಕ ಮತದಾನ, ಅಭಿವ್ಯಕ್ತಿ ಸ್ವಾತಂತ್ರ್ಯ, ಮುದ್ರಣ ಸ್ವಾತಂತ್ರ್ಯ ಮೊದಲಾದವುಗಳ ನಿರೂಪಣೆಗೂ, ಅವುಗಳ ಬಗೆಗಿನ ಚರ್ಚೆಗೂ ಲೆವಲರ್ಸ್ ಕಾರಣವಾದರು.


ಮಂಡ್ಯ


ಬೆಂಗಳೂರು ಗ್ರಾಮಾಂತರ ಜಿಲ್ಲೆ


ಬೆಂಗಳೂರು

ದಲಿತರ ಮೇಲಿನ ದೌರ್ಜನ್ಯ ಖಂಡಿಸಿ, ಅಸ್ಪೃಶ್ಯತೆಯ ಆಚರಣೆ ವಿರುದ್ಧ ದಲಿತ ಹಕ್ಕುಗಳ ಸಮಿತಿಯಿಂದ ರಾಜ್ಯಾದ್ಯಂತ ಪ್ರತಿಭಟನೆ

ಕತ್ತರಘಟ ದಲಿತನ ಕೊಲೆ, ಕನಕಪುರ ಬನವಾಸಿ ಮತ್ತು ತುಮಕೂರು ಕವಣಗಾಲ ದೇವಸ್ಥಾನ ಪ್ರವೇಶ ನಿರಾಕರಣೆ ಹಾಗೂ ರಾಮನಗರ ಭದ್ರಾಪುರ ಯುವತಿ ಕೊಲೆ ಪ್ರಕರಣಗಳು ಸೇರಿದಂತೆ ರಾಜ್ಯದಲ್ಲಿ ನಡೆಯುತ್ತಿರುವ ದಲಿತರ ಮೇಲಿನ ದೌರ್ಜನ್ಯ, ಕೊಲೆ, ಸಾಮಾಜಿಕ ಬಹಿಷ್ಕಾರ, ದೌರ್ಜನ್ಯ, ದೇವಾಲಯ ಪ್ರವೇಶ ನಿರಾಕರಣೆ ಪ್ರಕರಣಗಳು ದಲಿತರಲ್ಲಿ ಆತಂಕ ಹುಟ್ಟಿಸಿವೆ. ಇದನ್ನು ತಡೆಯಲಾಗದ ಕಾಂಗ್ರೆಸ್ ಸರ್ಕಾರ ಮತ್ತು ಪೊಲೀಸ್ ವೈಫಲ್ಯವನ್ನು ಖಂಡಿಸಿ, ಕೌಂಟರ್ ಕೇಸ್, ಮರ್ಯಾದೆ ಹತ್ಯೆ ತಡೆಯಲು ರಾಜ್ಯ ಸರ್ಕಾರ ಕ್ರಮ ವಹಿಸಬೇಕೆಂದು ಒತ್ತಾಯಿಸಿ, ದಲಿತ ಹಕ್ಕುಗಳ ಸಮಿತಿ (ಡಿಎಚ್‌ಎಸ್) ನೇತೃತ್ವದಲ್ಲಿ ರಾಜ್ಯದ ಹಲವು ಜಿಲ್ಲೆ ಮತ್ತು ತಾಲೂಕು ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗಳ ಮೂಲಕ ರಾಜ್ಯ ಮುಖ್ಯಮಂತ್ರಿಯವರಿಗೆ ಮನವಿ ಸಲ್ಲಿಸಿದ್ದಾರೆ.

ರಾಜ್ಯದಲ್ಲಿ ದಲಿತರ ಮೇಲೆ ಜಾತಿ ತಾರತಮ್ಯ, ದೌರ್ಜನ್ಯ, ಸಾಮಾಜಿಕ ಬಹಿಷ್ಕಾರಗಳು ಹೆಚ್ಚುತ್ತಿರುವುದು ಆತಂಕಕಾರಿಯಾಗಿದೆ. ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಸರ್ಕಾರ ದಲಿತರಿಗೆ ಕಾನೂನು ರಕ್ಷಣೆ ಒದಗಿಸಲು 33 ವಿಶೇಷ ಪೊಲೀಸ್ ಠಾಣೆ ಸ್ಥಾಪಿಸಿದೆ. ಆದರೆ ಇದೇ ಸಂದರ್ಭದಲ್ಲಿ ರಾಜ್ಯದಲ್ಲಿ ದಲಿತರ ಮೇಲಿನ ದೌರ್ಜನ್ಯ ಪ್ರಕರಣಗಳು ಹೆಚ್ಚಾಗಿ ಸಂಭವಿಸುತ್ತಿವೆ. ಪೊಲೀಸ್ ಠಾಣೆಗಳಿಗೆ ದೂರು ನೀಡಲು ಹೋದರೆ ಎಫ್‌ಐಆರ್ ಹಾಕುವುದಿಲ್ಲ. ಆರೋಪಿಗಳನ್ನು ಬಂಧಿಸದೆ ಮೇಲ್ಜಾತಿಯ ಪಟ್ಟಭದ್ರ ಹಿತಾಶಕ್ತಿಗಳ ಪರ ಪೊಲೀಸರು ನಿಂತಿದ್ದಾರೆ. ದಲಿತರಿಗೆ ರಕ್ಷಣೆ ಸಿಗುತ್ತಿಲ್ಲ. ಕಾಂಗ್ರೆಸ್ ಸರ್ಕಾರದ ಪೊಲೀಸ್ ವೈಫಲ್ಯ ಕಣ್ಣಿಗೆ ರಾಚುವಂತಿದೆ. ಪರಮೇಶ್ವರ್ ರವರು ಗೃಹ ಮಂತ್ರಿಗಳಾಗಿದ್ದಾರೆ. ಆದರೂ ದಲಿತರಿಗೆ ರಕ್ಷಣೆ ಸಿಗುತ್ತಿಲ್ಲ ಎಂದು ಡಿಎಚ್‌ಎಸ್ ಮುಖಂಡರು ಆರೋಪಿಸಿರುವ ಮುಖಂಡರು, ರಾಜ್ಯದಲ್ಲಿ ನಡೆದಿರುವ ಪ್ರಕರಣಗಳನ್ನು ಸರ್ಕಾರ ಗಂಭೀರವಾಗಿ ತೆಗೆದುಕೊಂಡು ಕ್ರಮ ಜರುಗಿಸಿ ಆರೋಪಿಗಳನ್ನು ಬಂದಿಸಬೇಕು, ನೊಂದ ದಲಿತರಿಗೆ ನ್ಯಾಯ ಸಿಗಬೇಕು ಮತ್ತು ಅವರಿಗೆ ಪರಹಾರ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ಕೆ.ಆರ್.ಪೇಟೆಯ ಕತ್ತರಘಟದಲ್ಲಿ ಜಮೀನು ವಿಷಯದಲ್ಲಿ ಜಯಕುಮಾರ್ ಎಂಬ ದಲಿತ ಯುವಕನ ಕೊಲೆಯಾಗಿದೆ. ಆತನನ್ನು ಹುಲ್ಲಿನ ಮೆದೆಗೆ ಬೆಂಕಿಹಾಕಿ ಸುಟ್ಟು ಹಾಕಲಾಗಿದೆ. ಕೊಲೆ ಮಾಡಿದ ಆರೋಪಿ ಸಮಾಜಘಾತುಕ ರೌಡಿ ಶೀಟರ್ ಅನಿಲ್ ಕುಮಾರ್ ತಪ್ಪಿಸಿಕೊಂಡಿದ್ದಾನೆ. ಆತನನ್ನು ಪೊಲೀಸರು ಬಂಧಿಸಿಲ್ಲ. ಇದು ಕೊಲೆ ಎಂದು ಜಯಕುಮಾರ ಪತ್ನಿ ದೂರು ನೀಡಿದ್ದರೂ ಪೊಲೀಸರು ಆತ್ಮಹತ್ಯೆ ಎಂದು ಕೇಸು ದಾಖಲಿಸಿಕೊಂಡಿದ್ದಾರೆ.

ಕನಕಪುರ ಬನವಾಸಿ ಗ್ರಾಮದಲ್ಲಿ ನಡೆಯುತ್ತಿದ್ದ ಮಾರಮ್ಮ ಊರ ಹಬ್ಬ ದೇವರ ಉತ್ಸವದಲ್ಲಿ ದಲಿತರು ಪಾಲ್ಗೊಳ್ಳಬಾರದೆಂದು ನಿರ್ಬಂಧಿಸಿ ಸಾಮಾಜಿಕ ಬಹಿಷ್ಕಾರ ಹಾಕಿ ಡಂಗೂರ ಸಾರಿಸುವ ಮೂಲಕ, ಮೇಲ್ಜಾತಿ ಸವರ್ಣೀಯ ಮುಖಂಡರು ಜಾತಿತಾರತಮ್ಯ ಮಾಡಿದ ಘಟನೆ ಮೇ 18 ರಂದು ಜರುಗಿದೆ. ಹೋಟೆಲ್ ಮತ್ತು ಅಂಗಡಿಗಳಿಗೆ ನಿರ್ಬಂಧ ವಿಧಿಸಿದ್ದಾರೆ. 7 ಜನರ ಮೇಲೆ ಕ್ರಮ ಜರುಗಿಸಲು ದೂರು ನೀಡಿದ್ದರೂ ಈ ಕುರಿತು ಪೊಲೀಸರು ಯಾವುದೇ ಕ್ರಮ ಜರುಗಿಸಿಲ್ಲ.

ತುಮಕೂರು ಜಿಲ್ಲೆಯ ಮಧುಗಿರಿ ತಾಲೂಕಿನ ಕವಣದಲ ಗ್ರಾಮದಲ್ಲಿ ದಲಿತರ ದೇವಸ್ಥಾನ ಪ್ರವೇಶ ತಡೆದು ದೌರ್ಜನ್ಯ ನಡೆಸಲಾಗಿದೆ. ಈ ಕುರಿತು ದೊಡ್ಡೇರಿ ಪೊಲೀಸ್ ಠಾಣೆಗೆ ದೂರು ನೀಡಿದರೆ, ಪೊಲೀಸರು ತಡವಾಗಿ ಎಫ್‌ಐಆರ್ ದಾಖಲಿಸಿದ್ದರೂ, ದೌರ್ಜನ್ಯ ತಡೆ ಕಾನೂನಿನ ಅನ್ವಯ ಯಾರನ್ನೂ ಬಂಧಿಸಿಲ್ಲ.

ರಾಮನಗರ ಜಿಲ್ಲೆಯ ಭದ್ರಾಪುರದಲ್ಲಿ ದಲಿತ ಬಾಲಕಿಯ ಸಾವು ಅನುಮಾನಾಸ್ಪದವಾಗಿದ್ದು, ಆಕೆಯ ಮೇಲೆ ಅತ್ಯಾಚಾರ ನಡೆಸಿ, ಆಕೆಯ ಶವವನ್ನು ರೈಲ್ವೆ ಹಳಿಯ ಬಳಿ ಹಾಕಿದ್ದಾರೆ ಎಂದು ಹೇಳಲಾಗುತ್ತಿದೆ. ರೈಲ್ವೆ ಅಪಘಾತವೆಂದು ಬಿಂಬಿಸಲು ಎಫ್‌ಐಆರ್ ಮಾಡುವ ಮೂಲಕ, ಪ್ರಕರಣವನ್ನು ಮುಚ್ಚಿಹಾಕಲು ಪೊಲೀಸರು ಯತ್ನಿಸಿರುವುದು ಕಂಡು ಬರುತ್ತಿದೆ. ಈ ಕುರಿತು ಪ್ರಶ್ನಿಸಿದ ರಾಮನಗರದ ಕಾರ್ಮಿಕ ಮುಖಂಡರ ಮೇಲೆ ಪೊಲೀಸರು ಹಲ್ಲೆ ನಡೆಸಿದ್ದಾರೆ. ಬಾಲಕಿಗೆ ನೀಡಿದ ಸರ್ಕಾರದ ಪರಿಹಾರವನ್ನು ತಡೆಹಿಡಿಯುವ ಪ್ರಯತ್ನ ಕೂಡ ನಡೆದಿದೆ.

ಬೆಂಗಳೂರು ಸ್ವಾತಂತ್ರ್ಯ ಉದ್ಯಾನವನದಲ್ಲಿ ಮೇ 30ರಂದು ದಲಿತ ಹಕ್ಕುಗಳ ಸಮಿತಿ ಕರ್ನಾಟಕ (ಡಿಎಚ್‌ಎಸ್)ನ ಬೆಂಗಳೂರು ಉತ್ತರ ಜಿಲ್ಲೆ ಮತ್ತು ದಕ್ಷಿಣ ಜಿಲ್ಲಾ ಸಮಿತಿಗಳ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು. ರಾಜ್ಯ ಅಧ್ಯಕ್ಷ ಗೋಪಾಲಕೃಷ್ಣ ಹರಳಹಳ್ಳಿ, ಉಪಾಧ್ಯಕ್ಷ ನಾಗರಾಜ್ ನಂಜುಂಡಪ್ಪ, ಪ್ರಧಾನ ಕಾರ್ಯದರ್ಶಿ ಎನ್. ರಾಜಣ್ಣ, ಜಿಲ್ಲಾ ಮುಖಂಡರಾದ ಮಹದೇಶ್, ಹೆಚ್.ಸಿ.ಶಿವಕುಮಾರ್ ರಾಜ್ಯ ಸರ್ಕಾರಿ ನೌಕರರ ಸಮನ್ವಯ ಸಮಿತಿ ಸಂಘದ ಅಧ್ಯಕ್ಷ ಡಿ.ಶಿವಶಂಕರ್, ಜಿಲ್ಲಾ ಮುಖಂಡ ಶರಣಪ್ಪ ವಾಲಿ ಮನು ಮುಂತಾದವರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಮುಖ್ಯಮಂತ್ರಿಯವರ ಕಾರ್ಯದರ್ಶಿಯವರಿಗೆ ಹಾಗೂ ಗೃಹಮಂತ್ರಿ ಪರಮೇಶ್ವರ್ ಅವರ ಕಾರ್ಯದರ್ಶಿಯವರಿಗೆ ಮನವಿ ಪತ್ರ ಸಲ್ಲಿಸಿ ದಲಿತರಿಗೆ ರಾಜ್ಯದಲ್ಲಿ ರಕ್ಷಣೆ ಒದಗಿಸುವಂತೆ ಹಾಗೂ ದೌರ್ಜನ್ಯ ತಡೆಗಟ್ಟುವಂತೆ ಒತ್ತಾಯಿಸಲಾಯಿತು.

ಮಣಿಪಾಲದ ಜಿಲ್ಲಾಧಿಕಾರಿಗೆ ಕಛೇರಿ ಮುಂದೆ ನಡೆದ ಪ್ರತಿಭಟನೆಯಲ್ಲಿ ಡಿಎಚ್‌ಎಸ್‌ನ ಜಿಲ್ಲಾ ಸಂಚಾಲಕ ಸಂಜೀವ ಬಳ್ಕೂರು ಮತ್ತು ಸಂಘದ ಇತರೆ ಮುಖಂಡರು, ಸಿಐಟಿಯು ಮುಖಂಡರಾದ ಸುರೇಶ್ ಕಲ್ಲಾಗಾರ ಸೇರಿದಂತೆ ಇತರೆ ಮುಖಂಡರು ಭಾಗವಹಿಸಿದ್ದರು. ಮಂಡ್ಯ, ತುಮಕೂರು, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ಹಾಗೂ ಗುಲ್ಬರ್ಗಯಲ್ಲಿ ನಡೆದ ಪ್ರತಿಭಟನೆಗಳಲ್ಲಿ ಸಿಪಿಐ(ಎಂ)ನ ಮುಖಂಡರು ಭಾಗವಹಿಸಿ ಡಿಎಚ್‌ಎಸ್‌ನ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿದರು.

ಕಾಂ. ಲಹಾಣು ಕೋಮ್ ನಿಧನ


ಮಹಾರಾಷ್ಟ್ರದ ಸಿಪಿಐ(ಎಂ) ಮತ್ತು ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್)ದ ಹಿರಿಯ ನಾಯಕ, ಮಾಜಿ ಸಂಸದ ಮತ್ತು ಮಾಜಿ ಶಾಸಕ ಕಾಮ್ರೇಡ್ ಲಹಾಣು ಶಿದ್ವಾ ಕೋಮ್ ಮೇ 28ರ ಬೆಳಿಗ್ಗೆ ಅನಾರೋಗ್ಯದಿಂದ ನಿಧನರಾದರು. ಅವರಿಗೆ 86 ವರ್ಷ ವಯಸ್ಸಾಗಿತ್ತು. ಅವರು ಪತ್ನಿ ಹೇಮಲತಾ (ಪಕ್ಷ ಮತ್ತು ಎಐಡಿಡಬ್ಲ್ಯೂಎ ನಾಯಕಿ), ಒಬ್ಬ ಮಗ, ಮಗಳು ಮತ್ತು ಮೂವರು ಮೊಮ್ಮಕ್ಕಳನ್ನು ಅಗಲಿದ್ದಾರೆ.

ಲಹಾಣು ಕೋಮ್ ನವೆಂಬರ್ 10, 1938 ರಂದು ಪಾಲ್ಘರ್ ಜಿಲ್ಲೆಯ ದಹಾಣು ತಹಸಿಲ್‌ನ ಆಗ್ವಾನ್ ಗ್ರಾಮದ ಆದಿವಾಸಿ ಬಡ ರೈತ ಕುಟುಂಬದಲ್ಲಿ ಜನಿಸಿದರು. ಅವರು 1959ರಲ್ಲಿ 20ನೇ ವಯಸ್ಸಿನಲ್ಲಿ ಅವಿಭಜಿತ ಸಿಪಿಐಗೆ ಸೇರಿದರು, ಶೀಘ್ರದಲ್ಲೇ ಪೂರ್ಣಕಾಲಿಕ ಕಾರ್ಯಕರ್ತರಾದರು ಮತ್ತು ಆರು ದಶಕಗಳಿಗೂ ಹೆಚ್ಚು ಕಾಲ ದಹಾಣು, ಜವಾಹರ್ ಮತ್ತು ತಲಸಾರಿ ತಹಸಿಲ್‌ಗಳಲ್ಲಿ ಸತತವಾಗಿ ಕೆಲಸ ಮಾಡಿದರು. ಅವರು ಪಕ್ಷದಲ್ಲಿ ಪ್ರಸಿದ್ಧ ಕಮ್ಯುನಿಸ್ಟ್ ನಾಯಕರಾದ ಶಾಮರಾವ್ ಪರುಳೇಕರ್ ಮತ್ತು ಗೋದಾವರಿ ಪರುಳೇಕರ್ ಅವರ ಮಾರ್ಗದರ್ಶನದಲ್ಲಿ ಬೆಳೆದರು.

ಪಕ್ಷದ ನಾಯಕತ್ವದಲ್ಲಿ ನಡೆದ ಹಲವಾರು ತೀವ್ರ ವರ್ಗ ಮತ್ತು ಸಾಮೂಹಿಕ ಹೋರಾಟಗಳಲ್ಲಿ, ಅವರು 1962–66 ರವರೆಗೆ ಮತ್ತು ಮತ್ತೆ 1975–77ರ ತುರ್ತು ಪರಿಸ್ಥಿತಿಯಲ್ಲಿ ಹಲವಾರು ವರ್ಷಗಳ ಕಾಲ ಜೈಲುವಾಸ ಅನುಭವಿಸಿದರು. ಅವರು ಸಿಪಿಐ(ಎಂ) ರಾಜ್ಯ ಸಮಿತಿಯ ಸದಸ್ಯರಾಗಿ ಮತ್ತು ನಂತರ ರಾಜ್ಯ ಕಾರ್ಯದರ್ಶಿಮಂಡಳಿ ಸದಸ್ಯರಾಗಿ ಮತ್ತು ಹಲವಾರು ದಶಕಗಳ ಕಾಲ ಅಖಿಲ ಭಾರತ ಕಿಸಾನ್ ಸಭೆಯ (ಎಐಕೆಎಸ್) ರಾಜ್ಯ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದರು.

ಲಹಾಣು ಕೋಮ್ 1962ರಲ್ಲಿ ಥಾಣೆ ಜಿಲ್ಲಾ ಪರಿಷತ್(ಜಿಪಿ)ಗೆ ಆಯ್ಕೆಯಾದರು ಮತ್ತು ಎರಡು ಬಾರಿ ಮರು ಆಯ್ಕೆಯಾದರು. ತುರ್ತು ಪರಿಸ್ಥಿತಿಯ ನಂತರದ 1977ರ ಐತಿಹಾಸಿಕ ಸಂಸತ್ ಚುನಾವಣೆಯಲ್ಲಿ ದಹಾಣು(ಎಸ್‌ಟಿ) ಸ್ಥಾನದಿಂದ ಅವರು ಲೋಕಸಭಾ ಸದಸ್ಯರಾಗಿ ಆಯ್ಕೆಯಾದರು ಮತ್ತು 1980ರಲ್ಲಿ ಲೋಕಸಭೆ ವಿಸರ್ಜನೆಯಾಗುವವರೆಗೂ ಆ ಹುದ್ದೆಯಲ್ಲಿಯೇ ಇದ್ದರು. ಅದರ ನಂತರ 1980, 1985 ಮತ್ತು 1990ರ ಚುನಾವಣೆಗಳಲ್ಲಿ ಜವಾಹರ್ (ಎಸ್‌ಟಿ) ಸ್ಥಾನದಿಂದ ಮಹಾರಾಷ್ಟ್ರ ವಿಧಾನಸಭಾ ಸದಸ್ಯರಾಗಿ ಮೂರು ಬಾರಿ ಆಯ್ಕೆಯಾದರು ಮತ್ತು 1995 ರವರೆಗೆ ಶಾಸಕರಾಗಿದ್ದರು. ಅವರು ನಿರಂತರವಾಗಿ ಹಲವಾರು ಜನರ ಸಮಸ್ಯೆಗಳು ಮತ್ತು ಬುಡಕಟ್ಟು ಸಮಸ್ಯೆಗಳನ್ನು ರಾಜ್ಯ ವಿಧಾನಸಭೆಯಲ್ಲಿ ಪರಿಣಾಮಕಾರಿಯಾಗಿ ಎತ್ತಿದರು.

1962ರಲ್ಲಿ, ಶಾಮರಾವ್ ಮತ್ತು ಗೋದಾವರಿ ಪರುಳೇಕರ್ ಅವರು ಆದಿವಾಸಿ ಪ್ರಗತಿ ಮಂಡಳವನ್ನು ಸ್ಥಾಪಿಸಿದರು, ಆಚಾರ್ಯ ಪಿ.ಕೆ. ಅತ್ರೆ, ಬಲರಾಜ್ ಸಹಾನಿ ಮತ್ತು ಪ್ರಬೋಧಂಕರ್ ಠಾಕರೆ ಅವರಂತಹ ಮಹಾರಾಷ್ಟ್ರದ ಪ್ರಸಿದ್ಧ ವ್ಯಕ್ತಿಗಳು ಅದರ ಸ್ಥಾಪಕ ಸಮಿತಿಯ ಸದಸ್ಯರುಗಳಾಗಿದ್ದರು. ಲಹಾಣು ಕೋಮ್ ಈ ಸಂಸ್ಥೆಯ ಅಧ್ಯಕ್ಷರಾಗಿ ಆಯ್ಕೆಯಾದರು ಮತ್ತು ಅವರು ನಿಧನರಾಗುವವರೆಗೂ ಆ ಸ್ಥಾನದಲ್ಲಿ ಕಾರ್ಯನಿರ್ವಹಿಸಿದರು. ಲಹಾಣು ಕೋಮ್‌ರವರ ಮುತುವರ್ಜಿಯಿಂದ, ಮಂಡಲವು ಹಲವಾರು ಶಾಲೆಗಳು, ಹಾಸ್ಟೆಲ್‌ಗಳು, ಜೂನಿಯರ್ ಕಾಲೇಜುಗಳು ಮತ್ತು 1994 ರಲ್ಲಿ ಪ್ರಾರಂಭವಾದ, ಕಾಮ್ರೇಡ್ ಗೋದಾವರಿ ಶ್ಯಾಮರಾವ್ ಪರುಳೇಕರ್ ಅವರ ಹೆಸರಿಡಲಾದ ಹಿರಿಯ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜನ್ನು ನಿರ್ಮಿಸಿದೆ. ತಲಸಾರಿ ಮತ್ತು ದಹಾಣು ತಹಸಿಲ್‌ಗಳಲ್ಲಿರುವ ಈ ಎಲ್ಲಾ ಗುಣಮಟ್ಟದ ಸಂಸ್ಥೆಗಳು ಒಟ್ಟು 8,000ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಹೊಂದಿವೆ, ಅವರಲ್ಲಿ ಹೆಚ್ಚಿನವರು ಬಡ ಆದಿವಾಸಿ ಹುಡುಗಿಯರು ಮತ್ತು ಹುಡುಗರು, ಮತ್ತು ಅವರು ಸುಮಾರು 200



ಸಿಬ್ಬಂದಿಯನ್ನು ನೇಮಿಸಿಕೊಂಡಿದ್ದಾರೆ. ಲಕ್ಷಾಂತರ ವಿದ್ಯಾರ್ಥಿಗಳು ಇಲ್ಲಿ ಉತ್ತಮ ಶಿಕ್ಷಣವನ್ನು ಪಡೆದಿದ್ದಾರೆ. ಈ ಸಂಸ್ಥೆಗಳಲ್ಲಿ ಎಸ್‌ಎಫ್‌ಐ ಅನ್ನು ಕಟ್ಟಲು ಲಹಾಣು ಕೋಮ್ ಯಾವಾಗಲೂ ಮುತುವರ್ಜಿ ವಹಿಸುತ್ತಿದ್ದರು.

ಲಹಾಣು ಕೋಮ್ ಅವರ ನಿಧನದಿಂದಾಗಿ ಸಿಪಿಐ(ಎಂ) ಮತ್ತು ಎಐಕೆಎಸ್ ತಮ್ಮ ಒಬ್ಬ ಪ್ರಮುಖ ಹೋರಾಟಗಾರ ಮತ್ತು ಜನಪ್ರಿಯ ಸಾಮೂಹಿಕ ನಾಯಕರಲ್ಲಿ ಒಬ್ಬರನ್ನು ಕಳೆದುಕೊಂಡಿವೆ. ಅವರು ತಮ್ಮ ಪಕ್ಷದ ಜೀವನದ 66 ವರ್ಷಗಳಿಗೂ ಹೆಚ್ಚು ಕಾಲ ಕೆಂಬಾವುಟಕ್ಕೆ ನಿಷ್ಠರಾಗಿದ್ದರು.

ಜುಲೈ 9, 2025 ರ ಸಾರ್ವತ್ರಿಕ ಮುಷ್ಕರ ಯಶಸ್ವಿಗೆ ಕರೆ

ಕಳೆದ ಜನರಲ್ ಕೌನ್ಸಿಲ್ ಸಭೆಯ ನಂತರದ ಬೆಳವಣಿಗೆಗಳನ್ನು ವಿಶ್ಲೇಷಿಸುವ ಮತ್ತು ಜುಲೈ 9, 2025ರ ಸಾರ್ವತ್ರಿಕ ಮುಷ್ಕರಕ್ಕೆ ನಡೆಯುತ್ತಿರುವ ಸಿದ್ಧತೆಗಳನ್ನು ಪರಿಶೀಲಿಸುವ ಸಿಐಟಿಯು ಜನರಲ್ ಕೌನ್ಸಿಲ್ ಸಭೆಯು ಮೇ 24–26, 2025ರಂದು ಹರಿಯಾಣದ ಸೂರಜ್‌ಕುಂಡ್‌ನಲ್ಲಿ ನಡೆದಿದ್ದು, ಇತರ ವಿಷಯಗಳ ಜೊತೆಗೆ, ಈ ಕೆಳಗಿನ ನಿರ್ಧಾರಗಳನ್ನು ತೆಗೆದುಕೊಂಡಿದೆ. ಎಲ್ಲಾ ಜಿಲ್ಲಾ ಸಮಿತಿಗಳು/ಸಂಘಗಳು ನಿರ್ಧಾರಗಳನ್ನು ತಕ್ಷಣ ಯೋಜಿಸಿ ಕಾರ್ಯಗತಗೊಳಿಸಲು ವಿನಂತಿಸಲಾಗಿದೆ. ಸಿಐಟಿಯು ಜನರಲ್ ಕೌನ್ಸಿಲ್ ಸಭೆಯ ನಿರ್ಧಾರ ಕೆಳಕಂಡತ್ತಿದೆ:

1) ಜುಲೈ 9ರ ಸಾರ್ವತ್ರಿಕ ಮುಷ್ಕರಕ್ಕೆ ನಡೆಯುತ್ತಿರುವ ಸಿದ್ಧತೆಗಳನ್ನು ಭಾರತದ ಕಾರ್ಮಿಕ ವರ್ಗದ ಚಳುವಳಿಯ ಇತಿಹಾಸದಲ್ಲಿ ಅತಿದೊಡ್ಡ ಸಾರ್ವತ್ರಿಕ ಮುಷ್ಕರವನ್ನಾಗಿ ಮಾಡಲು ಮತ್ತಷ್ಟು ತೀವ್ರಗೊಳಿಸಬೇಕು. ಹಿಂದಿನ ನಿರ್ಧಾರದಂತೆ, ಪ್ರತಿಯೊಂದು ಒಕ್ಕೂಟ ಮತ್ತು ಅದರ ಸದಸ್ಯರು ಕೆಲಸದ ಸ್ಥಳದಲ್ಲಿ ಮತ್ತು ವಸತಿ ಪ್ರದೇಶಗಳಲ್ಲಿ ಮೋದಿ ಸರ್ಕಾರದ ಕಾರ್ಮಿಕ ಸಂಹಿತೆಗಳು ಮತ್ತು ಇತರ ಕಾರ್ಮಿಕ ವಿರೋಧಿ, ರೈತ ವಿರೋಧಿ ಮತ್ತು ಜನ ವಿರೋಧಿ, ರಾಷ್ಟ್ರವಿರೋಧಿ ನೀತಿಗಳ ವಿರುದ್ಧ ತಲುಪದ ಜನರನ್ನು ತಲುಪಲು ಅಭಿಯಾನವನ್ನು ಕೈಗೊಳ್ಳಲು ಸಕ್ರಿಯರಾಗಿರಬೇಕು. ಕಾರ್ಮಿಕ ಸಂಹಿತೆಗಳ ಅನುಷ್ಠಾನಕ್ಕೆ ಬಾಕಿ ಇರುವ ರಾಜ್ಯ ಕಾನೂನುಗಳ ಮೂಲಕ ಕಾರ್ಮಿಕ ಸಂಹಿತೆಗಳ ನಿಬಂಧನೆಗಳಿಗೆ ಅನುಗುಣವಾಗಿ ಅಸ್ತಿತ್ವದಲ್ಲಿರುವ ಕಾರ್ಮಿಕ ಕಾನೂನುಗಳನ್ನು ತಿದ್ದುಪಡಿ ಮಾಡಲು ಆಡಳಿತ ವರ್ಗದ ದುರುದ್ದೇಶಪೂರಿತ ಯೋಜನೆಗಳ ಅಂಶಗಳನ್ನು ಸಹ ಈ ಅಭಿಯಾನವು ಒಳಗೊಂಡಿರಬೇಕು. ಸಾರ್ವತ್ರಿಕ ಮುಷ್ಕರದ ಮರು ನಿಗದಿಪಡಿಸಿದ ದಿನಾಂಕಕ್ಕಾಗಿ ನಮ್ಮ ಎಲ್ಲಾ ಒಕ್ಕೂಟಗಳು ಜೂನ್ 12, 2025ರಂದು ಅಥವಾ ಅದಕ್ಕೂ ಮೊದಲು ಸೂಚನೆ ನೀಡಬೇಕು.

ಜುಲೈ 9ರ ಸಾರ್ವತ್ರಿಕ ಮುಷ್ಕರವನ್ನು ಭಾರತದ ಕಾರ್ಮಿಕ ವರ್ಗದ ಚಳುವಳಿಯ ಇತಿಹಾಸದಲ್ಲಿ ಅತಿದೊಡ್ಡ ಸಾರ್ವತ್ರಿಕ ಮುಷ್ಕರವನ್ನಾಗಿ ಮಾಡಲು ಸಿಐಟಿಯು ಜನರಲ್ ಕೌನ್ಸಿಲ್ ಸಭೆಯ ನಿರ್ಧಾರ

2) ಸಾಮಾನ್ಯ ಮಂಡಳಿಯು ಕೈಗೊಂಡ ಕ್ಯೂಬಾ ಸಾಲಿಡಾರಿಟಿ ಅಭಿಯಾನ ಮತ್ತು ಸಾಲಿಡಾರಿಟಿ ನಿಧಿಯ ಪರಿಶೀಲನೆ ನಡೆಸಿತು. ಕೆಲವು ರಾಜ್ಯಗಳು ಮತ್ತು ಒಕ್ಕೂಟದಿಂದ ಇಲ್ಲಿಯವರೆಗೆ ಕೇಂದ್ರದಲ್ಲಿ 24 ಲಕ್ಷ ರೂ.ಗಳನ್ನು ಮಾತ್ರ ಠೇವಣಿ ಮಾಡಲಾಗಿದೆ. ಜುಲೈ 2025ರ ಅಂತ್ಯದ ವೇಳೆಗೆ ಅಮೆರಿಕ ಸಾಮ್ರಾಜ್ಯಶಾಹಿಯ ವಿನ್ಯಾಸಗಳನ್ನು ಬಹಿರಂಗಪಡಿಸಲು ಮತ್ತು ಕಾರ್ಮಿಕರು ಮತ್ತು ಇತರರಿಂದ ಒಗ್ಗಟ್ಟಿನ ನಿಧಿಯ ಸಂಗ್ರಹವನ್ನು ಸಕಾರಾತ್ಮಕವಾಗಿ ಪೂರ್ಣಗೊಳಿಸಲು ಮತ್ತು ಅದನ್ನು ಸಿಐಟಿಯು ಸಾಲಿಡಾರಿಟಿ ಮತ್ತು ಪರಿಹಾರ ನಿಧಿ ಖಾತೆಗೆ ಜಮಾ ಮಾಡಲು ಅಭಿಯಾನವನ್ನು ಮತ್ತಷ್ಟು ಕೈಗೊಳ್ಳಲು ಜನರಲ್ ಕೌನ್ಸಿಲ್ ನಿರ್ಧರಿಸಿದೆ. ಪ್ರತಿಯೊಬ್ಬ ಕಾರ್ಮಿಕನನ್ನು ತಲುಪಲು ಪ್ರಯತ್ನಿಸಬೇಕು. ಎಲ್ಲಾ ಜಿಲ್ಲಾ ಸಮಿತಿಗಳು ಮತ್ತು ಸಂಘಗಳು ಇದಕ್ಕಾಗಿ ತುರ್ತು ಉಪಕ್ರಮವನ್ನು ತೆಗೆದುಕೊಳ್ಳಬೇಕು.

3) ಯುಎಸ್ಎಸ್ಆರ್‌ನ ಕೆಂಪು ಸೇನೆಯ ಫ್ಯಾಸಿಸಂ ವಿರುದ್ಧದ ವಿಜಯದ 80ನೇ ವಾರ್ಷಿಕೋತ್ಸವ ಮತ್ತು ಡಬ್ಲ್ಯುಎಫ್‌ಟಿಯುನ 80ನೇ ಸಂಸ್ಥಾಪನಾ ವರ್ಷವನ್ನು ವಿಚಾರ ಸಂಕಿರಣಗಳು/ವಿಚಾರ ಸಂಪರ್ಕಗಳು ಮತ್ತು ಇತರ ಶೈಕ್ಷಣಿಕ ಕಾರ್ಯಕ್ರಮಗಳ ಮೂಲಕ ರಾಜ್ಯ ಮತ್ತು ಜಿಲ್ಲಾ ಸಮಿತಿಗಳು ದೇಶಾದ್ಯಂತ ಆಚರಿಸಬೇಕು. ಫ್ಯಾಸಿಸಂನಿಂದ ಜಗತ್ತನ್ನು ರಕ್ಷಿಸುವಲ್ಲಿ ಸಮಾಜವಾದಿ ವ್ಯವಸ್ಥೆಯ ಸಾಧನೆಗಳ ಸಂದೇಶವನ್ನು ಸಾರಲು ಕೇಂದ್ರ ಸಮಿತಿಗಳು ಸಹ ಇದನ್ನು ಬಳಸಬೇಕು. ರಾಷ್ಟ್ರದ ಆಡಳಿತದಲ್ಲಿ ಹೆಚ್ಚುತ್ತಿರುವ ನವ ಫ್ಯಾಸಿಸ್ಟ್ ಗುಣಲಕ್ಷಣಗಳ ಬಗ್ಗೆ ಸದಸ್ಯರಿಗೆ ಶಿಕ್ಷಣ ನೀಡಲು ಮತ್ತು ನವ ಉದಾರವಾದಿ ದಾಳಿಯೊಂದಿಗೆ ವಿಭಜಿತ ಹಿಂದುತ್ವ ಸಿದ್ಧಾಂತದ ಮೂಲಕ ಭಾರತದಲ್ಲಿ ವ್ಯಕ್ತವಾಗಿರುವ ಅದರ ಕಾರ್ಮಿಕ ವಿರೋಧಿ ವಿಷಯವನ್ನು ಬಹಿರಂಗಪಡಿಸಲು ಇದನ್ನು ಬಳಸಬೇಕು.

4) 2024ರ ಸದಸ್ಯತ್ವದ ಆಧಾರದ ಮೇಲೆ 1300 ಪ್ರತಿನಿಧಿಗಳೊಂದಿಗೆ ಸಿಐಟಿಯುನ 18ನೇ ಸಮ್ಮೇಳನವನ್ನು ಆಂಧ್ರಪ್ರದೇಶದ ವಿಶಾಖಪಟ್ಟಣದಲ್ಲಿ ಡಿಸೆಂಬರ್ 31, 2025ರಿಂದ ಜನವರಿ 4ರವರೆಗೆ ನಡೆಸಲು ಮತ್ತು ಸಮ್ಮೇಳನ ಪ್ರಕ್ರಿಯೆಯ ಭಾಗವಾಗಿ 2025ರ ನವೆಂಬರ್ 1–2ರಂದು ಹೈದರಾಬಾದ್‌ನಲ್ಲಿ 13ನೇ ಅಖಿಲ ಭಾರತ ದುಡಿಯುವ ಮಹಿಳೆಯರ ಸಮಾವೇಶವನ್ನು ನಡೆಸಲು ಜನರಲ್ ಕೌನ್ಸಿಲ್ ನಿರ್ಧರಿಸಿತು. ಜಿಲ್ಲಾ ಸಮಿತಿಗಳು/ಸಂಘಗಳು ತಮ್ಮ ವಾರ್ಷಿಕ ಆದಾಯ ವರದಿಗಳು/ಸದಸ್ಯತ್ವ ವಿವರಗಳು ಮತ್ತು ಸಂಯೋಜನೆ ಶುಲ್ಕಗಳನ್ನು ಜೂನ್ 30, 2025 ರೊಳಗೆ ಕೇಂದ್ರಕ್ಕೆ ಸಲ್ಲಿಸಲು ಕೋರಲಾಗಿದೆ. ಎಲ್ಲಾ ಜಿಲ್ಲಾ ಸಮಿತಿಗಳು ಮತ್ತು ಕೆಳಹಂತದ ಒಕ್ಕೂಟಗಳ ಸಮ್ಮೇಳನಗಳು, ಸಂಬಂಧಿತ ಮಟ್ಟದಲ್ಲಿ ದುಡಿಯುವ ಮಹಿಳಾ ಸಮಾವೇಶಗಳನ್ನು ನವೆಂಬರ್ 2025 ರೊಳಗೆ ಪೂರ್ಣಗೊಳಿಸಬೇಕು.

5) ಸಿಐಟಿಯು ಸಮ್ಮೇಳನಗಳಲ್ಲಿ ಮಹಿಳಾ ಉಪ ಸಮಿತಿಗಳು ಮತ್ತು ದುಡಿಯುವ ಮಹಿಳಾ ಸಮನ್ವಯ ಸಮಿತಿಗಳ ರಚನೆ ಮತ್ತು ಜಿಲ್ಲಾ/ಒಕ್ಕೂಟ ಸಮ್ಮೇಳನಗಳಿಗೆ ಮುಂಚಿತವಾಗಿ ದುಡಿಯುವ ಮಹಿಳಾ ಸಮಾವೇಶಗಳನ್ನು ನಡೆಸುವುದು ಸೇರಿದಂತೆ ಸೂರಜ್‌ಕುಂಡ್‌ನಲ್ಲಿ 2025ರ ಮೇ 23ರಂದು ನಡೆದ ದುಡಿಯುವ ಮಹಿಳೆಯರ ಅಖಿಲ ಭಾರತ ಸಮನ್ವಯ ಸಮಿತಿ ಸಭೆಯ ಸಾಮಾನ್ಯ ಮಂಡಳಿ ಹಂತದ ನಿರ್ಧಾರಗಳನ್ನು ಸಾಮಾನ್ಯ ಮಂಡಳಿಯು ಅನುಮೋದಿಸಿತು. ನಿರ್ಧಾರಗಳ ಕುರಿತು ಪ್ರತ್ಯೇಕ ಸುತ್ತೋಲೆಯನ್ನು ಕಳುಹಿಸಲಾಗುವುದು.

6) ಸಾಮಾನ್ಯ ಮಂಡಳಿಯು 'ಕೃತಕ ಬುದ್ಧಿಮತ್ತೆ ಮತ್ತು ರೊಬೊಟಿಕ್ಸ್ ಕುರಿತು ಪ್ರಾಥಮಿಕ ಟಿಪ್ಪಣಿ'ಯನ್ನು ಚರ್ಚಿಸಿತು ಮತ್ತು ವಿವಿಧ ವಲಯಗಳಲ್ಲಿ, ವಿಶೇಷವಾಗಿ ಆಧುನಿಕ ಉತ್ಪಾದನೆ ಮತ್ತು ಆರೋಗ್ಯ ವಲಯಗಳಲ್ಲಿ, ಇತರ ಕೈಗಾರಿಕೆಗಳು/ವಲಯಗಳಲ್ಲಿ, ಅದರ ಪ್ರಭಾವವನ್ನು ಮತ್ತಷ್ಟು ಅಧ್ಯಯನ ಮಾಡಲು ನಿರ್ಧರಿಸಿತು. ಕರ್ನಾಟಕ, ತಮಿಳುನಾಡು, ತೆಲಂಗಾಣ, ಮಹಾರಾಷ್ಟ್ರ, ದೆಹಲಿ–ಎನ್‌ಸಿಆರ್ ಮತ್ತು ರಾಜಸ್ಥಾನದ ಎಲ್ಲಾ ರಾಜ್ಯ ಸಮಿತಿಗಳು, ಉತ್ಪಾದನಾ ವಲಯದಲ್ಲಿ ಅಂಗಡಿ ಮಟ್ಟದಲ್ಲಿ ಮತ್ತು ಆರೋಗ್ಯ ವಲಯದಲ್ಲಿ ಎಫ್‌ಎಂಆರ್‌ಎಐ ಮೇಲೆ ಅದರ ಪ್ರಭಾವದ ಬಗ್ಗೆ ನಿರ್ದಿಷ್ಟ ಅಧ್ಯಯನವನ್ನು ಸಮಯಕ್ಕೆ ಸರಿಯಾಗಿ ಮಾಡಲು ನಿರ್ದೇಶಿಸಲಾಗಿದೆ. ಜನರಲ್ ಕೌನ್ಸಿಲ್‌ನಲ್ಲಿ ಈ ವಿಷಯದ ಕುರಿತು ಮಾತನಾಡಿದ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ಆದಷ್ಟು ಬೇಗ ಸಿಐಟಿಯು ಕೇಂದ್ರಕ್ಕೆ ಲಿಖಿತವಾಗಿ ಸಲ್ಲಿಸಬೇಕು. ಎಲ್ಲಾ ರಾಜ್ಯ ಸಮಿತಿಗಳು ಮತ್ತು ಒಕ್ಕೂಟಗಳು ಈ ವಿಷಯದ ಕುರಿತು ಜನರಲ್ ಕೌನ್ಸಿಲ್‌ನಲ್ಲಿ ಮಂಡಿಸಲಾದ ಪ್ರಬಂಧವನ್ನು ಸಾಮೂಹಿಕವಾಗಿ ಚರ್ಚಿಸಲು ಸಹ ವಿನಂತಿಸಲಾಗಿದೆ.

ಎಲ್ಲಾ ಜಿಲ್ಲಾ ಸಮಿತಿಗಳು ಮತ್ತು ಸಂಘಗಳು ಮೇಲಿನ ನಿರ್ಧಾರಗಳನ್ನು ಸರಿಯಾದ ಯೋಜನೆ ಮತ್ತು ಅನುಷ್ಠಾನದೊಂದಿಗೆ ಕಾರ್ಯಗತಗೊಳಿಸಲು ವಿನಂತಿಸಲಾಗಿದೆ.

ಸಾಮಾಜಿಕ ನ್ಯಾಯದ ಅನುಷ್ಠಾನ ಕುರಿತು, ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ, ಅಪಾಯಕಾರಿ ಕೆಲಸಗಳಲ್ಲಿ ಮಹಿಳೆಯರ ತೊಡಗಿಸುವಿಕೆ, ಇತರೆ ವಿಚಾರಗಳ ಕುರಿತು, ಜಿನೇವಾದಲ್ಲಿ 2025 ಜೂನ್ 02 ರಿಂದ 13 ರ ವರೆಗೆ ನಡೆಯಲಿರುವ 113ನೇ ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆ (ILO) ಸಮ್ಮೇಳನದಲ್ಲಿ ಭಾರತ ದೇಶವನ್ನು ಪ್ರತಿನಿಧಿಸಿ ಸಿಐಟಿಯು ರಾಷ್ಟ್ರೀಯ ಕಾರ್ಯದರ್ಶಿ ಕಾಮ್ರೇಡ್ ಕೆ.ಎನ್. ಉಮೇಶ್ ರವರು ಭಾಗವಹಿಸುತ್ತಿದ್ದಾರೆ.



ಕೋಮುವಾದದ ನಿಗಿನಿಗಿ ಕೆಂಡವಾದ......

ಪುಟ 3 ರಿಂದ

ಪರಿಗಣಿಸಬೇಕೆಂಬುದು ಸಹಜ ನಿರೀಕ್ಷೆ. ಅದು ಅವರಿಗೆ ಅವರ ಪಕ್ಷ ನೀಡಿದ ಹೊಣೆಗಾರಿಕೆ, ಮತ್ತು ಒಂದು ಧಾರ್ಮಿಕ ಅಲ್ಪ ಸಂಖ್ಯಾತ ಸಮುದಾಯ ಇಂತಹ ಸಂದರ್ಭಗಳಲ್ಲಿ ಎದುರಿಸುವ ತಲ್ಲಣಗಳು ಅವರಿಗೆ ಅರ್ಥವೂ ಆಗಬೇಕು. ಆದರೆ ಅವರೂ ಇವುಗಳನ್ನು ಬಹಳ ಗಂಭೀರವಾಗಿ ಪರಿಗಣಿಸಿದಂತೆ ತೋರುತ್ತಿಲ್ಲ. ಇವಕ್ಕೆಲ್ಲ ಇರಬಹುದಾದ ಅಷ್ಟೊಂದು ಗುರುತರ ಕಾರಣ ಏನಿರಬಹುದು? ಊಹೆ ಮಾಡಿದರೆ ಅರಿಯುವುದು ಕಷ್ಟವೇನಲ್ಲ.

ದಕ್ಷಿಣ ಕನ್ನಡದ ಅಲ್ಪ ಸಂಖ್ಯಾತ ಸಮುದಾಯದ ಕಾಂಗ್ರೆಸ್ ಲೀಡರ್ಸ್ ಈಗ ಪ್ರಕಟಿತವಾಗಿಯೇ ಇನ್ನು ಸಹಿಸಲು ಸಾಧ್ಯವಿಲ್ಲ ಎಂಬ ಸಂದೇಶವನ್ನು ನೀಡುತ್ತಿದ್ದಾರೆ. ಇದು ಕಾಂಗ್ರೆಸ್‌ಗೆ ಮಾತ್ರವಲ್ಲ ಪ್ರಜ್ಞಾವಂತರಿಗೆಲ್ಲ ಎಚ್ಚರಿಕೆಯ ಸಂದೇಶ. ಬಹುಸಂಖ್ಯಾತ ಕೋಮುವಾದ ಬಲಪಡೆದಂತೆಲ್ಲ ಅಲ್ಪಸಂಖ್ಯಾತ ಮೂಲಭೂತ ಮತೀಯವಾದ ತನ್ನ ಇರುವನ್ನು ಭದ್ರಪಡಿಸಿಕೊಳ್ಳುತ್ತದೆ. ಅದರ ಅಪಾಯವನ್ನು ಹಗುರವಾಗಿ ಪರಿಗಣಿಸುವಂತಿಲ್ಲ.

ಕೆಲವು ದಶಕಗಳಿಂದ ಹರಿಬಿಟ್ಟ ಕೋಮುವಿಷ, ಧರ್ಮದ ಹೆಸರಿನ ಅಮಲು, ಹುಸಿ ರಾಷ್ಟ್ರಭಕ್ತಿಯ ಘಮಲು ಎಲ್ಲ ವಿಭಾಗಗಳನ್ನೂ ನಿಧಾನವಾಗಿ ಆವರಿಸಿಕೊಳ್ಳುತ್ತಿದೆ. ಇದಕ್ಕೊಂದು ಸ್ಪಷ್ಟ ಉದಾಹರಣೆ ಇತ್ತೀಚೆಗೆ ಆಸ್ಪತ್ರೆಯೊಂದರಲ್ಲಿ ರೋಗಿಯ ಭೇಟಿಗೆ ಸಂಭಂದಿಸಿದಂತೆ ನಡೆದ ವಾಗ್ವಾದ ಕೊನೆಯಲ್ಲಿ ಧರ್ಮರಾಜಕಾರಣಕ್ಕೆ ತಿರುಗಿ, ಅದೀಗ ಘಟನೆಯನ್ನು ಖಂಡಿಸಿ ಮಾತನಾಡಿದರು ಮತ್ತು ಅದನ್ನು ಪ್ರಸಾರ ಮಾಡಿದರು ಎಂಬ ಏಕೈಕ ಕಾರಣಕ್ಕೆ ನ್ಯಾಯಾಲಯದ ಮೂಲಕ ದೂರು ದಾಖಲಿಸಿರುವುದು. ಶಿಕ್ಷಣದ ಅವಕಾಶ ಸಿಕ್ಕ ಜನರು ಅದರಿಂದ ಜ್ಞಾನ ಪಡೆಯದಿದ್ದರೆ ಕೇವಲ ಪದವಿಗಳು, ಹಣ, ಹೆಸರು ಕೊಡಿಸಬಹುದೇ ಹೊರತೂ ವಿವೇಕವನ್ನಲ್ಲ ಎಂಬುದಕ್ಕೆ ಇದೂ ಒಂದು ಉದಾಹರಣೆ. ಹೀಗೆ ಸಿಕ್ಕ ಸಿಕ್ಕ ಸಂಗತಿಗಳನ್ನು ಕೋಮುದ್ವೇಷಕ್ಕೆ ತಿರುಗಿಸುವ ಜನ ಅರ್ಥ ಮಾಡಿಕೊಳ್ಳಬೇಕು, ತಾವು ಸೃಷ್ಟಿಸಿ ಬಿಟ್ಟು ಹೋಗುವ ಜಗತ್ತು ಮುಂದೆ ಹೇಗಾಗಬಹುದು ಎಂಬುದಕ್ಕೆ ನೆರೆಯ ಅಫ್ಘಾನಿಸ್ತಾನದ ಉದಾಹರಣೆ ಇದೆಯಲ್ಲವೇ?

ಪೊಲೀಸರು ಪ್ರಗತಿಪರರ ಮೇಲೇ ಕಣ್ಣಿಟ್ಟು ಕಾಯುತ್ತಾರೆ

ದಕ್ಷಿಣ ಕನ್ನಡದ ಎಡ ಪ್ರಗತಿಪರ ಸಂಘಟನೆಗಳು ತಮ್ಮ ಪ್ರತಿರೋಧ ಒಡ್ಡುತ್ತಲೇ ಇದ್ದಾರೆ. ಅಷ್ಟಿಷ್ಟು ಜನ ಬೆಂಬಲವೂ ಇದೆ. ಆದರೆ ಕೋಮುದ್ವೇಷ ಹರಡದಂತೆ, ವಿಧ್ವಂಸಕ ಮನೋವೃತ್ತಿಗಳನ್ನು ಮಟ್ಟಹಾಕಬೇಕಾದ ಪೋಲಿಸರು ಪ್ರಗತಿಪರರ ಮೇಲೆ ಕಣ್ಣಿಟ್ಟು ಕಾಯುತ್ತಾರೆ. ಅವಕಾಶ ಸಿಕ್ಕಲ್ಲಿ ಅವರ ಮೇಲೇ ಕ್ರಮ ಕೈಗೊಳ್ಳಲು ಮುಂದಾಗುತ್ತಾರೆ. ಇದು ರಾಜ್ಯದ ಗೃಹಮಂತ್ರಿಗಳ ಗಮನದಲ್ಲಿ ಇರಬೇಕಲ್ಲವೇ? ಇನ್ನು ನಾಗರಿಕರೆಂದು ಕರೆದುಕೊಳ್ಳುವ ಸಮಾಜ, ಇಡೀ ರಾಜ್ಯದ ಅರೆಪ್ರಜ್ಞಾವಸ್ಥೆ ಸ್ಥಿತಿಯಲ್ಲಿ ಇರುವ ದೊಡ್ಡ ಸಂಖ್ಯೆಯ ಜನರು ರಾಜ್ಯದಾದ್ಯಂತ ಇದನ್ನು ಪ್ರತಿಭಟಿಸದಿದ್ದಲ್ಲಿ, ಕೇವಲ ವೀರಾವೇಶದ ಭಾಷಣಗಳಿಂದಲೇ ಎಲ್ಲವನ್ನೂ ನಿಯಂತ್ರಿಸಿಬಿಡುವ ಭ್ರಮೆಯಲ್ಲಿ ಇರುವ ರಾಜ್ಯದ ಮುಖ್ಯ ಮಂತ್ರಿಗಳು, ಮತ್ತವರ ಸಚಿವ ಗಣ ಹೀಗೇ ಕಾಲದೂಡುವುದರಲ್ಲಿ ಸಂಶಯವಿಲ್ಲ.

ಬಾಯ್ತಪ್ಪಿನಿಂದ ಬಂದ ಮಾತುಗಳಲ್ಲ ಇವು

ನಾವೀಗ ಗಮನಿಸಬೇಕಾದುದು, ಬಿಜೆಪಿಯಿಂದ ಈಗ ಉಚ್ಚಾಟಿತ ನಾಯಕ ಯತ್ನಾಳ್, 'ದಿನೇಶ್ ಗುಂಡೂರಾವ್ ಮನೆಯಲ್ಲಿ ಅರ್ಧ ಪಾಕಿಸ್ತಾನ ಇದೆ' ಎಂದು ಹೇಳಿದ್ದಾಗಲಿ, ಎನ್.ರವಿ ಕುಮಾರ್ ಬಿಜೆಪಿಯ ಶಾಸಕರು, ವಿಧಾನಪರಿಷತ್ತಿನ ಮುಖ್ಯ ಸಚೇತಕರು, ದಮನಿತ ಸಮುದಾಯದಿಂದ ಬಂದವರಾಗಿಯೂ ಕಲ್ಬುರ್ಗಿಯ ಜಿಲ್ಲಾಧಿಕಾರಿ ಮುಸ್ಲಿಂ ಸಮುದಾಯಕ್ಕೆ ಸೇರಿದವರೆಂಬ ಕಾರಣಕ್ಕೇ 'ಅವರು ಪಾಕಿಸ್ತಾನದಿಂದ ಬಂದವರಾ?' ಎಂಬ ಪ್ರಶ್ನೆ ಕೇಳಿದ್ದು, ಮಧ್ಯಪ್ರದೇಶದ ಸಚಿವರೊಬ್ಬರು ಕರ್ನಲ್ ಸೋಫಿಯಾರನ್ನು ಪಾಕಿಸ್ತಾನದವರ ಸೋದರಿ ಎಂದಿದ್ದು, ಭಾಜಪದ ಹರ್ಯಾಣಾದ ರಾಜ್ಯಸಭಾ ಸದಸ್ಯ, ಸಂಸದ ರಾಮಚಂದರ್ ಜಂಗ್ರಾ ಪಹಲ್ಗಾಮ್ ದುರಂತದ ಸಂದರ್ಭದಲ್ಲಿ ಅಲ್ಲಿದ್ದ ಮಹಿಳೆಯರು ವೀರಾಂಗನೆಯರ ತರಹ ಹೋರಾಡಲಿಲ್ಲ ಎಂದು ಮಾಡಿದ ಅಸಂಬದ್ಧ ಹೇಳಿಕೆಗಳು, ಇವೆಲ್ಲ ಬಾಯ್ತಪ್ಪಿನಿಂದ ಬಂದ ಮಾತುಗಳಲ್ಲ. ನೈತಿಕತೆಯನ್ನು ಕಳೆದುಕೊಂಡ ನಾಲಿಗೆ ಮತ್ತು ನಂಜು ತುಂಬಿದ ಮೆದುಳಿನಿಂದ ಬರುವ ದುರುದ್ದೇಶಪೂರ್ವಕ ಘೋಷಣೆಗಳು ಅವು. ಇದರ ಹಿಂದೆ ಒಂದು ನಿರ್ದಿಷ್ಟ ಸೂತ್ರವಿದೆ. ಪ್ರಚೋದಿತ ಮೆದುಳು ವಿವೇಕವನ್ನು ಕಳೆದುಕೊಳ್ಳುತ್ತದೆ. ಅಲ್ಲಿಗೆ ಅವರ ರಾಜಕೀಯ ಉದ್ದೇಶ ಈಡೇರುತ್ತದೆ. ಮತ್ತು ಬಡ, ಅಸಹಾಯಕ ಸಮುದಾಯಗಳ ನಿರುದ್ಯೋಗಿ ಯುವಕರು ಕೈಯ್ಯಲ್ಲಿ ತಲವಾರ್ ಹಿಡಿದು ಜನ್ಮ ಪಾವನವಾಯಿತೆಂದು ಬೀಗುತ್ತಾರೆ.

ಕರ್ನಾಟಕವನ್ನು ಗುಜರಾತ್ ಉತ್ತರಪ್ರದೇಶಗಳಂತೆ ಕೋಮುವಾದಿಗಳ ಆಟಾಟೋಪಕ್ಕೆ ಒಪ್ಪಿಸಿ, ಕುವೆಂಪುರವರ ಸಾಲುಗಳನ್ನು ಗುಣುಗುಣಿಸುತ್ತ ಕಾಲ ತಳ್ಳುವುದೇ ಅಥವಾ ನಾವೂ ಏನಾದರೂ ಮಾಡಬಹುದೆ? ಇದು ಎಲ್ಲರಿಗೂ ಕಾಡಿದರೆ ಈಗಲೂ ಕಾಲಮಿಂಚಿಲ್ಲ.

ಗಾಜಾದಲ್ಲಿ ನರಮೇಧದ ಲೈವ್‌ಸ್ಟ್ರೀಮ್

ಪ್ರಕಾಶ್ ಕಾರಟ್



ಇಸ್ರೇಲ್‌ನ ಕ್ಷಿಪಣಿಯೊಂದು ಮನೆಯ ಮೇಲೆ ನಡೆಸಿದ ದಾಳಿಯಿಂದ 12 ವರ್ಷದ ಪ್ಯಾಲೆಸ್ಟೀನಿ ಬಾಲಕಿ ಯಾಕೀನ್ ಹಮ್ಮದ್ ದೇಹ ಚೂರು ಚೂರಾಗಿ ಮೃತಪಟ್ಟಳು. ಯಾಕೀನ್‌ಳನ್ನು ಗಾಜಾದ ಆ್ಯನೆ ಫ್ರಾಂಕ್ ಎಂದು ಸರಿಯಾಗಿಯೇ ಕರೆಯಲಾಗಿದೆ. ಘೋರ ನರಮೇಧದ (ಹೊಲೊಕಾಸ್ಟ್), ನಾಜಿ–ಆಕ್ರಮಣದಿಂದ ಉಧ್ವಸ್ತಗೊಂಡ ಪ್ರದೇಶದ ಬಳಿಯ ಕಟ್ಟಡದ ಅಟ್ಟದ ಮೇಲೆ ದಿನಚರಿಯನ್ನು ನಿರ್ವಹಿಸಿದ ಆ್ಯನೆಯಂತೆ ಯಾಕೀನ್ ಕೂಡ ತನ್ನ ಸುತ್ತಮುತ್ತಲಿನ ಇಸ್ರೇಲ್ ಆಕ್ರಮಣದ ಘೋರತೆಯನ್ನು ದಾಖಲಿಸಿದ್ದಳು. ಈ ಬಾರಿ ಅದು ಡಿಜಿಟಲ್ ಡೈರಿಯಾಗಿದ್ದು ತನ್ನ ಜನರು ಎದುರಿಸುತ್ತಿರುವ ಬರ್ಬರತೆಯನ್ನು ದಾಖಲಿಸಿದೆ.

ವಿಪರ್ಯಾಸವೆಂದರೆ, ಇಸ್ರೇಲ್ ಪ್ರಭುತ್ವದ ನೈತಿಕತೆಗೆ ಮತ್ತು ತಮ್ಮ ವೇದನೆಗೆ ಹೊಲೊಕಾಸ್ಟ್ (ನಾಜಿಗಳಿಂದಾದ ಮಹಾ ಹತ್ಯಾಕಾಂಡ) ಕಾರಣವೆಂದು ಹೇಳುವ ಪ್ರಸಕ್ತ ಕಾಲದ ಇಸ್ರೇಲಿ ಝಿಯೋನಿಸ್ಟ್‌ಗಳು, ಈಗ ಅದೇ ರೀತಿಯ ದಬ್ಬಾಳಿಕೆಯ ಧೋರಣೆಯನ್ನು ಅನುಸರಿಸುತ್ತಿದ್ದಾರೆ. ಯಾಕೀನ್ ಒಂದು ನಿರಾಶ್ರಿತ ಶಿಬಿರದಿಂದ ಇನ್ನೊಂದಕ್ಕೆ ಸ್ಥಳಾಂತರಗೊಳ್ಳುತ್ತಾ ವಿಡಿಯೋಗಳನ್ನು ಚಿತ್ರೀಕರಿಸಿದಳು ಹಾಗೂ ಅವುಗಳನ್ನು ಇನ್‌ಸ್ಟಾಗ್ರಾಮ್‌ನಲ್ಲಿ ಪೋಸ್ಟ್ ಮಾಡಿ ಗಾಜಾದಲ್ಲಿನ ಘೋರ ವಾಸ್ತವತೆಯನ್ನು ಜಗತ್ತಿನ ಗಮನಕ್ಕೆ ತಂದಿದ್ದಳು. ಮಾಧ್ಯಮ ಕಾರ್ಯಕರ್ತೆಗಿಂತ ಹೆಚ್ಚಾಗಿ ಈ ಬಾಲಕಿ ಮಾನವೀಯ ನೆರವಿನ ಕಾರ್ಯದಲ್ಲಿ ಒಳಗೊಂಡಿದ್ದಳು. ಯುದ್ಧದಿಂದ ಜರ್ಝರಿತವಾದ ಗಾಜಾದಲ್ಲಿ ಅಸಹಾಯಕ ಪ್ಯಾಲೆಸ್ತೀನಿಯರಿಗೆ ನೆರವಾಗುತ್ತಿದ್ದಳು.

ಯಾಕೀನ್‌ಳಂತಹ ದಿಟ್ಟ ಮಾಧ್ಯಮ ಕಾರ್ಯಕರ್ತೆಯರ ಕಾರಣದಿಂದ ಅಮ್ನೆಸ್ಟಿ ಇಂಟರ್‌ನ್ಯಾಷನಲ್ 'ಲೈವ್–ಸ್ಟ್ರೀಮ್ಡ್ ಜನೊಸೈಡ್' (ನರಮೇಧದ ನೇರ–ಪ್ರಸಾರ) ಎಂಬ ಪದವನ್ನು ಹೊಸದಾಗಿ ಟಂಕಿಸಿದೆ. ಗಾಜಾದಲ್ಲಿ ಮಕ್ಕಳನ್ನು ಟಾರ್ಗೆಟ್ ಮಾಡುತ್ತಿರುವುದು ಆಕಸ್ಮಿಕವೇನೂ ಅಲ್ಲ. ಮುಗ್ಧ ಮಕ್ಕಳನ್ನು ಕೂಡ ಹಮಾಸ್‌ನೊಂದಿಗೆ ಶಾಮೀಲಾದವರು ಎಂದು ಹಣೆಪಟ್ಟಿ ಕಟ್ಟುವ ಕುತ್ಸಿತ ಸಿದ್ಧಾಂತದ ಫಲಿತಾಂಶ ಇದಾಗಿದೆ. ಝಿಯೋನಿಸ್ಟ್ ರಾಜಕಾರಣಿಗಳು ಉದ್ದೀಪಿಸಿದ ಉನ್ಮಾದದಲ್ಲಿ ಈ ಅಭಿಪ್ರಾಯ ಆಳವಾಗಿ ಬೇರೂರಿದೆ. ಬೆಂಜಮಿನ್ ನೆತನ್ಯಾಹು ಸರಕಾರದ ನಿಕಟ ಸಹವರ್ತಿಯಾದ ಮೋಷೆ ಫೀಗ್ಲಿನ್ ಕೂಡ ಇದನ್ನು ಸ್ಪಷ್ಟವಾಗಿ ಹೇಳಿದ್ದಾರೆ: "ಗಾಜಾದ ಪ್ರತಿಯೊಂದು ಮಗು ಕೂಡ ಶತ್ರುವೇ ಆಗಿದೆ" ಎಂದವರು ಹೇಳಿಕೆ ನೀಡಿದ್ದಾರೆ. ಇಂಥ ಹೇಳಿಕೆಯ ಧಾಷ್ಟ್ಯತೆ ಅಭೂತಪೂರ್ವವಾದುದಾಗಿದೆ. ಇಂಥ ಎಲ್ಲ ಮಕ್ಕಳನ್ನು ಮಿಲಿಟರಿ ವಸ್ತುವಾಗಿ ನಾಶಮಾಡಲು ಬೆಂಬಲ ನೀಡುವುದಾಗಿ ಹೇಳುವ ಮಟ್ಟಕ್ಕೂ ಕೆಲವು ಉಗ್ರಗಾಮಿಗಳು ಹೋಗಿದ್ದಾರೆ.

ಗಾಜಾದ 365 ಚದರ ಕಿಲೋ ಮೀಟರ್ ಪ್ರದೇಶವನ್ನು ವಶಕ್ಕೆ ಪಡೆದು 'ಶುದ್ಧೀಕರಿಸುವ' ಉದ್ದೇಶದಿಂದ ಹೆಚ್ಚುವರಿ ಸೇನೆಯನ್ನು ನಿಯೋಜಿಸುವುದು ಇಸ್ರೇಲ್‌ನ ಇತ್ತೀಚಿನ ಯೋಜನೆಗಳಲ್ಲಿ ಸೇರಿದೆ. ಆ ಪ್ರದೇಶದ ಶೇ. 70ರಷ್ಟನ್ನು ಈಗಾಗಲೇ ಪ್ಯಾಲೆಸ್ತೀನಿಯರು 'ಪ್ರವೇಶಿಸಬಾರದ ವಲಯ' (ನೋ–ಗೋ ಝೋನ್) ಎಂದು ಪರಿವರ್ತಿಸಲಾಗಿದೆ. ಗಾಜಾದ ಬಹುತೇಕ ಜನರನ್ನು, ಈಗಾಗಲೇ ವಸ್ತುಶಃ ನೆಲಸಮಗೊಳಿಸಲಾಗಿರುವ ದಕ್ಷಿಣ ತುದಿಯ ರಫಾಹ್ ನಗರಕ್ಕೆ ಓಡಿಸುವುದು ಉದ್ದೇಶವಾಗಿದೆ. ಖಾನ್ ಯೂನಿಸ್ ಮತ್ತು ಡೀರ್ ಅಲ್–ಬಲಾಹ್‌ನಂತಹ ನಗರಗಳು ಪ್ರತಿನಿತ್ಯದ ನಾಶಕ್ಕೆ ಪರ್ಯಾಯದಂತಿವೆ.

ವಿಪರ್ಯಾಸವೆಂಬಂತೆ, 'ಮಾನವೀಯ ವಲಯಗಳು' ಎಂದು ಹೆಸರಿಸಲಾಗಿರುವ ಇಸ್ರೇಲ್ ನಿಯಂತ್ರಿತ ವಲಯಗಳಿಗೆ ಪ್ಯಾಲೆಸ್ತೀನಿಯರನ್ನು ಬಲವಂತದಿಂದ ಸ್ಥಳಾಂತರಿಸುವುದು ಅತ್ಯಂತ ಹೆಚ್ಚು ಕಳವಳಕಾರಿಯಾದ ಸಂಗತಿಯಾಗಿದೆ. ಇಸ್ರೇಲ್ ಸಂಪರ್ಕಿತ ನೆರವಿನ ಸಂಸ್ಥೆಗಳೊಂದಿಗೆ ಸಂಬಂಧವಿರುವ ಖಾಸಗಿ ಭದ್ರತಾ ಗುತ್ತಿಗೆದಾರರು ಅಲ್ಲಿ ಪಡಿತರ ಪೊಟ್ಟಣಗಳನ್ನು ವಿತರಿಸಿವೆ. ನೆರವನ್ನು ರಾಜಕೀಯಗೊಳಿಸಲಾಗಿದೆ ಹಾಗೂ ಮಿಲಿಟರೀಕರಿಸಲಾಗಿದೆ, ಒಟ್ಟಾರೆಯಾಗಿ ಇದನ್ನೊಂದು ಬಲವಂತದ ಅಸ್ತ್ರವನ್ನಾಗಿ ಮಾಡಲಾಗಿದೆ. ಪ್ಯಾಲೆಸ್ತೀನಿಗಳು ಸಣ್ಣ ಪ್ರದೇಶಗಳಿಗೆ ಸೀಮಿತವಾಗುವುದರಿಂದ ಹಾಗೂ ಎಲ್ಲ ಅಗತ್ಯಗಳ ಮೇಲೆ ಇಸ್ರೇಲ್‌ಗೆ ನಿಯಂತ್ರಣ ಸಿಗುವುದರಿಂದ ಈ ಕುತಂತ್ರದಿಂದಾಗಿ ದೀರ್ಘ ಕಾಲ ಅಲ್ಲಿ ಕಬ್ಜಾ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಈ ಮಿಲಿಟರೀಕೃತ ನೆರವಿನ ಕಾರ್ಯಕ್ರಮದ ಉಸ್ತುವಾರಿಗಾಗಿ ವಿಶ್ವ ಸಂಸ್ಥೆಯಿಂದ ಹೊರತಾದ ಸಂಸ್ಥೆಯನ್ನು ರಚಿಸುವಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವೈಯಕ್ತಿಕವಾಗಿ ಒಳಗೊಂಡಿದ್ದಾರೆ ಎನ್ನಲಾಗಿದೆ.

ಈ ಮಿಲಿಟರಿ ಮಿಷನ್‌ಗೆ ನೆತನ್ಯಾಹು ಸಂಪುಟ 'ಗಿಡಿಯಾನ್ಸ್ ಚಾರಿಯೆಟ್ಸ್' ಎಂಬ ಸಂಕೇತನಾಮ (ಕೋಡ್‌ನೇಮ್) ನೀಡಿದೆ. ಒತ್ತೆಯಾಳುಗಳನ್ನು ಬಿಡುಗಡೆ ಮಾಡುವಂತೆ ಹಮಾಸ್ ಮೇಲೆ ಒತ್ತಡ ಹೇರುವುದು ಇದರ ನಿಜವಾದ ಉದ್ದೇಶವೇ ಅಥವಾ ಸಾಮೂಹಿಕ ಶಿಕ್ಷೆಯನ್ನು ಮುಚ್ಚಿಹಾಕುವುದೇ ಎನ್ನುವುದು ವಿನಾಶದ ಪ್ರಮಾಣದಿಂದಲೇ ಸುಸ್ಪಷ್ಟವಾಗುತ್ತದೆ.

ಏನೇ ಇರಲಿ, ಇಸ್ರೇಲಿ ಮಿಲಿಟರಿ ಕಾರ್ಯಾಚರಣೆಯ ತೀವ್ರತೆಯಿಂದ ಪಾಶ್ಚಾತ್ಯ ನಾಯಕತ್ವದ ಧೋರಣೆಯಲ್ಲಿ ಕೆಲವು ಬದಲಾವಣೆಗಳು ಬಂದಿರುವುದು ವಾಸ್ತವ.

ಬ್ರಿಟನ್, ಫ್ರಾನ್ಸ್ ಮತ್ತು ಕೆನಡಾ ಜಂಟಿ ಹೇಳಿಕೆಯೊಂದರಲ್ಲಿ ಈ ಮಾನವೀಯ ಬಿಕ್ಕಟ್ಟನ್ನು ಖಂಡಿಸಿದ್ದು ಅದು 'ಅಸಹನೀಯವಾದುದು' ಎಂದು ವರ್ಣಿಸಿವೆ. ಆಹಾರ ನೆರವಿನ ಯೋಜನೆಯ ಕೊರತೆಯನ್ನು ಪ್ರಶ್ನಿಸಿರುವ ಈ ದೇಶಗಳು, 'ಇಸ್ರೇಲ್ ಸರಕಾರದ ಅಧಿಕಾರಿಗಳು ಇತ್ತೀಚೆಗೆ ಬಳಸಿರುವ ಅಸಹ್ಯಕರ ಭಾಷೆಯನ್ನು ನಾವು ಖಂಡಿಸುತ್ತೇವೆ. ಬಲವಂತದ ಕಾಯಂ ಸ್ಥಳಾಂತರವು ಅಂತಾರಾಷ್ಟ್ರೀಯ ಮಾನವೀಯ ಕಾನೂನಿನ ಉಲ್ಲಂಘನೆ' ಎಂದು ಹೇಳಿವೆ. 2023ರ ಅಕ್ಟೋಬರ್ 7ರ ಹಮಾಸ್ ದಾಳಿಯ ನಂತರ ಇಸ್ರೇಲ್‌ನ ಆತ್ಮ–ರಕ್ಷಣೆಯ ಹಕ್ಕನ್ನು ಆರಂಭದಲ್ಲಿ ಬೆಂಬಲಿಸಿದ್ದ ಈ ದೇಶಗಳು ಈಗ ನಿಧಾನವಾಗಿ ಗಾಜಾದಲ್ಲಿನ ಮಿಲಿಟರಿ ಕಾರ್ಯಾಚರಣೆಯ ವಿಸ್ತರಣೆಯನ್ನು ವಿರೋಧಿಸುತ್ತಿವೆ.

'ಮಾನವೀಯ ನೆರವನ್ನು ಎಂದಿಗೂ ರಾಜಕೀಯಗೊಳಿಸಬಾರದು' ಎಂದಿರುವ ಐರೋಪ್ಯ ಆಯೋಗದ ಉರ್ಸುಲಾ ವಾನ್ ಡೆರ್ ಲೆಯೆನ್, ದ್ವಿ–ರಾಷ್ಟ್ರವೊಂದೇ ಕಾರ್ಯಸಾಧು ಪರಿಹಾರವಾಗಿದೆ ಎಂದು ಪ್ರತಿಪಾದಿಸಿದ್ದಾರೆ. ಆದಾಗ್ಯೂ, ಅಮೆರಿಕದ ಒತ್ತಡದ ಗೈರಿನಲ್ಲಿ, ಅದರಲ್ಲೂ ವಿಶೇಷವಾಗಿ ಟ್ರಂಪ್ ಮೌನದಿಂದಾಗಿ, ನೆತನ್ಯಾಹು ಈ ಸಲಹೆಯನ್ನು ಒಪ್ಪುತ್ತಾರೋ ಇಲ್ಲವೋ ಎನ್ನುವುದು ಅಸ್ಪಷ್ಟವಾಗಿದೆ.

ಇಸ್ರೇಲ್ ಬಹಿಷ್ಕೃತ ರಾಷ್ಟ್ರ!

ಆಕ್ರಮಿತ ಪ್ಯಾಲೆಸ್ತೀನ್ ಪ್ರದೇಶಗಳಲ್ಲಿ ಮಾನವ ಹಕ್ಕುಗಳ ಕುರಿತ ವಿಶ್ವ ಸಂಸ್ಥೆಯ ವಿಶೇಷ ಪ್ರತಿನಿಧಿ ಫ್ರಾನ್ಸೆಸ್ಕಾ ಅಲ್ಬಾನೀಸ್ ಹೇಳಿರುವುದು ಸರಿಯಾಗಿಯೇ ಇದೆ. 'ಬಹುತೇಕ ಸದಸ್ಯ ರಾಷ್ಟ್ರಗಳು ನಿಷ್ಕ್ರಿಯವಾಗಿವೆ ಅಥವಾ ಇಸ್ರೇಲ್‌ನ ಕ್ರಿಮಿನಲ್ ವರ್ತನೆಗೆ ಸಕ್ರಿಯವಾಗಿ ನೆರವು ನೀಡುತ್ತಿವೆ ಮತ್ತು ಪ್ರೋತ್ಸಾಹಿಸುತ್ತಿವೆ' ಎಂದು ಅಲ್ಬನೀಸ್ ಹೇಳಿದ್ದಾರೆ. ಅವರು ನಿರ್ದಿಷ್ಟವಾಗಿ ಪಾಶ್ಚಾತ್ಯ ದೇಶಗಳು ಹಾಗೂ ಕೆಲವು ಕೊಲ್ಲಿ ದೇಶಗಳನ್ನು ಉದ್ದೇಶಿಸಿ ಹೀಗೆ ಹೇಳಿದ್ದಾರೆ. ಪ್ಯಾಲೆಸ್ತೀನ್ ಮಾತ್ರವಲ್ಲದೆ ವಿಶ್ವ ಸಂಸ್ಥೆ ಮೇಲೆ ಕೂಡ ನಿರ್ದಯ ಆಕ್ರಮಣ ನಡೆಸುತ್ತಿರುವ ಇಸ್ರೇಲ್ ಒಂದು ಬಹಿಷ್ಕೃತ ರಾಷ್ಟ್ರವಾಗುವ ಸಂಭವವಿದೆ ಎಂದೂ ಆಕೆ ಎಚ್ಚರಿಸಿದ್ದಾರೆ.

ಇಸ್ರೇಲ್ ರಚನೆಯ 1948ರ ವಿಶ್ವ ಸಂಸ್ಥೆಯ ಯೋಜನೆಯನ್ನು (ಸ್ವಇಚ್ಛೆಯಿಂದಲೋ ಅಲ್ಲವೋ) ಬೆಂಬಲಿಸಿದ ದೇಶಗಳು ಶಾಮೀಲಾಗಿರುವುದರಿಂದಲೇ ಈ ದುರಂತ ಸಂಭವಿಸುತ್ತಿದೆ ಎನ್ನುವುದು ಸ್ಪಷ್ಟವಾಗಿದೆ. ಜನಾಂಗೀಯ ನಾಶದ (ಎಥ್ನಿಕ್ ಕ್ಲೆನ್ಸಿಂಗ್) ಝಿಯೋನಿಸ್ಟ್ ಸಿದ್ಧಾಂತ ಮೇಲ್ನೋಟಕ್ಕೇ ಎದ್ದು ಕಾಣುತ್ತದೆ. ಹೊಲೊಕಾಸ್ಟ್ ವೇಳೆ ಅದರ ಭಯಾನಕತೆಗೆ ಒಳಗಾಗಿದ್ದ ಕುಟುಂಬಕ್ಕೆ ಸೇರಿದ ಯೆಹೂದಿ ಇತಿಹಾಸಕಾರ ಇಲಾನ್ ಪಾಪ್ ಈ ಉದ್ದೇಶಗಳನ್ನು ತಮ್ಮ 'ದ ಎಥ್ನಿಕ್ ಕ್ಲೀನ್ಸಿಂಗ್ ಆಫ್ ಪ್ಯಾಲೆಸ್ಟೀನ್' ಕೃತಿಯಲ್ಲಿ ಎಳೆಎಳೆಯಾಗಿ ವಿವರಿಸಿದ್ದಾರೆ. 1948ರ ನಕ್ಬಾದಿಂದ ಈ ವಿವರಣೆಯನ್ನು ಅವರು ಆರಂಭಿಸಿದ್ದಾರೆ. ಈ ಯೋಜನೆ ಈಗ ಅನಾವರಣಗೊಳ್ಳುತ್ತಿದೆ. ಗಾಜಾವನ್ನು ಒಂದು ಪ್ರವಾಸಿ ತಾಣವನ್ನಾಗಿ ಮಾಡುವ ಡೊನಾಲ್ಡ್ ಟ್ರಂಪ್‌ರ ಮಹಾ ಯೋಜನೆಯು ಗಾಯದ ಮೇಲೆ ಉಪ್ಪು ಸವರಿದಂತಿದೆ. ಅಕ್ಟೋಬರ್ 7ರ ನಂತರ ಇಸ್ರೇಲ್ ಈ ರೀತಿಯ ಉನ್ಮಾದದಿಂದ ಅಭಿಯಾನ ನಡೆಸುತ್ತಿದೆ ಎನ್ನುವುದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಹಮಾಸ್‌ನ ಮಿಲಿಟರಿ ಸಾಮರ್ಥ್ಯದ ಹೊರತಾಗಿಯೂ ಅವರ (ಇಸ್ರೇಲ್‌ನ) ಕೃತ್ಯಗಳು ಇಸ್ರೇಲ್‌ನ ಭದ್ರತೆಯ ಅಜೇಯತೆಯ ಮಿಥ್ಯೆಗೆ ಸವಾಲು ಹಾಕಿವೆ. ಪಾಶ್ಚಿಮಾತ್ಯರು, ಅದರಲ್ಲೂ ವಿಶೇಷವಾಗಿ ಅಮೆರಿಕ ಸಕ್ರಿಯವಾಗಿ ಶಾಮೀಲಾಗದಿದ್ದರೆ ಈ ರೀತಿಯ ಮಿಲಿಟರಿ ಆಕ್ರಮಣವನ್ನು ಮುಂದುವರಿಸಲು ಅದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಇಸ್ರೇಲಿಗಳು ಮತ್ತು ಪ್ಯಾಲೆಸ್ತೀನಿಯರ ನಡುವೆ ನಾಗರಿಕ ರಾಷ್ಟ್ರ–ರಾಷ್ಟ್ರ (ಸ್ಟೇಟ್–ಟು–ಸ್ಟೇಟ್) ಬಾಂಧವ್ಯ ಏರ್ಪಡದೆ ಮಿಲಿಟರಿ ಶಕ್ತಿಯು ಯಾವತ್ತೂ ಕಾಯಂ ಶಾಂತಿಯನ್ನು ಸ್ಥಾಪಿಸಲಾರದು.

ಭಾರತದ ಪರಿಸ್ಥಿತಿ

ಭಾರತದಲ್ಲಿ ನಾವು ಕಾಣುತ್ತಿರುವ ಪರಿಸ್ಥಿತಿಯೂ ಅಭೂತಪೂರ್ವವಾದುದು. ಐತಿಹಾಸಿಕವಾಗಿ, ಗಾಂಧಿಯಿಂದ ನೆಹರೂವರೆಗೆ ಭಾರತೀಯ ನಾಯಕತ್ವವು ಪ್ಯಾಲೆಸ್ತೀನಿ ಉದ್ದೇಶಕ್ಕೆ ನಿಸ್ಸಂದಿಗ್ಧವಾಗಿ ಬೆಂಬಲ ನೀಡಿತ್ತು. ಈ ವಿಚಾರದಲ್ಲಿ ರಾಷ್ಟ್ರೀಯ ಸಹಮತವಿದೆ. ಆದರೆ, ಹಿಂದೂತ್ವ ಶಕ್ತಿಗಳು ತಲೆಯೆತ್ತಿದ ನಂತರ ಇದು ಸಂಪೂರ್ಣವಾಗಿ ಬದಲಾಗಿದೆ. ಹಿಂದೂತ್ವ ಮತ್ತು ಝಿಯೋನಿಸಂ –ಇವೆರಡೂ ಸಮಾನವಾದ ಸಿದ್ಧಾಂತ ಹೊಂದಿವೆ: ಧಾರ್ಮಿಕ–ಅಸ್ಮಿತೆ ಆಧಾರಿತ ರಾಷ್ಟ್ರೀಯತೆಯು ಪ್ರಭುತ್ವದ ಮೂಲ ಲಕ್ಷಣವಾಗಿದೆ. ಅವುಗಳು ಸೈದ್ಧಾಂತಿಕ ಆಪ್ತ ಮಿತ್ರರಾಗಿವೆ. ಆರ್‌ಎಸ್‌ಎಸ್‌ನ ಆರಂಭಿಕ ದಿನಗಳಿಂದಲೂ ಅದರ ನಾಯಕರು ಝಿಯೋನಿಸ್ಟ್ ಸಿದ್ಧಾಂತವನ್ನು ಮೆಚ್ಚಿಕೊಂಡಿದ್ದರು. ಇಸ್ಲಾಮೋಫೋಬಿಯಾದಿಂದ ಪ್ರೇರಿತ ಸಮಕಾಲೀನ ಹಿಂದೂತ್ವ ಈಗ ಇಸ್ರೇಲ್‌ನ ವಿನಾಶದ ಅಭಿಯಾನಕ್ಕೆ ಬೆಂಬಲ ನೀಡುತ್ತಿದೆ.

ಈ ಮೈತ್ರಿಕೂಟವು ಸಂಘರ್ಷವನ್ನು ಮರುವ್ಯಾಖ್ಯಾನಿಸಲು ಹೊರಟಿದೆ. ಅದು ಪ್ಯಾಲೆಸ್ತೀನ್‌ನ ವಿಮೋಚನಾ ಹೋರಾಟವಲ್ಲ; ಯೆಹೂದಿಗಳು ಮತ್ತು ಮುಸ್ಲಿಂ ಪ್ಯಾಲೆಸ್ತೀನಿಯರ ನಡುವಿನ ಧಾರ್ಮಿಕ ಯುದ್ಧವೆಂದು ಅದು ಬಿಂಬಿಸುತ್ತಿದೆ. ಮೋದಿಯ ಭಾರತ ಮತ್ತು ನೆತನ್ಯಾಹುನ ಇಸ್ರೇಲ್ ನಡುವೆ ಹೆಚ್ಚುತ್ತಿರುವ ಮಿಲಿಟರಿ ಮತ್ತು ಭದ್ರತಾ ಪಾಲುದಾರಿಕೆಯಿಂದಾಗಿ ಈ ನಿರೂಪಣೆಗೆ ಹೆಚ್ಚಿನ ಪುಷ್ಟಿ ದೊರಕಿದೆ.

ಮುಂದಿರುವ ಕಾರ್ಯಭಾರ ಸ್ಪಷ್ಟವಿದೆ: ಪ್ಯಾಲೆಸ್ತೀನ್ ಕುರಿತು ಅಂತಾರಾಷ್ಟ್ರೀಯ ಸೌಹಾರ್ದತೆ ಹೆಚ್ಚುತ್ತಿದೆ. ಪಾಶ್ಚಿಮಾತ್ಯರ ಧೋರಣೆಯಲ್ಲಿ ಬದಲಾವಣೆಯ ಸುಳಿವು, 21ನೇ ಶತಮಾನದಲ್ಲಿ ಗಾಜಾವು ಆಧುನಿಕ ನಾಗರಿಕತೆಗೆ ಅಸ್ತಿತ್ವವಾದಿ ಪರೀಕ್ಷೆಯಾಗಿದೆ ಎನ್ನುವುದನ್ನು ಸೂಚಿಸುತ್ತದೆ. ಇಸ್ರೇಲ್‌ನ ಅಸಹನೀಯ ಕೃತ್ಯಗಳನ್ನು ಖಂಡಿಸುವಂತೆ ಮೋದಿ ಸರಕಾರದ ಮೇಲೆ ಒತ್ತಡ ತರುವ ರೀತಿಯಲ್ಲಿ ಭಾರತದ ಜನರು ಅಣಿನೆರೆಯಬೇಕು. ಆ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ.

ಅನು: ವಿಶ್ವ





ಕೇರಳ: ಎಲ್‌ಡಿಎಫ್ ಸರ್ಕಾರವು ಬದ್ಧತೆಯಿಂದ ಮುನ್ನಡೆಯುತ್ತಿದೆ

ದೇಶದ ಮೊದಲ ಡಿಜಿಟಲ್ ವಿಶ್ವವಿದ್ಯಾಲಯ, ಡಿಜಿಟಲ್ ವಿಜ್ಞಾನ ಉದ್ಯಾನವನ ಮತ್ತು ಗ್ರ್ಯಾಫೀನ್ ನಾವೀನ್ಯತೆ ಕೇಂದ್ರ, ಸಾರ್ವಜನಿಕ ಆರೋಗ್ಯ ಕ್ಷೇತ್ರದಲ್ಲಿ ಆಧುನಿಕ ವ್ಯವಸ್ಥೆಗಳು, ಕೃಷಿ ಮತ್ತು ಕೈಗಾರಿಕಾ ವಲಯಗಳ ಬೆಳವಣಿಗೆ, ಹೊಸ ಎತ್ತರಕ್ಕೆ ಏರಿದ ಪ್ರವಾಸೋದ್ಯಮ ಕ್ಷೇತ್ರ, ಕೆ-ಫೋನ್ ಯೋಜನೆಯ ಮೂಲಕ ಕೇರಳದ ಎಲ್ಲಾ ಮನೆಗಳು ಮತ್ತು ಸರ್ಕಾರಿ ಕಚೇರಿಗಳಿಗೆ ಬ್ರಾಡ್ ಬ್ಯಾಂಡ್ ಇಂಟರ್ನೆಟ್ ಪ್ರವೇಶ ಲಭ್ಯವಾಗುವಂತೆ ಮಾಡಿರುವುದು,... ಹೀಗೆ ಕೇರಳದ ಜ್ಯೋತಿ ಈಗ ಹೆಚ್ಚು ಪ್ರಖರವಾಗಿ ಉರಿಯುತ್ತಿದೆ. ಜನರು ಕೂಡ ಎಲ್‌ಡಿಎಫ್ ತನ್ನ ಆಡಳಿತವನ್ನು ಮುಂದುವರೆಸಿ ನವ ಕೇರಳದ ಕನಸನ್ನು ನನಸಾಗಿಸಲು ಬಯಸುತ್ತಾರೆ. ಆ ಆಶಯವನ್ನು ನೀಡುವುದು ಸರ್ಕಾರದ ದೊಡ್ಡ ಜವಾಬ್ದಾರಿಯಾಗಿದೆ. ಸರ್ಕಾರವು ಬದ್ಧತೆಯೊಂದಿಗೆ ಮತ್ತು ರಾಜಿ ಮಾಡಿಕೊಳ್ಳದೆ ಮುಂದುವರಿಯುತ್ತದೆ.

ವಿಶ್ವ ಗುಣಮಟ್ಟಕ್ಕೆ ಏರುತ್ತಿರುವ ಶಿಕ್ಷಣ ಕ್ಷೇತ್ರ ಕೇರಳದ ವಿಶ್ವವಿದ್ಯಾಲಯಗಳು ಮೂಲ ಸೌಕರ್ಯ ಮತ್ತು ಶೈಕ್ಷಣಿಕ ಉತ್ಕೃಷ್ಟತೆಯನ್ನು ಒದಗಿಸುವ ಮೂಲಕ ವಿಶ್ವ ಗುಣಮಟ್ಟಕ್ಕೆ ಏರುತ್ತಿವೆ. ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಸರ್ಕಾರದ ಮಧ್ಯಪ್ರವೇಶವು ಅರ್ಥಪೂರ್ಣ ಫಲಿತಾಂಶಗಳನ್ನು ಸಾಧಿಸಿದೆ. NAAC [ರಾಷ್ಟ್ರೀಯ ಮೌಲ್ಯಮಾಪನ ಮತ್ತು ಮಾನ್ಯತೆ ಮಂಡಳಿ] ಶ್ರೇಯಾಂಕದಲ್ಲಿ ಮಹಾತ್ಮ ಗಾಂಧಿ ವಿಶ್ವವಿದ್ಯಾಲಯ ಮತ್ತು ಕೇರಳ ವಿಶ್ವವಿದ್ಯಾಲಯಗಳು ಎ ಡಬಲ್ ಪ್ಲಸ್ ಗ್ರೇಡ್ (A++ grade) ಪಡೆದರೆ, ಕ್ಯಾಲಿಕಟ್, ಕುಸಾಟ್ ಮತ್ತು ಕಲಾಡಿ ವಿಶ್ವವಿದ್ಯಾಲಯಗಳು ಎ ಪ್ಲಸ್ ಶ್ರೇಣಿಗಳನ್ನು ಪಡೆದಿವೆ. ಕೇರಳದ 28 ಕಾಲೇಜುಗಳು ಎ ಡಬಲ್ ಪ್ಲಸ್ ಗ್ರೇಡ್ ಮತ್ತು 49 ಕಾಲೇಜುಗಳು ಎ ಪ್ಲಸ್ ಗ್ರೇಡ್ ಪಡೆದಿವೆ. 82 ಕಾಲೇಜುಗಳು ಎ ಗ್ರೇಡ್ ಹೊಂದಿವೆ. NIRF ಶ್ರೇಯಾಂಕದಲ್ಲಿ ದೇಶದ ಅಗ್ರ 200 ಕಾಲೇಜುಗಳಲ್ಲಿ 42 ಕಾಲೇಜುಗಳು ಕೇರಳದ್ದಾಗಿವೆ.

ದೇಶದ ಮೊದಲ ಡಿಜಿಟಲ್ ವಿಶ್ವವಿದ್ಯಾಲಯ

ವಿಶ್ವವಿದ್ಯಾನಿಲಯದ ಸಂಶೋಧನಾ ಫಲಿತಾಂಶಗಳನ್ನು ಸಾಮಾಜಿಕ ಅಗತ್ಯಗಳಿಗಾಗಿ ಬಳಸಿಕೊಳ್ಳಲು ಎಲ್‌ಡಿಎಫ್ ಸರ್ಕಾರವು ಅನುವಾದ ಪ್ರಯೋಗಾಲಯಗಳನ್ನು ಪ್ರಾರಂಭಿಸಿತು. ನವ ಕೇರಳ ಪೋಸ್ಟ್ ಡಾಕ್ಟರಲ್ ಫೆಲೋಶಿಪ್‌ಗಳು ಮತ್ತು ಕೈರಳಿ ಸಂಶೋಧನಾ ಪ್ರಶಸ್ತಿ, ದೇಶಕ್ಕೆ ಪ್ರಯೋಜನಕಾರಿಯಾದ ಸಂಶೋಧನೆಗಳನ್ನು ಉತ್ತೇಜಿಸಲು ಅನುದಾನ ಇತ್ಯಾದಿಗಳನ್ನು ಪರಿಚಯಿಸುವ ಪ್ರಯತ್ನಗಳು ನಡೆಯುತ್ತಿವೆ. ಇದೆಲ್ಲದರ ಜೊತೆಗೆ, ಉನ್ನತ ಶಿಕ್ಷಣ ಆಯೋಗವನ್ನು ರಚಿಸಲಾಗಿದೆ ಮತ್ತು ಅದರ ಶಿಫಾರಸುಗಳನ್ನು ಜಾರಿಗೆ ತರಲಾಗುತ್ತಿದೆ. ಭವಿಷ್ಯದಲ್ಲಿ ಕೇರಳವನ್ನು ಜ್ಞಾನ ಆರ್ಥಿಕತೆಯನ್ನಾಗಿ ಪರಿವರ್ತಿಸುವ ಪ್ರಯತ್ನಗಳಲ್ಲಿ ಉನ್ನತ ಶಿಕ್ಷಣ ಕ್ಷೇತ್ರದ ಅಭಿವೃದ್ಧಿ ಅತ್ಯಂತ ಮುಖ್ಯವಾಗಿದೆ. ಈ ಅವಧಿಯಲ್ಲಿ ಕೇರಳವು ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧಿಸಲು ಸಾಧ್ಯವಾಗಿದೆ. ಕಳೆದ ಏಳೂವರೆ ವರ್ಷಗಳಲ್ಲಿ, ದೇಶದ ಮೊದಲ ಡಿಜಿಟಲ್ ವಿಶ್ವವಿದ್ಯಾಲಯ, ಡಿಜಿಟಲ್ ವಿಜ್ಞಾನ ಉದ್ಯಾನವನ ಮತ್ತು ಗ್ರ್ಯಾಫೀನ್ ನಾವೀನ್ಯತೆ ಕೇಂದ್ರವು ಈ ಸರ್ಕಾರದ ಅಡಿಯಲ್ಲಿ ವಾಸ್ತವವಾಗಿದೆ. ಇನ್ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ವೈರಾಲಜಿ (Institute of Advanced Virology) ಪ್ರಸ್ತುತ ವಂಡು ಇಂಟರ್‌ನ್ಯಾಷನಲ್ ಆಯುರ್ವೇದ ಸಂಶೋಧನಾ ಸಂಸ್ಥೆ (Vandu International Ayurvedic Research Institute), ಜೀನೋಮ್ ಡೇಟಾ ಸೆಂಟರ್‌ಗಾಗಿ ಸಿದ್ಧತೆ ನಡೆಸುತ್ತಿದೆ.

ಸಾರ್ವಜನಿಕ ಆರೋಗ್ಯ ಕ್ಷೇತ್ರದಲ್ಲಿ ಆಧುನಿಕ ವ್ಯವಸ್ಥೆಗಳು

ಆಧುನಿಕ ವ್ಯವಸ್ಥೆಗಳೊಂದಿಗೆ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ರೋಗಿ ಸ್ನೇಹಿಯನ್ನಾಗಿ ಮಾಡಲಾಗಿದೆ. ರಾಜ್ಯದಲ್ಲಿ 674 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಈಗಾಗಲೇ ಕುಟುಂಬ ಆರೋಗ್ಯ ಕೇಂದ್ರಗಳಾಗಿ ಮೇಲ್ದರ್ಜೆಗೆ ಏರಿಸಲಾಗಿದೆ ಮತ್ತು 5,000ಕ್ಕೂ ಹೆಚ್ಚು ವರ್ಚುವಲ್ ಆರೋಗ್ಯ ಕೇಂದ್ರಗಳನ್ನು ಸಹ ಸ್ಥಾಪಿಸಲಾಗಿದೆ. ಜಿಲ್ಲಾ ಜನರಲ್ ಆಸ್ಪತ್ರೆಗಳಲ್ಲಿ ಸೂಪರ್ ಸ್ಪೆಷಾಲಿಟಿ ಸೌಲಭ್ಯಗಳನ್ನು ಒದಗಿಸಲಾಗಿದೆ. ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ ಹೃದ್ರೋಗ ಮತ್ತು ತೀವ್ರ ಪರಿಧಮನಿಯ (Acute coronary) ಆರೈಕೆ ಘಟಕಗಳನ್ನು ಪ್ರಾರಂಭಿಸಲಾಗಿದೆ. ತಾಲೂಕು ಆಸ್ಪತ್ರೆಗಳಲ್ಲಿ



44 ಹೆಚ್ಚುವರಿ ಡಯಾಲಿಸಿಸ್ ಘಟಕಗಳನ್ನು ಒದಗಿಸಲಾಗಿದೆ. ಪ್ರಸ್ತುತ 83 ತಾಲ್ಲೂಕು ಆಸ್ಪತ್ರೆಗಳಲ್ಲಿ ಡಯಾಲಿಸಿಸ್ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ವೈದ್ಯಕೀಯ ಕಾಲೇಜುಗಳಿಗೆ ವಿಶೇಷ ಮಾಸ್ಟರ್ ಪ್ಲಾನ್ ಜಾರಿಗೆ ತರಲಾಗುತ್ತಿದೆ.

ಕೃಷಿ ವಲಯದ ಬೆಳವಣಿಗೆ

ಕೃಷಿ ಮತ್ತು ಕೈಗಾರಿಕೆಗಳು ಬಹಳಷ್ಟು ಅಭಿವೃದ್ಧಿ ಹೊಂದಿವೆ. ಕೃಷಿ ವಲಯವು ಹಿಂದೆಂದೂ ಕಂಡಿರದ ಬೆಳವಣಿಗೆಯನ್ನು ದಾಖಲಿಸಿದ ಆಳ್ವಿಕೆಯ ಅವಧಿ ಇದಾಗಿದೆ. 2016ರಲ್ಲಿ ಶೇ. 2ರಷ್ಟಿದ್ದ ಕೃಷಿ ಬೆಳವಣಿಗೆ ದರವು ಈಗ ಶೇ. 4.64 ಆಗಿದೆ. 2016ರಲ್ಲಿ 1.7 ಲಕ್ಷ ಹೆಕ್ಟೇರ್‌ನಲ್ಲಿ ಭತ್ತದ ಕೃಷಿ ಮಾಡಲಾಗಿತ್ತು, ಇಂದು ಅದು 2.5 ಲಕ್ಷ ಹೆಕ್ಟೇರ್‌ಗಳಿಗೆ ಹೆಚ್ಚಾಗಿದೆ. ಅಕ್ಕಿ ಉತ್ಪಾದಕತೆ ಪ್ರತಿ ಹೆಕ್ಟೇರ್‌ಗೆ 4.56 ಟನ್‌ಗಳಿಗೆ ಏರಿತು, ತರಕಾರಿ ಉತ್ಪಾದನೆಯು 7 ಲಕ್ಷ ಮೆಟ್ರಿಕ್ ಟನ್‌ಗಳಿಂದ 16 ಲಕ್ಷ ಮೆಟ್ರಿಕ್ ಟನ್‌ಗಳಿಗೆ ಏರಿತು. ಕೃಷಿ ಮೌಲ್ಯವರ್ಧನೆಯ ಗುರಿಯನ್ನು ಹೊಂದಿರುವ ವಿವಿಧ ಉದ್ಯಾನವನಗಳನ್ನು ಪ್ರಾರಂಭಿಸುವ ಮೂಲಕ, ತರಕಾರಿಗಳು ಮತ್ತು ಹಣ್ಣುಗಳಿಗೆ ಬೆಂಬಲ ಬೆಲೆಗಳನ್ನು ಪರಿಚಯಿಸಿದ ದೇಶದ ಮೊದಲ ರಾಜ್ಯ ಕೇರಳ. ಕೇರಳ ಕೈಗಾರಿಕಾ ಕ್ಷೇತ್ರದಲ್ಲಿ ಅಭೂತಪೂರ್ವ ಸಾಧನೆಗಳನ್ನು ಸಾಧಿಸಿದೆ.

ಉತ್ಪಾದನಾ ವಲಯದ ಕೊಡುಗೆ ಶೇ.14ರಷ್ಟಿದೆ

2016ರಲ್ಲಿ ಶೇ. 12ರಷ್ಟಿದ್ದ ಕೈಗಾರಿಕಾ ಬೆಳವಣಿಗೆ ಇಂದು ಶೇ. 17ಕ್ಕೆ ಏರಿಕೆಯಾಗಿದೆ. 2016ರಲ್ಲಿ ಉತ್ಪಾದನಾ ವಲಯದ ಕೊಡುಗೆ ಶೇ. 9.8ರಷ್ಟಿತ್ತು. ಇಂದು ಅದು ಶೇ. 14ರಷ್ಟಿದೆ. ಇಂದು, ಕೈಗಾರಿಕೆಗಳಿಲ್ಲದ ರಾಜ್ಯ ಕೇರಳ ಎಂಬ ನಕಾರಾತ್ಮಕ ಪ್ರಚಾರವನ್ನು ಯಾರೂ ಸುಲಭವಾಗಿ ಹರಡಲು ಸಾಧ್ಯವಿಲ್ಲ. ವ್ಯವಹಾರ ಸ್ನೇಹಿ ವಾತಾವರಣವನ್ನು ಸೃಷ್ಟಿಸುವಲ್ಲಿ ಕೇರಳ ಬಹಳ ದೂರ ಸಾಗಿದೆ. ವ್ಯಾಪಾರ ಮಾಡುವ ಸುಲಭತೆಯಲ್ಲಿ ಕೇರಳ ಮೊದಲ ಸ್ಥಾನ ಪಡೆದಿದೆ ಎಂಬುದು ಹಗಲಿನಂತೆ ಸ್ಪಷ್ಟವಾಗಿದ್ದರೂ, ಕೇರಳದ ವಿರೋಧ ಪಕ್ಷದ ಕೆಲವರು ಅದನ್ನು ಒಪ್ಪಿಕೊಳ್ಳಲು ಸಾಧ್ಯವಾಗುತ್ತಿಲ್ಲ. ನವೋದ್ಯಮಗಳ ವಿಷಯದಲ್ಲೂ ಕೇರಳ ಉತ್ತಮ ಪ್ರಗತಿ ಸಾಧಿಸಿದೆ. ಕೇರಳದಲ್ಲಿ 6,400 ಸ್ಟಾರ್ಟ್‌ಅಪ್ ಗಳ ಮೂಲಕ 63,000 ಉದ್ಯೋಗಗಳು ಸೃಷ್ಟಿಯಾಗಿವೆ. ಯುಡಿಎಫ್ ಅವಧಿಯಲ್ಲಿ ಕೇವಲ 300 ಸ್ಟಾರ್ಟ್‌ಅಪ್ ಗಳಿದ್ದವು. 2016ರಲ್ಲಿ ಸ್ಟಾರ್ಟ್‌ಅಪ್ ಹೂಡಿಕೆ 50 ಕೋಟಿ ರೂ.ಗಳಾಗಿತ್ತು, ಈಗ ಅದು 6000 ಕೋಟಿ ತಲುಪಿದೆ.

ತಂತ್ರಜ್ಞಾನ ಆಧಾರಿತ ಬೆಳವಣಿಗೆ

ಇದು AI ಮತ್ತು ಯಂತ್ರ ಕಲಿಕೆ ಮೇಲುಗೈ ಸಾಧಿಸುವ ಸಮಯ. ಆದ್ದರಿಂದ, ಎಲ್‌ಡಿಎಫ್ ಸರ್ಕಾರವು ತಂತ್ರಜ್ಞಾನ ಆಧಾರಿತ ಕೈಗಾರಿಕಾ ಬೆಳವಣಿಗೆಯನ್ನು ಗುರಿಯಾಗಿಟ್ಟುಕೊಂಡು ಚಟುವಟಿಕೆಗಳನ್ನು ಕೈಗೊಳ್ಳುತ್ತಿದೆ. ಕೇರಳವು ದೇಶದ ಮೊದಲ ಜನರಲ್ ಎಐ ಕಾನ್ಕ್ಲೇವ್ (AI Conclave) ಮತ್ತು ರೊಬೊಟಿಕ್ಸ್ ದುಂಡುಮೇಜಿನ ಸಮ್ಮೇಳನವನ್ನು ಆಯೋಜಿಸಿತು. ಕೊಚ್ಚಿಯಲ್ಲಿ ನಡೆದ ಜಾಗತಿಕ ಹೂಡಿಕೆದಾರರ ಸಭೆಯಲ್ಲಿ ಸುಮಾರು 1.5 ಲಕ್ಷ ಕೋಟಿ ರೂಪಾಯಿಗಳ ಹೂಡಿಕೆಗೆ ಒಪ್ಪಿಗೆ ನೀಡಲಾಯಿತು. ಇದೆಲ್ಲವನ್ನೂ ಕಾರ್ಯಗತಗೊಳಿಸಲು ಒಂದು ಫಾಸ್ಟ್-ಟ್ರ್ಯಾಕ್ ವ್ಯವಸ್ಥೆಯನ್ನು ಸಹ ಸ್ಥಾಪಿಸಲಾಗಿದೆ. ಕೇರಳದ ಉದ್ಯಮಶೀಲತಾ ವರ್ಷ ಯೋಜನೆಯು ರಾಷ್ಟ್ರೀಯ ಮಟ್ಟದಲ್ಲಿ ಉದ್ಯಮದಲ್ಲಿ ಅತ್ಯುತ್ತಮ ಅಭ್ಯಾಸವೆಂದು ಗುರುತಿಸಲ್ಪಟ್ಟಿದೆ. ಈ ಯೋಜನೆಯಡಿಯಲ್ಲಿ ಇಲ್ಲಿಯವರೆಗೆ 3.5 ಲಕ್ಷಕ್ಕೂ ಹೆಚ್ಚು ಉದ್ಯಮಗಳು ಪ್ರಾರಂಭವಾಗಿವೆ. ಇದು 22,500 ಕೋಟಿ ರೂ. ಗಳಿಗೂ ಹೆಚ್ಚು ಹೂಡಿಕೆಗಳನ್ನು ಆಕರ್ಷಿಸಲು ಮತ್ತು 7.5 ಲಕ್ಷಕ್ಕೂ ಹೆಚ್ಚು ಉದ್ಯೋಗಗಳನ್ನು ಸೃಷ್ಟಿಸಲು ಸಾಧ್ಯವಾಯಿತು.

90,000 ಕೋಟಿ ರೂ.ಗಳಿಗೆ ಏರಿದ ಐಟಿ ರಫ್ತು

ಕಳೆದ ಒಂಬತ್ತು ವರ್ಷಗಳಲ್ಲಿ ಕೇರಳದ ಐಟಿ ರಫ್ತು 34,000 ಕೋಟಿ ರೂ.ಗಳಿಂದ 90,000 ಕೋಟಿ ರೂ.ಗಳಿಗೆ ಏರಿದೆ. 2016ರಲ್ಲಿ ಎಲ್‌ಡಿಎಫ್ ಸರ್ಕಾರ ಅಧಿಕಾರಕ್ಕೆ ಬಂದಾಗ, ರಾಜ್ಯದ ಮೂರು ಐಟಿ ಪಾರ್ಕ್‌ಗಳಾದ ಟೆಕ್ನೋಪಾರ್ಕ್, ಇನ್ಫೋಪಾರ್ಕ್ ಮತ್ತು ಸೈಬರ್ ಪಾರ್ಕ್‌ಗಳಲ್ಲಿ ಒಟ್ಟು 676 ಕಂಪನಿಗಳು ಮತ್ತು 84,720 ಉದ್ಯೋಗಿಗಳಿದ್ದರು. 2023-24ರಲ್ಲಿ ಮೂರು ಐಟಿ ಪಾರ್ಕ್‌ಗಳಲ್ಲಿ 1153 ಕಂಪನಿಗಳು ಮತ್ತು 1,47,200 ಉದ್ಯೋಗಿಗಳಿದ್ದರು. ಕಳೆದ ಏಳು

ಪುಟ 14 ಕ್ಕೆ



ಸರಣಿ ಹತ್ಯೆಗಳು: ಹೆಮ್ಮೆಯ ತುಳುನಾಡಿಗೆ ಈ ಗತಿ ತಂದವರಾರು?

ಮುನೀರ್ ಕಾಟಿಪಳ್ಳ

ಸಿಪಿಐ(ಎಂ) ದಕ್ಷಿಣ ಕನ್ನಡ ಜಿಲ್ಲಾ ಸಮಿತಿಯ ನಿಯೋಗ ಇತ್ತೀಚೆಗೆ ಮತಾಂಧರಿಂದ ಹತ್ಯೆಗೀಡಾದ ಕೊಳತ್ತಮಜಲು ಅಬ್ದುಲ್ ರೆಹಮಾನ್ ಮನೆಗೆ ಭೇಟಿ ನೀಡಿ ನೊಂದಿರುವ ಕುಟುಂಬಕ್ಕೆ ಸಾಂತ್ವನ ಹೇಳಿತು.

ಪೊಳಲಿ ದೇವಸ್ಥಾನದಿಂದ ಸುಮಾರು ನಾಲ್ಕು ಕಿ.ಮೀ. ದೂರದ ಕೊಳತ್ತಮಜಲು ಎಂಬ ತೀರಾ ಗ್ರಾಮೀಣ ಪ್ರದೇಶದಲ್ಲಿರುವ ಅಬ್ದುಲ್ ರೆಹಮಾನ್ ಮನೆಗೆ ಭೇಟಿ ನೀಡಿದಾಗ, ಮನೆಯ ಮುಂಭಾಗ ಸಾವಿನ ಮೂರನೆಯ ದಿನದ ಪ್ರಾರ್ಥನೆಯ ಅಡುಗೆಯ ಸಿದ್ದತೆ ನಡೆಯುತ್ತಿತ್ತು. ನಿರ್ಮಾಣ ಹಂತದ ರೆಹಮಾನ್ ಮನೆಯ ಮುಂಭಾಗ ಪ್ರಾರ್ಥನಾ ಕೂಟಕ್ಕಾಗಿ ಚಪ್ಪರ ಹಾಕಲಾಗಿತ್ತು. ಅಜ್ಜನ (ತಾಯಿಯ ತಂದೆ) ಕೈಯಲ್ಲಿದ್ದ ರೆಹಮಾನ್‌ನ ಎರಡು ಪುಟಾಣಿ ಮಕ್ಕಳು (3 ವರ್ಷ ಹಾಗೂ 8 ತಿಂಗಳಿನ) ಮನೆಯ ಮುಂಭಾಗ ದೊಡ್ಡ, ದೊಡ್ಡ ಪಾತ್ರೆಗಳಲ್ಲಿ ನಡೆಯುತ್ತಿದ್ದ ಅಡುಗೆ ತಯಾರಿ, ಸಂಬಂಧಿಗಳ ಓಡಾಟವನ್ನು ಅಮಾಯಕ ಕಣ್ಣುಗಳಲ್ಲಿ ನೋಡುತ್ತಿದ್ದರು. ಮನೆಯ ಒಳಗಡೆ ಗಂಡನನ್ನು ಕಳೆದುಕೊಂಡ ಯುವ ವಿಧವೆಯ, ಮಗನನ್ನು ಕಳೆದುಕೊಂಡ ತಾಯಿಯ ಮೂಕ ರೋಧನೆ ನಮ್ಮ ಹೃದಯಕ್ಕೆ ತಟ್ಟುತ್ತಿತ್ತು.

ನಾವು ಮನೆಯ ಅಂಗಳ ತಲುಪಿದ ಸುದ್ದಿ ತಿಳಿದು ಊರಿನ ಯುವಕರು ನಮ್ಮ ಸುತ್ತ ಜಮಾಯಿಸಿದರು. ರೆಹಮಾನ್ ತಂದೆ ಸ್ವರ ಹೊರಡದ ಗಂಟಲಿನಲ್ಲಿ ತಮ್ಮ ನೋವನ್ನು ಕಣ್ಣೀರು ಸುರಿಸುತ್ತಲೇ ಒಂದಿಷ್ಟು ಹಂಚಿಕೊಂಡರು. ರೆಹಮಾನ್‌ನ ಆತ್ಮೀಯ ಗೆಳೆಯರು, ಒಡನಾಡಿಗಳು ತಮ್ಮ ಮನಸ್ಸಿಗಾದ ಘಾಸಿಯನ್ನು, ಒಳಗಡೆ ಕಟ್ಟಿಕೊಂಡಿರುವ ನೋವನ್ನು, ಜೊತೆಗೆ ಓಡಾಡಿದವರೆ ಕತ್ತರಿಸಿ ಕೊಂದದ್ದನ್ನು ಅರಗಿಸಿಕೊಳ್ಳಲು ಅಸಾಧ್ಯವಾದ ಭಾವದೊಂದಿಗೆ ನಮ್ಮೊಂದಿಗೆ ತಡೆರಹಿತವಾಗಿ ತೆರೆದಿಟ್ಟರು.

ಅಲ್ಲಿದ್ದ ಸ್ಥಳೀಯರು ರೆಹಮಾನ್ ಕೊಲೆಯ ದಾರುಣತೆಯನ್ನು, ಅದರ ರಾಜಕಾರಣವನ್ನು, ಕೊಲೆಗಡುಕರ ಮನಸ್ಥಿತಿಯನ್ನು ವಿವರಿಸುತ್ತಿದ್ದರೆ, ಕಳೆದ ಮೂರು ದಶಕದಲ್ಲಿ ಕರಾವಳಿಯ ಕೋಮು ಸಂಘರ್ಷ, ಅದರ ರಾಜಕಾರಣವನ್ನು ಹತ್ತಿರದಿಂದ ಕಂಡಿರುವ ನಾವೇ ರೆಹಮಾನ್ ಕೊಲೆಯ ಭಯಾನಕತೆಗೆ ಬೆಚ್ಚಿಬಿದ್ದೆವು. ಅವರ ವಿವರಣೆ ಹೀಗಿದೆ;

ಸ್ನೇಹಮಯಿ ವ್ಯಕ್ತಿತ್ವದ ಯುವಕ

ಅಬ್ದುಲ್ ರೆಹಮಾನ್ ಯಾರೊಂದಿಗೂ ಜಗಳಗಳಿಲ್ಲದ ಸ್ನೇಹಮಯಿ ವ್ಯಕ್ತಿತ್ವದ ಯುವಕ. ತನ್ನ ಶ್ರಮದ ದುಡಿಮೆಯಿಂದ ಮೂರು ಪಿಕಪ್ ವಾಹನಗಳನ್ನು ಖರೀದಿಸಿದ್ದ. ಮರಳು, ಕಟ್ಟಡ ನಿರ್ಮಾಣ ಸಾಮಾಗ್ರಿಗಳು, ತೋಟದ ಗೊಬ್ಬರ ಸಾಗಾಟ ಮಾಡುತ್ತಾನೆ. ಸಂಬಂಧಿಯಾದ ತೀರಾ ಬಡ ಕುಟುಂಬದ ಹೆಣ್ಣು ಮಗಳನ್ನು ಮದುವೆಯಾಗಿದ್ದಾನೆ. ಕಳೆದ ನಾಲ್ಕು ವರ್ಷಗಳಿಂದ ಸ್ಥಳೀಯ ಮಸೀದಿಯ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದ. ಊರಿನ ಹಿಂದೂಗಳಿಗೂ ರೆಹಮಾನ್ ಅಂದರೆ ಅಚ್ಚು ಮೆಚ್ಚು. ಅವರೆ ರೆಹಮಾನ್‌ಗೆ ದೊಡ್ಡ ಗ್ರಾಹಕರು. ಶಾರದೋತ್ಸವ ಮೆರವಣಿಗೆ ಸಂದರ್ಭ ಮನೆಯ ಮುಂದೆಯೇ ಗೆಳೆಯರನ್ನು ಸಂಘಟಿಸಿ ತಂಪು ಪಾನೀಯ ವಿತರಿಸುತ್ತಿದ್ದ. ಶಾರದೆಯ ವಿಗ್ರಹದ ಮೆರವಣಿಗೆಗೆ ರೆಹಮಾನ್ ಸಹೋದರ ಪಿಕಪ್ ಒದಗಿಸುತ್ತಿದ್ದ, ಸ್ವತಹ ಶಾರದೆ ಇದ್ದ ಪಿಕಪ್ ಚಲಾಯಿಸುತ್ತಿದ್ದ. ಇಂತಹ ಊರಲ್ಲಿ ಹೀಗಾಯ್ತಲ್ಲ.....!!

ಕೊಲೆಯ ಮುಂಚೂಣಿಯಲ್ಲಿದ್ದ ದೀಪಕ್ (21 ವರ್ಷ) ರೆಹಮಾನ್ ಗೆ ತೀರಾ ಪರಿಚಿತ. ಊರಿನ ಹುಡುಗ. ಬಡ ಕುಟುಂಬದ ಆತ ಮನೆ ಕಟ್ಟಲು ಆರಂಭಿಸಿದಾಗ ರೆಹಮಾನ್ ಒಂದು ಲೋಡ್ ಮರಳು ಉಚಿತವಾಗಿ ಒದಗಿಸಿದ್ದ. ಕಟ್ಟಡ ನಿರ್ಮಾಣದ ಸಾಮಾಗ್ರಿಗಳನ್ನು ರೆಹಮಾನ್ ನೇ ಸಾಗಾಟಮಾಡಿದ್ದ. ಅದರಲ್ಲಿ 30 ಸಾವಿರ ರೂಪಾಯಿ ದೀಪಕ್ ಬಾಕಿ ಉಳಿಸಿಕೊಂಡಿದ್ದ. ರೆಹಮಾನ್ ಅದಕ್ಕಾಗಿ ದೀಪಕ್ ಮೇಲೆ ಒತ್ತಡ ಏನೂ ಹಾಕಿರಲಿಲ್ಲ. ಇದಲ್ಲದೆ ದೀಪಕ್ ತಂದೆ ವಿದ್ಯುತ್ ತಂತಿ ತಾಗಿ ವರ್ಷದ ಹಿಂದೆ ನಿಧನ ಹೊಂದಿದ್ದರು. ಆ ಸಂದರ್ಭ ತುರ್ತು ಚಿಕಿತ್ಸೆಗೆ ರಕ್ತದ ಅಗತ್ಯ ಬಿದ್ದಾಗ ಇದೇ ರೆಹಮಾನ್, ದೀಪಕ್ ತಂದೆಗೆ ರಕ್ತದ ಏರ್ಪಾಡು ಮಾಡಿದ್ದ.

ನಗು ನಗುತ್ತಲೆ ಮಚ್ಚು ಬೀಸಿದ ದೀಪಕ್

ಕೊಲೆಯ ಹಿಂದಿನ ದಿವಸ ರೆಹಮಾನ್‌ನನ್ನು ಸಂಪರ್ಕಿಸಿದ ದೀಪಕ್, "ಅರ್ಜೆಂಟ್ ಒಂದು ಲೋಡ್ ಮರಳು ಬೇಕಿತ್ತು, ಮನೆಯ ಕೆಲಸ ಪೂರ್ಣ ಗೊಳಿಸಬೇಕಿದೆ, ನಾಳೆಯೇ ಹಾಕಬೇಕು" ಎಂದು ವಿನಂತಿಸಿದ್ದಾನೆ. ಅದರಂತೆ, ಕೊಲೆಯಾದ ದಿನ ಮಧ್ಯಾಹ್ನ ಕೂಲಿ ಕಾರ್ಮಿಕ ಶಾಫಿಯನ್ನು ಜೊತೆ ಸೇರಿಸಿ, ನಿರ್ಮಾಣ ಹಂತದ ತನ್ನ ಮನೆಯ ಮುಂಭಾಗದಲ್ಲಿ ಇದ್ದ ಮರಳನ್ನೆ ಪಿಕಪ್ ವಾಹನದಲ್ಲಿ ಲೋಡ್ ಮಾಡಿಕೊಂಡು ದೀಪಕ್‌ನ ಮನೆಗೆ ತೆರಳಿದ್ದಾನೆ. ಮರಳು ಅನ್‌ಲೋಡ್ ಮಾಡಿದ್ದಾರೆ. ಅಷ್ಟು ಹೊತ್ತಿಗೆ ಸುತ್ತಮುತ್ತ ಅವಿತು ಹೊಂಚು ಹಾಕುತ್ತಿದ್ದ 'ಮತಾಂಧತೆಯ ಅಫೀಮು' ಸೇವಿಸಿದ ಪರಿಚಿತ ಯುವಕರ ದಂಡು ಪಿಕಪ್ ವಾಹನದ ಎದುರು ಆಯುಧಗಳ ಸಹಿತ ಪ್ರತ್ಯಕ್ಷಗೊಂಡಿದೆ. ಕೊಲೆಯ ಸಂಚಿನ ಸಣ್ಣ ಸುಳಿವೂ ಇಲ್ಲದ, ರೆಹಮಾನ್ ನಗುತ್ತಲೇ ಮಾತಾಡಲು ಯತ್ನಿಸಿದ್ದಾನೆ. ದೀಪಕ್ ನಗು ನಗುತ್ತಲೆ ಮಚ್ಚು ಬೀಸಿದ್ದಾನೆ. ವಿಷಯ ಅರ್ಥ ಆಗುವಷ್ಟರಲ್ಲಿ ರೆಹಮಾನ್ ಕುಸಿದಿದ್ದಾನೆ. ಜೊತೆಗಿದ್ದ ಶಾಫಿಗೆ ಓಡಲು ತಿಳಿಸಿದ್ದಾನೆ. ಶಾಫಿ ಪರಿಚಿತ ಕೊಲೆಗಡುಕರ ಕಾಲು ಹಿಡಿದು ರೆಹಮಾನ್‌ನನ್ನು ಬಿಟ್ಟು ಬಿಡಿ ಎಂದು ಅಂಗಲಾಚಿದ್ದಾನೆ. ಆದರೆ ನಿರ್ದಯಿ ಹಂತಕರು ಗುರಿಯಿಟ್ಟು ಕಡಿಯತೊಡಗಿದ್ದಾರೆ. ಅಡ್ಡ ಬಂದ ಶಾಫಿಯ ಕಡೆಗೂ ಮಚ್ಚು ತಿರುಗಿದೆ. ರೆಹಮಾನ್, "ನನ್ನ ಕತೆ ಮುಗಿಯಿತು, ನೀನು ಓಡು ಓಡು" ಎಂದು ಕೂಗಿದ್ದಾನೆ. ಗಾಯಗೊಂಡ ಶಾಫಿ ತಪ್ಪಿಸಿಕೊಂಡು ಓಡಿ ಹೋಗಿ ಊರಿನ ಯುವಕರಿಗೆ ಫೋನ್ ಮಾಡಿ ವಿಷಯ ತಿಳಿಸಿದ್ದಾನೆ.

ಊರಿನ ಮುಸ್ಲಿಂ ಯುವಕರು ತಕ್ಷಣ ಸ್ಥಳಕ್ಕೆ ಧಾವಿಸಿದ್ದಾರೆ. ಅಷ್ಟು ಹೊತ್ತಿಗೆ ರೆಹಮಾನ್ ಪ್ರಾಣ ಪಕ್ಷಿ ಹಾರಿ ಹೋಗಿದೆ. ಇಷ್ಟೆಲ್ಲಾ ನಡೆಯುವಾಗ ದೀಪಕ್‌ನ ತಾಯಿ ಹಾಗು ಇತರೆ ಮಕ್ಕಳು ಆ ಮನೆಯ ಒಳಗಡೆಯೇ ಇದ್ದರು. ಮತಾಂಧತೆಯಿಂದ ಕುರುಡಾಗಿದ್ದ ದೀಪಕ್, ಮೇಲಿನ "ನಾಯಕ"ರ ಮಾತು ಕೇಳಿ ತನ್ನ ಹೊಸ ಮನೆಯ ಅಂಗಳದಲ್ಲಿ ತನಗೆ ಹಲವು ಬಾರಿ ನೆರವಾಗಿದ್ದ ಪರಿಚಿತ ಮುಸಲ್ಮಾನನನ್ನು ತನ್ನ ತಾಯಿ, ಸಣ್ಣ ಸಹೋದರರ ಕಣ್ಣೆದುರೇ ಸಹಚರರ ಜೊತೆ ಕಡಿದು ನಿರ್ದಯವಾಗಿ ಕೊಂದು ಹಾಕಿದ್ದ. "ಧರ್ಮ" ರಕ್ಷಣೆಯ ಕಾರ್ಯ ಮಾಡಿದೆ ಎಂದು ಬೀಗಿದ್ದ.

ರೆಹಮಾನ್‌ನ ಗೆಳೆಯರ ಈ ವಿವರಣೆ ನಮ್ಮನ್ನು ದಿಗ್ಮೂಢರನ್ನಾಗಿಸಿತು. ಕೋಟಿ ಚೆನ್ನಯರು, ಕಾನದ ಕಟರು, ಕೊರಗ ತನಿಯ, ಮಾಲಿಕುದ್ದಿನಾರ್, ಸಯ್ಯದ್ ಮದನಿ, ಸಿರಿಯಪ್ಪೆ, ರಾಣಿ ಅಬ್ಬಕ್ಕ, ಕುದ್ಮಲ್ ರಂಗರಾಯರು ಮುನ್ನಡೆಸಿದ ಕರಾವಳಿಯ ಸ್ಥಿತಿ ಯಾವ ಪಾತಾಳಕ್ಕೆ ಕುಸಿಯಿತು...!

ಕೋಮು ಸೋಂಕು ತಾಗದ ಸಾಮಾನ್ಯ ಹಳ್ಳಿ

ಕೊಳತ್ತಮಜಲು ಕೋಮು ಸೋಂಕು ಪೂರ್ಣ ಪ್ರಮಾಣದಲ್ಲಿ ತಾಗದ ಒಂದು ಸಾಮಾನ್ಯ ಹಳ್ಳಿ. ಇಲ್ಲಿ ಯಾವ ರಾಜಕೀಯವೂ ಇರಲಿಲ್ಲ, ನಾವು ಮನುಷ್ಯರಾಗಿಯಷ್ಟೇ ಬದುಕಿದ್ದೆವು ಎಂದು ನುಡಿಯುವ ಊರಿನ ಮುಸ್ಲಿಮರಿಗೆ, ತಮ್ಮ ಊರಿನಲ್ಲಿ ಇಂತಹ ಭೀಕರ ಘಟನೆ ನಡೆದಿರುವುದು ನಂಬಲಾಗುತ್ತಿಲ್ಲ. ದೂರದ ಬಜ್ಪೆಯ ಸುಹಾಸ್ ಶೆಟ್ಟಿಯ ಹತ್ಯೆಯ ಪ್ರತೀಕಾರ ತಮ್ಮ ಊರಿಗೆ ತಲುಪುತ್ತದೆ ಎಂಬುದು ಅವರಿಗೆ ನಂಬಲು ಸಾಧ್ಯವಾಗುತ್ತಿಲ್ಲ.

ಸಂಚು ರೂಪಿಸಿದ್ದು ಬಜರಂಗ ದಳದ ನಾಯಕ ಭರತ್ ಕುಮ್ಡೇಲು

ಈಗ ಅವರ ಆಗ್ರಹ ಒಂದೇ ಇರುವುದು. ರೆಹಮಾನ್ ಕೊಲೆಯ ಆರೋಪಿಗಳು, ಪಿತೂರಿದಾರರಿಗೆ ಕಠಿಣ ಶಿಕ್ಷೆ ಆಗಬೇಕು, ಊರಿನ ನೆಮ್ಮದಿ, ಸೌಹಾರ್ದತೆ ಉಳಿಯಬೇಕು, ದೀಪಕ್ ಹಾಗೂ ಗೆಳೆಯರನ್ನು ಈ ಕೊಲೆಗೆ ಪ್ರೇರೇಪಿಸಿದ್ದು, ಸಂಚು ರೂಪಿಸಿದ್ದು ಬಜರಂಗ ದಳದ ನಾಯಕ ಭರತ್ ಕುಮ್ಡೇಲು (ಈತ ಸುಹಾಸ್ ಕೊಲೆಗೆ ಪ್ರತೀಕಾರ ಭೀಕರವಾಗಿ ಮಾಡುತ್ತೇವೆ ಎಂದು ಪತ್ರಿಕಾಗೋಷ್ಠಿ ನಡೆಸಿ ಹೇಳಿದ್ದ, ಈ ಹೇಳಿಕೆ ಮೇಲೆ ಎಫ್‌ಐಆರ್ ಆಗಿದೆ, ಅಶ್ರಫ್ ಕಲಾಯಿ ಹತ್ಯೆಯಲ್ಲೂ ಈತ ಆರೋಪಿ). ಆತ, ಕೊಲೆಯ ಹಿಂದಿನ ದಿನ ಕೊಳತ್ತಮಜಲಿಗೆ ಬಂದು ದೀಪಕ್ ಹಾಗು ಸಹಚರರ ಜೊತೆ ಮೀಟಿಂಗ್ ಮಾಡಿದ್ದ, ಸೂಚನೆ ನೀಡಿದ್ದ, ಆತನನ್ನು ತಕ್ಷಣ ಬಂಧಿಸಬೇಕು ಎಂಬುದು.

ರೆಹಮಾನ್‌ನ ವೃದ್ಧ ತಂದೆ ಹಾಗೂ ಕೆಲವು ಹಿರಿಯರು ಇನ್ನೊಂದು ನೋವನ್ನು ನಮ್ಮಲ್ಲಿ ತೋಡಿಕೊಂಡರು. ಸ್ಥಳೀಯ ಶಾಸಕ ರಾಜೇಶ್ ನಾಯ್ಕ್ ಕನಿಷ್ಟ ಸಾಂತ್ವನವನ್ನೂ ಹೇಳಲಿಲ್ಲ ಎಂಬುದು ಅವರ ಸಂಕಟವನ್ನು ಹೆಚ್ಚಿಸಿತು. ಸುಹಾಸ್ ಶೆಟ್ಟಿ ಕೊಲೆಯ ಸಂದರ್ಭ ಶವ ಮೆರವಣಿಗೆ, ಅಂತ್ಯ ಕ್ರಿಯೆಯವರೆಗೂ ಸ್ಥಳ ಬಿಟ್ಟು ಕದಲದ, ಆ ನಂತರದ ಸುಹಾಸ್ ಕೊಲೆ ಖಂಡಿಸಿ ನಡೆದ ಪ್ರತಿಭಟನಾ ಸಭೆಗಳು, ಪ್ರತೀಕಾರದ ಮಾತುಗಳಿಗೆ ಸಾಕ್ಷಿ ಆದ ರಾಜೇಶ್ ನಾಯ್ಕ್ ತನ್ನ ಕ್ಷೇತ್ರದಲ್ಲಿ ನಡೆದ ಅಮಾಯಕನೊಬ್ಬನ ಹತ್ಯೆಗೆ ಆತನ ಧರ್ಮದ ಗುರುತಿನ ಕಾರಣಕ್ಕೆ ಕನಿಷ್ಟ ಸಂತಾಪವನ್ನೂ ಸೂಚಿಸಲಿಲ್ಲ ಎಂಬುದು ಕರಾವಳಿ ರಾಜಕಾರಣದ ಸದ್ಯದ ಹೆಗ್ಗುರುತು. ದೀಪಕ್ ಬೀಸಿದ ಮಚ್ಚಿನ ಏಟಿಗಿಂತಲೂ ಬಿಜೆಪಿ ಶಾಸಕರುಗಳ ಸದ್ಯದ ನಿಲುವುಗಳು ಕಡಿಮೆ ಅಪಾಯಕಾರಿ ಏನಲ್ಲ.

ದುಷ್ಕರ್ಮಿಗಳಿಂದ ಹತ್ಯೆಯಾದ ಅಬ್ದುಲ್ ರಹಿಮಾನ್ ಕೊಳ್ತಮಜಲ್ ರವರ ನಿವಾಸಕ್ಕೆ ಭೇಟಿ ನೀಡಿದ ಸಿಪಿಐ(ಎಂ) ನಿಯೋಗವು ಮೃತನ ಕುಟುಂಬಕ್ಕೆ ಸಾಂತ್ವನ ಹೇಳಿತು. ನ್ಯಾಯಕ್ಕಾಗಿ ನಡೆಸುವ ಹೋರಾಟದಲ್ಲಿ ಜೊತೆಗಿರುವುದಾಗಿ ಭರವಸೆ ನೀಡಿತು.

ನಿಯೋಗದಲ್ಲಿ ಸಿಪಿಐ(ಎಂ) ಜಿಲ್ಲಾ ಸಮಿತಿ ಕಾರ್ಯದರ್ಶಿ ಮುನೀರ್ ಕಾಟಿಪಳ್ಳ, ಯಾದವ ಶೆಟ್ಟಿ, ಸುನಿಲ್ ಕುಮಾರ್ ಬಜಾಲ್, ಬಿ.ಎಂ. ಭಟ್, ವಸಂತ್ ಆಚಾರಿ, ಸದಾಶಿವ ಕುಪ್ಪೆಪದವ್, ಯೋಗೀಶ್ ಜಪ್ಪಿನಮೊಗರು, ಈಶ್ವರಿ ಬೆಳ್ತಂಗಡಿ, ಸಂತೋಷ್ ಬಜಾಲ್, ರಫೀಕ್ ಹರೇಕಳ, ರಝಾಕ್ ಮೊಂಟೆಪದವ್, ರಝಾಕ್ ಮುಡಿಪು, ರಿಝ್ವಾನ್ ಹರೇಕಳ, ಬಾವಾ ಪದರಂಗಿ ಇದ್ದರು.



ಸಿಪಿಐ(ಎಂ) ನಿಯೋಗವು ಮೃತನ ಕುಟುಂಬಕ್ಕೆ ಸಾಂತ್ವನ ಹೇಳಿತು

ಜೀವ ಉಳಿಸಿದವರ ಜೀವ ತೆಗೆದರು!?

* ಹಿಂದುತ್ವವಾದಿ ಕೊಲೆಗಾರ ದೀಪಕ್ ಎಂಬಾತನ ತಂದೆ ವಿದ್ಯುತ್ ಶಾಕ್ ಹೊಡೆದು ಐಸಿಯು ನಲ್ಲಿ ಇದ್ದಾಗ ರಕ್ತದಾನ ಮಾಡಿದ್ದು ಅಬ್ದುಲ್ ರೆಹಮಾನ್. ರಕ್ತ ಸಾಲದೇ ಇದ್ದಾಗ ಊರಿನ ಮುಸ್ಲಿಂ ಯುವಕರನ್ನು ಒಟ್ಟುಗೂಡಿಸಿ ರಕ್ತ ದಾನ ಮಾಡಿಸಿದ್ದರು. ಕೊಲೆಗಾರ ದೀಪಕ್ ನ ತಂದೆಯ ದೇಹದಲ್ಲಿ ಅಬ್ದುಲ್ ರೆಹ್ಮಾನ್ ರಕ್ತವಿತ್ತು. ಆದರೂ ಹಿಂದುತ್ವ ಸಂಘಟನೆಗಳ ಪ್ರಚೋದನೆಗೆ ಒಳಗಾದ ದೀಪಕ್, ಅಬ್ದುಲ್ ರೆಹ್ಮಾನ್ ನನ್ನು ತನ್ನ ಮನೆಗೇ ಕರೆಸಿಕೊಂಡು ಕೊಂದ ಬಿಟ್ಟ.
* ಹಿಂದುತ್ವವಾದಿ ಕೊಲೆಗಾರ ದೀಪಕ್ ಮನೆ ಕಟ್ಟುತ್ತಿದ್ದ. ಆ ಮನೆಗೆ ಉಚಿತವಾಗಿ ರೆಹ್ಮಾನ್ ಎರಡು ಲೋಡ್ ಮರಳು ಹಾಕಿದ್ದ. ಕೊಲೆಯಾದ ದಿನ ಕೊಲೆ ಮಾಡಲೆಂದೇ 'ಅರ್ಜೆಂಟ್ ಮರಳು ಬೇಕು' ಎಂದು ಕರೆ ಮಾಡಿದ್ದ. ತನ್ನ ಮನೆ ಬಳಕೆಗೆಂದು ಇಟ್ಟಿದ್ದ ಮರಳನ್ನು ಲೋಡ್ ಮಾಡಿಕೊಂಡು ದೀಪಕ್ ನ ಮನೆಗೆ ಹೋಗಿ ಅನ್ಲೋಡ್ ಮಾಡುತ್ತಿದ್ದಾಗ ದೀಪಕ್ ಕೊಲೆ ಮಾಡಿದ.

ಕರಾವಳಿಯ ದೇವಸ್ಥಾನ, ದೈವಸ್ಥಾನ, ಶೋಭಾಯಾತ್ರೆಗಳಲ್ಲಿ ಅಬ್ದುಲ್ ರೆಹ್ಮಾನ್ ಮಾಡಿದ ಸೌಹಾರ್ದತೆಯ 'ಅಳಿಲ ಸೇವೆ' ಸಾಕಷ್ಟಿದೆ. ಈ ಸಮಾಜ ಸೇವೆಗಳನ್ನು ಬದಿಗಿಟ್ಟು ನೋಡಿದರೂ ಅಬ್ದುಲ್ ರೆಹ್ಮಾನ್ ವೈಯುಕ್ತಿಕವಾಗಿ ಮಾನವೀಯ ಅಂತಃಕರಣವುಳ್ಳ ವ್ಯಕ್ತಿ. ಕೊಲೆಗಾರನ ತಂದೆಯ ಜೀವ ಉಳಿಸುವುದರಿಂದ ಹಿಡಿದು ಮನೆ ಕಟ್ಟುವುದರವರೆಗೂ ನೆರವಾಗಿದ್ದ. ಆದರೂ ಅಬ್ದುಲ್ ರೆಹ್ಮಾನ್ ಕೊಲೆಯಾದರು. ಕೋಮುವಾದ ಅನ್ನೋದು ರಕ್ತ ಹಂಚಿದವನನ್ನೇ ಕೊಲೆ ಮಾಡಿಸುತ್ತೆ. ಆ ಕಾರಣಕ್ಕಾಗಿ ನಾವು ಮತೀಯ ದ್ವೇಷವನ್ನು ಯಾವ ಬೆಲೆ ತೆತ್ತಾದರೂ ವಿರೋಧಿಸಬೇಕು.

–ನವೀನ್ ಸೂರಿಂಜೆ



ಸಿಐಟಿಯುಗೆ ೫೫ರ ಸಂಭ್ರಮ

ಕಾರ್ಮಿಕರ ಹಕ್ಕುಗಳಿಗಾಗಿ ವ್ಯಾಪಕ ಚಳುವಳಿ ಕಟ್ಟಲು ಪಣ

ಮೇ ೩೦ರಂದು ಸಿಐಟಿಯು (ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್)ನ ೫೫ನೇ ಸಂಸ್ಥಾಪನಾ ದಿನ. ಇದೇ ವೇಳೆಗೆ, ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಕಾರ್ಮಿಕರ ವ್ಯಾಪಕ ವಿರೋಧವನ್ನೂ ಲೆಕ್ಕಿಸದೆ, ಪ್ರತಿಭಟನೆಗೂ ಮಣಿಯದೆ, ಕಾರ್ಮಿಕ ವಿರೋಧಿ ಕಾನೂನುಗಳನ್ನು ಜಾರಿಗೆ ತರಲು ಮುಂದಾಗಿವೆ. ಕೇಂದ್ರ ಸರ್ಕಾರವು ತನ್ನ ನಾಲ್ಕು ಕಾರ್ಮಿಕ ಸಂಹಿತೆಯ ಮೂಲಕ ಕಾರ್ಮಿಕರ ಹಕ್ಕುಗಳನ್ನು ಕಸಿದುಕೊಳ್ಳಲು ಹೊರಟಿದೆ. ದುಡಿಯುವ ವರ್ಗದ ಜನರ ಬೇಡಿಕೆಗಳನ್ನು ಇಟ್ಟು ಇದೇ ಜುಲೈ ೯ರಂದು ನಡೆಯುವ ಅಖಿಲ ಭಾರತ ಸಾರ್ವತ್ರಿಕ ಮುಷ್ಕರವನ್ನು ಯಶಸ್ವಿಗೊಳಿಸಲು ದೇಶಾದ್ಯಂತ ವ್ಯಾಪಕ ಪ್ರಚಾರ ಮತ್ತು ಸಿದ್ಧತೆಗಳು ನಡೆಯುತ್ತಿವೆ. ಈ ಸಂದರ್ಭದಲ್ಲಿ ಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳ ಕುರಿತಾಗಿ ಒಂದು ಕಿರು ನೋಟ.

ಖಾಯಂ ಮತ್ತು ಸಮರ್ಪಕ ಉದ್ಯೋಗ ಎಂಬುದು ಕಾರ್ಮಿಕರ ಕನಸು. ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿ ಮಾಡುವುದಾಗಿ 11 ವರ್ಷಗಳ ಹಿಂದೆ ಬಿಜೆಪಿ ನೀಡಿದ ಚುನಾವಣಾ ಭರವಸೆ ಏನಾಯ್ತು? ಈ ಪ್ರಶ್ನೆಗೆ ಕೇಂದ್ರದ ಗೃಹ ಸಚಿವ ಅಮಿತ್ ಶಾ ಅವರಿಂದ ಬಂದ ಉತ್ತರ 'ಇದು ಜುಮ್ಲಾ' (ಕೇವಲ ಮಾತು) ಎಂದು. ನಮ್ಮ ದೇಶದಲ್ಲಿ ಮಾನವ ಸಂಪನ್ಮೂಲವಿದೆ. ನೈಸರ್ಗಿಕ ಸಂಪನ್ಮೂಲಗಳಿವೆ. ಆದರೆ, ಅವುಗಳನ್ನು ಸಂಪೂರ್ಣವಾಗಿ ದೇಶದ ಪ್ರಗತಿಗೆ ಬಳಸುತ್ತೇವೆಯೇ ಎಂಬುದು ಪ್ರಶ್ನೆಯಾಗಿಯೇ ಉಳಿದಿದೆ. ನಮ್ಮ ದೇಶದ ಜನಸಂಖ್ಯೆಯಲ್ಲಿ ಯುವಕರು ಹೆಚ್ಚಿನ ಪ್ರಮಾಣದಲ್ಲಿದ್ದಾರೆ. ಎಲ್ಲರಿಗೂ ಸರಿಯಾದ, ವೈಜ್ಞಾನಿಕ ಶಿಕ್ಷಣ ಪಡೆಯಲು ಅವಕಾಶವಿಲ್ಲ. 1990ರ ದಶಕದಲ್ಲಿ ಜಾರಿಗೆ ಬಂದ ನವ–ಉದಾರವಾದಿ ನೀತಿಗಳಿಂದಾಗಿ ಶಿಕ್ಷಣ, ವೈದ್ಯಕೀಯ, ಸಾರಿಗೆ, ದೂರಸಂಪರ್ಕ, ಹಣಕಾಸು ಇತ್ಯಾದಿಗಳಲ್ಲಿ ಖಾಸಗಿ ವಲಯವು ವ್ಯಾಪಕವಾಗಿ ಹರಡಿ ಹೋಗಿದೆ. ವರ್ಷದಲ್ಲಿ 240 ದಿನ ಕೆಲಸ ಮಾಡಿದರೆ ಖಾಯಂ ಮಾಡಬೇಕೆಂಬ ಕಾನೂನನ್ನು ಆಳುವ ವರ್ಗಗಳು ನಿರ್ಲಕ್ಷಿಸುತ್ತಲೇ ಇವೆ. ಅಪ್ರೆಂಟಿಸ್‌ಗಳಿಗೆ ಎನ್ಇಎಂ (ರಾಷ್ಟ್ರೀಯ ಉದ್ಯೋಗ ಅಭಿವೃದ್ಧಿ ಕಾರ್ಯಕ್ರಮ) ಮೂಲಕ ಉತ್ಪಾದನಾ ವಲಯದಲ್ಲಿ ಕೆಲಸ ಮಾಡಲು ಅವಕಾಶ ನೀಡಲಾಗುತ್ತದೆ. ಕಾರ್ಖಾನೆಗಳಲ್ಲಿ ಆರಂಭವಾದ 'ನಿಶ್ಚಿತ ಅವಧಿಯ ಕೆಲಸ' ಎಂಬುದು, ಸೇನೆಯಲ್ಲಿ 'ಅಗ್ನಿ ವೀರ್' ಯೋಜನೆಗೂ ವ್ಯಾಪಿಸಿದೆ. ಅಗ್ನಿ ವೀರ್ ಯೋಜನೆ ಮೂಲಕ ಸೈನ್ಯಕ್ಕೆ ಸೇರಿಕೊಳ್ಳುವವರು ಕೇವಲ ನಾಲ್ಕು ವರ್ಷಗಳ ಕಾಲ ಮಾತ್ರ ಸೈನಿಕರು ಎನಿಸಿಕೊಳ್ಳುತ್ತಾರೆ. ನಂತರ ಅವರ ಬುದುಕು ಕತ್ತಲೆಯ ಭವಿಷ್ಯದಲ್ಲಿ ಬೆಳಕಿಗಾಗಿ ಹುಡುಕಾಟ ನಡೆಸುವ ಸ್ಥಿತಿಗೆ ತಲುಪುತ್ತದೆ.

ಗುತ್ತಿಗೆ ಪದ್ಧತಿ ಸಾಂಕ್ರಾಮಿಕವಾಗಿ ಹರಡುತ್ತಿದೆ.

ಎಲ್ಲೆಡೆ ಗುತ್ತಿಗೆ ಪದ್ಧತಿ ಎಂಬುದು ಸಾಂಕ್ರಾಮಿಕವಾಗಿ ಹರಡುತ್ತಿದೆ. ಸರ್ಕಾರಿ ವಲಯದಲ್ಲಿ, ಸಾರ್ವಜನಿಕ ಉದ್ಯಮ ವಲಯದಲ್ಲಿ ಗುತ್ತಿಗೆ ಕಾರ್ಮಿಕರ ಸಂಖ್ಯೆ ಖಾಯಂ ಕಾರ್ಮಿಕರ ಸಂಖ್ಯೆಗಿಂತ ಹೆಚ್ಚುತ್ತಿದೆ. 1970ರ ಗುತ್ತಿಗೆ ಕಾಯಿದೆಯಲ್ಲಿ ಶಾಶ್ವತ ಸ್ವರೂಪದ ಕಾಮಗಾರಿಗಳಿಗೆ ಗುತ್ತಿಗೆ ವ್ಯವಸ್ಥೆ ಇರಬಾರದು ಎಂದು ಹೇಳಲಾಗಿದೆ. ಇದನ್ನು ಉಲ್ಲಂಘಿಸುವ ಯಾವುದೇ ಕಾರ್ಪೊರೇಟ್ ಸಂಸ್ಥೆ, ಮಾಲೀಕರ ವಿರುದ್ಧ ಕ್ರಮ ತೆಗೆದುಕೊಳ್ಳುವ ಹಕ್ಕು ಸರ್ಕಾರಕ್ಕಿದೆ. ಅಥವಾ, 20 ಅಥವಾ ಅದಕ್ಕಿಂತ ಹೆಚ್ಚು ಗುತ್ತಿಗೆ ಕಾರ್ಮಿಕರನ್ನು ನೇಮಿಸಿಕೊಳ್ಳುವ ಗುತ್ತಿಗೆದಾರರು ಕಾನೂನು ಬದ್ಧವಾಗಿ ನೋಂದಾಯಿಸಿಕೊಳ್ಳಬೇಕಾಗುತ್ತದೆ. ಈ ಗುತ್ತಿಗೆ ಕಾರ್ಮಿಕರಿಗೂ ಪಿಎಫ್, ಇಎಸ್ಐ, ಬೋನಸ್‌ನಂತಹ ಸಾಮಾಜಿಕ ಭದ್ರತಾ ಯೋಜನೆಗಳನ್ನು ಜಾರಿಗೊಳಿಸಬೇಕು. 20 ಇದ್ದ ಈ ಕಾರ್ಮಿಕರ ಸಂಖ್ಯೆಯನ್ನು 50ಕ್ಕೆ ಪರಿಷ್ಕರಿಸಲು ಕೇಂದ್ರ ಸರ್ಕಾರ ಇಂದು ಅವಕಾಶ ನೀಡಿದೆ. 50ಕ್ಕಿಂತ ಕಡಿಮೆ ಸಂಖ್ಯೆಯ ಕಾರ್ಮಿಕರನ್ನು ಹೊಂದಿರುವ ಗುತ್ತಿಗೆದಾರರ ಬಳಿ ನೇಮಕಗೊಳ್ಳುವ ಕಾರ್ಮಿಕರು, ಕಾರ್ಮಿಕ ಕಾಯ್ದೆ ಮೂಲಕ ಸಿಗಬೇಕಾದ ಸಾಮಾಜಿಕ ಭದ್ರತಾ ಯೋಜನೆಗಳಿಂದ ವಂಚಿತರಾಗುತ್ತಾರೆ.

ಮತ್ತೊಂದಡೆ, 50 ಅಥವಾ ಅದಕ್ಕಿಂತ ಹೆಚ್ಚು ಗುತ್ತಿಗೆ ಕಾರ್ಮಿಕರನ್ನು ನೇಮಿಸಿಕೊಳ್ಳುವ ಗುತ್ತಿಗೆದಾರರು, ಕಾರ್ಮಿಕರನ್ನು 49, 49 ವಿಗಂಡಿಸಿ, ಪ್ರತ್ಯೇಕ ಗುಂಪುಗಳನ್ನಾಗಿ ಪರಿವರ್ತಿಸುವ ಮೂಲಕ ಸಣ್ಣ ಸಣ್ಣ ಗುತ್ತಿಗೆದಾರನೆಂದು ತೋರಿಸಿಕೊಂಡು, ಸಾರ್ವಜನಿಕ ವಲಯದಲ್ಲಿಯೂ ಸಹ ಕಾನೂನು ಜಾರಿಯಿಂದ ಸಂಪೂರ್ಣವಾಗಿ ತಪ್ಪಿಸಿಕೊಳ್ಳಬಹುದು. ಇದರಿಂದಾಗಿ, ಕಾರ್ಮಿಕನಿಗೆ ತನ್ನ ಜೀವನದುದ್ದಕ್ಕೂ ಗುತ್ತಿಗೆ ಕೆಲಸಗಾರನಾಗಿ ನಿವೃತ್ತಿಯಾಗುವ ದುರದೃಷ್ಟಕರ ಸ್ಥಿತಿ ಬರಬಹುದು. ಸಮಾನ ಕೆಲಸಕ್ಕೆ ಸಮಾನ ವೇತನ ಎಂಬ ಸಿದ್ಧಾಂತದ ಪ್ರಕಾರ, ಕಾಯಂ ಕಾರ್ಮಿಕರಿಗೆ ಸಮಾನವಾಗಿ ಕೆಲಸ ಮಾಡುವ ಗುತ್ತಿಗೆ ಕಾರ್ಮಿಕರಿಗೆ ಸಮಾನ ವೇತನ ನೀಡಬೇಕು. ಇದನ್ನು ನಿರಾಕರಿಸುವ ಕಾರ್ಖಾನೆಗಳ ಮಾಲೀಕರ ಕ್ರೌರ್ಯ ಸರಕಾರಕ್ಕೆ ಕಾಣುತ್ತಿಲ್ಲ.

ಹೊಸ ಪಿಂಚಣಿ ಯೋಜನೆ
ಭವಿಷ್ಯದ ಸುರಕ್ಷತೆಗೆ ನೆರವಾಗುವುದೇ?

ಸಾಮಾಜಿಕ ಭದ್ರತಾ ವ್ಯವಸ್ಥೆಯನ್ನು ಅವಲಂಬಿಸಿರುವ ಕಾರ್ಮಿಕರಿಗೆ ಭವಿಷ್ಯ ಉಳಿತಾಯ ನಿಧಿ ಪಿಎಫ್ ಸೌಲಭ್ಯ, ಪಿಂಚಣಿ ಸೌಲಭ್ಯ ಇತ್ಯಾದಿ ಸಾಮಾಜಿಕ ಭದ್ರತಾ ಯೋಜನೆಗಳಿವೆ. ಕೇಂದ್ರ ಸರ್ಕಾರವು ತನ್ನ ನಾಲ್ಕು ಕಾರ್ಮಿಕ ಸಂಹಿತೆಯ ಕಾನೂನುಗಳ ಮೂಲಕ, ಕಂಪನಿ ಆಡಳಿತ ಮತ್ತು ಕಾರ್ಮಿಕರು ಬಯಸಿದಲ್ಲಿ ಪಿಎಫ್ ಮತ್ತು ಇಎಸ್ಐ ಯೋಜನೆಗಳಿಂದ ಹೊರಗುಳಿಯಲು ಅನುಮತಿಸುವ ಷರತ್ತುಗಳನ್ನು ರೂಪಿಸಿದೆ. ಕಾರ್ಮಿಕರು ಹೋರಾಟ ಮಾಡಿ ಗಳಿಸಿದ ಸಾಮಾಜಿಕ ಭದ್ರತಾ ಯೋಜನೆಗಳು ಉಳಿಯುತ್ತವೆಯೇ ಎಂಬ ಪ್ರಶ್ನೆ ಈಗ ಉದ್ಭವಿಸಿದೆ.

ಕೇಂದ್ರ ಸರ್ಕಾರವು ಖಾಸಗಿ ವಿಮೆ, ಖಾಸಗಿ ಆಸ್ಪತ್ರೆಗಳು ಮತ್ತು ಖಾಸಗಿ ಔಷಧ ತಯಾರಕರನ್ನು ಬೆಳೆಸಲು ಮುಂದಾಗುತ್ತಿದೆ. ಜನವರಿ 2004ರಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಿ ನೌಕರರಿಗೆ ಹೊಸ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಹಳೆಯ ಪಿಂಚಣಿ ಯೋಜನೆಯಡಿ, ನೌಕರನು ತನ್ನ ಕೊನೆಯ ತಿಂಗಳ ಸಂಬಳದ ಅರ್ಧದಷ್ಟನ್ನು ನಿವೃತ್ತಿಯ ನಂತರ ಪಿಂಚಣಿಯಾಗಿ ಪಡೆಯುತ್ತಿದ್ದನು. ನೌಕರರ ಕೊಡುಗೆಗೆ ಸಮಾನವಾದ ಪಿಎಫ್ ಕೊಡುಗೆಯನ್ನು ಸರ್ಕಾರವು ಪಾವತಿಸುತ್ತಿತ್ತು. ಆದರೆ ಹೊಸ ಪಿಂಚಣಿ ಯೋಜನೆಯಲ್ಲಿ ಪಿಂಚಣಿಗಾಗಿಯೇ ಸರ್ಕಾರಿ ನೌಕರರ ಸಂಬಳದಿಂದ ಮಾಸಿಕ ಶೇ.10 ರಷ್ಟು ಹಣವನ್ನು ಕಡಿತಗೊಳಿಸಲಾಗುತ್ತದೆ. ಸರ್ಕಾರವೂ ತನ್ನ ಪಾಲಿನ ಶೇ.14ರಷ್ಟನ್ನು ಕೊಡುತ್ತದೆ. 60ನೇ ವಯಸ್ಸಿನಲ್ಲಿ, ಒಟ್ಟು ಪಿಂಚಣಿ ಉಳಿತಾಯದ ಶೇ.60 ನಗದು ರೂಪದಲ್ಲಿ ನೌಕರನಿಗೆ ಲಭ್ಯವಿರುತ್ತದೆ. ವಿಮಾ ಕಂಪನಿಗಳ ಸೆಕ್ಯೂರಿಟಿಗಳಲ್ಲಿ ಶೇ.40 ರಷ್ಟನ್ನು ಹೂಡಿಕೆ ಮಾಡಬೇಕು. ಇದಕ್ಕೆ ಜಿಎಸ್‌ಟಿ ಕೂಡ ಪಾವತಿಸಬೇಕಾಗುತ್ತದೆ. ಹೂಡಿಕೆಯು ಉತ್ತಮ ಆದಾಯವನ್ನು ನೀಡಿದರೆ ಉತ್ತಮ ಪಿಂಚಣಿ. ಇದನ್ನು ಪಿಂಚಣಿ ಎಂದು ವ್ಯಾಖ್ಯಾನಿಸಲಾಗಿಲ್ಲ. ಹಳೆಯ ಪಿಂಚಣಿ ಯೋಜನೆಯಲ್ಲಿ ಶೇ.40 ಪಿಂಚಣಿಯನ್ನು ನಗದು ರೂಪದಲ್ಲಿ ಕಮ್ಯುಟೇಶನ್ ಮೂಲಕ ಪಡೆಯಬಹುದು. ಆದರೆ ಹೊಸ ಪಿಂಚಣಿ ಯೋಜನೆಯಲ್ಲಿ ಇಂತಹ ಸೌಲಭ್ಯವಿಲ್ಲ.

ಏಕೀಕೃತ ಪಿಂಚಣಿ ಯೋಜನೆ(UPS)

ಏಕೀಕೃತ ಪಿಂಚಣಿ ಯೋಜನೆ(ಯುಪಿಎಸ್)ಗೆ ಉದ್ಯೋಗಿಗಳು ಶೇ.10 ಕೊಡುಗೆಯನ್ನು ಮುಂದುವರಿಸುತ್ತಾರೆ. ಸರ್ಕಾರ ಶೇ.18.5 ಅನ್ನು ನೀಡುತ್ತದೆ. ಅಂದರೆ, ಒಟ್ಟು ಶೇ.28.5ರಷ್ಟು ಪಿಂಚಣಿ ಖಾತೆಗೆ ಜಮಾ ಆಗಬೇಕಲ್ಲವೇ? ಆದರೆ, ಸರ್ಕಾರವು ನೌಕರನ ಶೇ.10ಕ್ಕೆ ಕೇವಲ ಶೇ.10 ಅನ್ನು ಸೇರಿಸುತ್ತದೆ. ಆದ್ದರಿಂದ ಒಟ್ಟು ನೌಕರನ ಖಾತೆಯಲ್ಲಿ ಶೇ.28.5ರ ಬದಲಿಗೆ ಶೇ.20ರಷ್ಟು ಮಾತ್ರ ಇರುತ್ತದೆ. ಉಳಿದ ಶೇ.8.5ರಲ್ಲಿ ಸರ್ಕಾರ ಪ್ರತ್ಯೇಕ ಖಾತೆಯನ್ನು ಸ್ಥಾಪಿಸಲಿದೆಯಂತೆ. ಅದನ್ನು ಮಾರುಕಟ್ಟೆಯಲ್ಲಿ ನಿರಂತರವಾಗಿ ಹೂಡಿಕೆ ಮಾಡಿ ಲಾಭ ಪಡೆದರೆ, ಆ ಲಾಭವನ್ನು ಪ್ರತ್ಯೇಕ ಪಿಂಚಣಿ ಖಾತೆಗೆ ಸೇರಿಸುತ್ತಾರೆ. ಅವರು ಅದನ್ನು ಪ್ರತ್ಯೇಕವಾಗಿ ನಿರ್ವಹಿಸುತ್ತ ಪಿಂಚಣಿಯಲ್ಲಿನ ಕೊರತೆಯನ್ನು ಸರಿದೂಗಿಸಲು ಬಳಸುತ್ತಾರೆ. ಪ್ರತ್ಯೇಕ ಖಾತೆಯಲ್ಲಿ ಇರುವ ಸಂಪೂರ್ಣ ಮೊತ್ತವನ್ನು ಸರ್ಕಾರ ತೆಗೆದುಕೊಳ್ಳುತ್ತದೆ. ಉದ್ಯೋಗಿಗೆ ಖಾತರಿಯ ಕುಟುಂಬ ಪಿಂಚಣಿ ನೀಡಲಾಗುತ್ತದೆ. ಇಬ್ಬರೂ ಮರಣಹೊಂದಿದ ನಂತರ, ಅವರು ಹೂಡಿಕೆ ಮಾಡಿದ ಹಣವು ನಾಮಿನಿಗೆ ಹೋಗುತ್ತದೆ.

ಅಸಂಘಟಿತ ಕಾರ್ಮಿಕರಿಗೆ
ಕೇಂದ್ರ ಸರ್ಕಾರದಿಂದ ದ್ರೋಹ

2008ರಲ್ಲಿ ಎಡ ಪಕ್ಷಗಳ 62 ಸಂಸದರ ಒತ್ತಾಯದಿಂದಾಗಿ ಅಸಂಘಟಿತ ಕಾರ್ಮಿಕರ ಸಾಮಾಜಿಕ ರಕ್ಷಣೆಗಾಗಿ ಅಖಿಲ ಭಾರತ ಕಾಯಿದೆಯನ್ನು ಅಂಗೀಕರಿಸಲಾಯಿತು. ಮನಮೋಹನ್ ಸಿಂಗ್ ಸರ್ಕಾರ ಈ ಕಾನೂನು ಜಾರಿಗಾಗಿಯೇ 1,000 ಕೋಟಿ ರೂ. ಮಂಜೂರು ಮಾಡಿತು. ಕೇಂದ್ರ ಸರ್ಕಾರವು ವಾರ್ಷಿಕವಾಗಿ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತೆಗಾಗಿ ಜಿಡಿಪಿಯ ಶೇ.3 ರಷ್ಟನ್ನು–ಅಂದರೆ ಮೂರು ಲಕ್ಷ ಕೋಟಿ ರೂಪಾಯಿಗಳನ್ನು ನಿಗದಿಪಡಿಸಬೇಕೆಂದು ಎಲ್ಲಾ ಕೇಂದ್ರ ಕಾರ್ಮಿಕ ಸಂಘಟನೆಗಳು ಒತ್ತಾಯಿಸಿವೆ. ಇದು ಕಾರ್ಮಿಕರ ಎಲ್ಲಾ ಅಖಿಲ ಭಾರತ ಸಾರ್ವತ್ರಿಕ ಮುಷ್ಕರಗಳಲ್ಲಿನ ಪ್ರಮುಖ ಬೇಡಿಕೆಯಾಗಿತ್ತು. ಇದಕ್ಕೆ ಬಿಜೆಪಿ ಸರಕಾರ ಇದುವರೆಗೂ ಹಣ ಮೀಸಲಿಟ್ಟಿಲ್ಲ. ಮತ್ತೊಂದೆಡೆ, ಕೇಂದ್ರ ಸರ್ಕಾರವು ಕಾರ್ಪೊರೇಟ್‌ಗಳಿಗೆ ಹಲವಾರು ಲಕ್ಷ ಕೋಟಿ ರೂಪಾಯಿಗಳ ತೆರಿಗೆ ಪ್ರೋತ್ಸಾಹವನ್ನು ನೀಡುತ್ತದೆ.

ವಸೂಲಾಗದ ಸಾಲ(NPA)ದ ಹೆಸರಲ್ಲಿ ಉದ್ಯಮಿಗಳ ಲಕ್ಷಾಂತರ ಕೋಟಿ ಬ್ಯಾಂಕ್ ಸಾಲ ಮನ್ನಾಮಾಡುವ ಕೇಂದ್ರ ಸರಕಾರ, 38 ಕೋಟಿ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತೆಗೆ ಹಣ ಮೀಸಲಿಡದಿರುವುದು ದೊಡ್ಡ ದ್ರೋಹವಾಗಿದೆ. 'ಇ–ಶ್ರಮ್' ಎಂಬ ಅಸಂಘಟಿತ ಕಾರ್ಮಿಕರ ನೊಂದಣಿ ಪ್ರಕ್ರಿಯೆಯು ಸುಪ್ರೀಂ ಕೋರ್ಟ್ ಆದೇಶದ ಮೇರಗೆ ಆಗಸ್ಟ್ 2021 ರಿಂದ ಜಾರಿಗೆ ಬಂದಿದೆ. ಆದರೆ, ಸಾಮಾಜಿಕ ಭದ್ರತಾ ಯೋಜನೆಗಳು, ಹಣ ವಿನಿಯೋಗ, ಮೂಲಸೌಕರ್ಯ ಯಾವುದನ್ನೂ ಇದುವರೆಗೂ ಕೇಂದ್ರ ಸರ್ಕಾರ ಸ್ಥಾಪಿಸಿಲ್ಲ. ಪ್ರಧಾನ ಮಂತ್ರಿ ಶ್ರಮ ಯೋಗಿ ಮಂದನ್ (PM-SYM) ಎಂಬ ಮರುನಾಮಕರಣಗೊಂಡ ಅಟಲ್ ಪಿಂಚಣಿ ಯೋಜನೆಯನ್ನು ಸರ್ಕಾರ ಘೋಷಿಸಿದೆ. ➚

ಸಿಐಟಿಯು ತನ್ನ ಸಂವಿಧಾನದಲ್ಲಿ 'ಗುರಿಗಳು ಮತ್ತು ಉದ್ದೇಶಗಳು' ಕುರಿತು ಹೀಗೆ ಹೇಳಿದೆ:

'ವರ್ಗ ಐಕ್ಯತೆ ಮತ್ತು ವರ್ಗ ಹೋರಾಟ' ಎಂಬ ದೃಷ್ಟಿಕೋನದೊಂದಿಗೆ 1970ರಲ್ಲಿ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (CITU) ಸ್ಥಾಪನೆಯಾಯಿತು, ಈ ದೃಷ್ಟಿಕೋನವನ್ನು ಸಿಐಟಿಯುನ ಸಂವಿಧಾನದಲ್ಲಿ ಸ್ಪಷ್ಟವಾಗಿ ಹೀಗೆ ಹೇಳಲಾಗಿದೆ: 'ಎಲ್ಲಾ ಉತ್ಪಾದನಾ ಸಾಧನಗಳಾದ ವಿತರಣೆ ಮತ್ತು ವಿನಿಮಯವನ್ನು ಸಾಮಾಜಿಕೀಕರಿಸುವ ಮೂಲಕ ಮತ್ತು ಸಮಾಜವಾದಿ ರಾಜ್ಯವನ್ನು ಸ್ಥಾಪಿಸುವ ಮೂಲಕ ಮಾತ್ರ ಕಾರ್ಮಿಕ ವರ್ಗದ ಶೋಷಣೆಯನ್ನು ಕೊನೆಗೊಳಿಸಬಹುದು ಎಂದು ಸಿಐಟಿಯು ನಂಬುತ್ತದೆ. ಸಮಾಜವಾದದ ಆದರ್ಶಗಳನ್ನು ದೃಢವಾಗಿ ಹಿಡಿದುಕೊಂಡು, ಸಿಐಟಿಯು ಸಮಾಜವನ್ನು ಎಲ್ಲಾ ಶೋಷಣೆಯಿಂದ ಸಂಪೂರ್ಣ ವಿಮೋಚನೆಗಾಗಿ ನಿಲ್ಲುತ್ತದೆ'.

'ವರ್ಗ ಹೋರಾಟವಿಲ್ಲದೆ ಯಾವುದೇ ಸಾಮಾಜಿಕ ಪರಿವರ್ತನೆಯನ್ನು ತರಲು ಸಾಧ್ಯವಿಲ್ಲ ಎಂಬ ನಿಲುವನ್ನು ಅದು ದೃಢವಾಗಿ ಪಾಲಿಸುತ್ತದೆ ಮತ್ತು ಕಾರ್ಮಿಕ ವರ್ಗವನ್ನು ವರ್ಗ ಸಹಯೋಗದ ಹಾದಿಯಲ್ಲಿ ಕೊಂಡೊಯ್ಯುವ ಪ್ರಯತ್ನಗಳನ್ನು ನಿರಂತರವಾಗಿ ಹಿಮ್ಮೆಟ್ಟಿಸುತ್ತದೆ'.

ಆರ್‌ಬಿಐ ನಿಂದ ಸರಕಾರಕ್ಕೆ ದಾಖಲೆ ಮಿಗುತೆ ವರ್ಗಾವಣೆ: ಎಐಕೆಎಸ್ ಕಳವಳ
"ನಬಾರ್ಡ್‌ಗೆ ಮತ್ತು ಮನರೇಗಕ್ಕೆ ವರ್ಗಾಯಿಸಿದ್ದರೆ ಕೋಟ್ಯಂತರ ರೈತರಿಗೆ ಪ್ರಯೋಜನವಾಗುತ್ತಿತ್ತು"

ಭಾರತೀಯ ರಿಸರ್ವ್ ಬ್ಯಾಂಕ್(ಆರ್‌ಬಿಐ)ನ ಕೇಂದ್ರ ಮಂಡಳಿಯು ಇತ್ತೀಚೆಗೆ 2024–25ನೇ ಹಣಕಾಸು ವರ್ಷಕ್ಕೆ ದಾಖಲೆಯ 2.69 ಲಕ್ಷ ಕೋಟಿ ರೂ. ಮಿಗುತೆಯನ್ನು ಕೇಂದ್ರ ಸರ್ಕಾರಕ್ಕೆ ವರ್ಗಾಯಿಸಲು ನಿರ್ಧರಿಸಿದೆ ಎಂಬುದು ತೀವ್ರ ಕಳವಳದ ಸಂಗತಿ ಎಂದು ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ಹೇಳಿದೆ.

ಆರ್‌ಬಿಐ ತನ್ನ ಆರ್ಥಿಕ ಬಂಡವಾಳ ಚೌಕಟ್ಟನ್ನು (ಇಸಿಎಫ್) ಪರಿಷ್ಕರಿಸಿದ ನಂತರ ಈ ನಿರ್ಧಾರವನ್ನು ತೆಗೆದುಕೊಂಡಿತು. ಈ ಪರಿಷ್ಕರಣೆ ಕೇಂದ್ರ ಸರ್ಕಾರಕ್ಕೆ ಮಿಗುತೆಯ ವರ್ಗಾವಣೆಯನ್ನು ಮಾಡುವುದನ್ನು ಆರ್‌ಬಿಐಗೆ ಸುಗಮಗೊಳಿಸಿತು. 2023–24ರಲ್ಲಿ ಅದು ಸರಕಾರಕ್ಕೆ 2.11 ಲಕ್ಷ ಕೋಟಿ ರೂ. ಮಿಗುತೆಯನ್ನು ವರ್ಗಾಯಿಸಿದರೆ, 2024–25ನೇ ಸಾಲಿಗೆ ಕೇಂದ್ರ ಸರ್ಕಾರಕ್ಕೆ ಆರ್‌ಬಿಐನ ಲಾಭಾಂಶವು ಶೇ.27 ರಷ್ಟು ಹೆಚ್ಚಾಗಿದೆ.

ದೊಡ್ಡ ಬಂಡವಾಳಿಗರ ನಿಯಂತ್ರಣದಲ್ಲಿರುವ ಭಾರತದ ಪ್ರಭುತ್ವವು ಆರ್ಥಿಕ ಸುಧಾರಣೆಗಳ ನಂತರದ ಯುಗದಲ್ಲಿ ಪ್ರಭುತ್ವದ ದುಡಿಯುವ ಜನರ ವಿರೋಧಿ ಒಟ್ಟಾರೆ ಆರ್ಥಿಕ ಕಾರ್ಯತಂತ್ರಕ್ಕೆ ಸರಿಹೊಂದುವಂತೆ ಆರ್‌ಬಿಐನ ಸ್ವಾಯತ್ತತೆಯನ್ನು ವ್ಯವಸ್ಥಿತವಾಗಿ ಕ್ಷಯಿಸುತ್ತ ಬಂದಿದೆ. ಮೋದಿ ದಿಲ್ಲಿ ಗದ್ದುಗೆ ಏರಿದ ನಂತರದಿಂದ ಸ್ಥೂಲ ಆರ್ಥಿಕ ಮತ್ತು ಹಣಕಾಸು ಧೋರಣೆಗಳನ್ನು ನಿರ್ಧರಿಸುವಲ್ಲಿ ಜಾಗತಿಕ ಹಣಕಾಸು ಬಂಡವಾಳದ ಪ್ರಭಾವ ಹೆಚ್ಚುತ್ತಲೇ ಬರುತ್ತಿದೆ. ಆರ್‌ಬಿಐ ಸತತವಾಗಿ ಆಳುವ ವರ್ಗಗಳ ಹಿತದಲ್ಲಿ ಕಾರ್ಯನಿರ್ವಹಿಸುವ ಬಲವಂತಕ್ಕೆ ಒಳಗಾಗಿದೆ. ಆರ್‌ಎಸ್‌ಎಸ್–ಬಿಜೆಪಿ ನೇತೃತ್ವದ ಆಳ್ವಿಕೆಯ ದಿಕ್ಕನ್ನು ಗಮನಿಸಿದರೆ ಈ ಹೆಚ್ಚಿನ ಮಿಗುತೆ ವರ್ಗಾವಣೆಯಿಂದ ಪ್ರಯೋಜನ ದಕ್ಕುವುದು ಕೆಲವೇ ದೊಡ್ಡ ಉದ್ಯಮಿಗಳ ಕೂಟಗಳಿಗೇ. ಇದರ ಬದಲಿಗೆ ಆರ್‌ಬಿಐ ಮಿಗುತೆಯ ಒಂದು ಗಮನಾರ್ಹ ಭಾಗವನ್ನು ಕೃಷಿಯನ್ನು ಪುನರುಜ್ಜೀವನಗೊಳಿಸಲು ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ (ನಬಾರ್ಡ್)ಗೆ ವರ್ಗಾಯಿಸಬೇಕು ಎಂಬ ಅಖಿಲ ಭಾರತ ನಬಾರ್ಡ್ ನೌಕರರ ಸಂಘ (ಎಐಎನ್‌ಬಿಇಎ) ಎತ್ತಿದ ಬೇಡಿಕೆಯನ್ನು ಒಪ್ಪಲು ಆರ್‌ಬಿಐ ಮತ್ತು ಕೇಂದ್ರ ಸರ್ಕಾರ ನಿರಾಕರಿಸಿದ ರೀತಿಯಿಂದಲೇ ಸ್ಪಷ್ಟವಾಗಿದೆ ಎಂದು ಎಐಕೆಎಸ್ ಹೇಳಿದೆ.

ನಬಾರ್ಡ್ ಕಾಯ್ದೆ ಮತ್ತು ಆರ್‌ಬಿಐ ಕಾಯ್ದೆಯಲ್ಲಿನ ನಿಬಂಧನೆಗಳನ್ನು ಬಳಸಿಕೊಂಡು ಮಿಗುತೆ ಹಣವನ್ನು ನಬಾರ್ಡ್‌ಗೆ ವರ್ಗಾಯಿಸುವ ಮೂಲಕ, ಸಹಕಾರಿ ಸಂಸ್ಥೆಗಳು ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ (ಆರ್‌ಆರ್‌ಬಿ) ಮೂಲಕ ರೈತರು ಮತ್ತು ಕೃಷಿ ಕಾರ್ಮಿಕರಂತಹ ಸಾಲಗಾರರಿಗೆ ಬಡ್ಡಿದರಗಳನ್ನು ಕಡಿಮೆ ಮಾಡಬಹುದಿತ್ತು ಎಂದು ಎಐಎನ್‌ಬಿಇಎ ವಾದಿಸಿತ್ತು. ಇದು ಕೃಷಿ ಬಿಕ್ಕಟ್ಟಿನಿಂದ ಧ್ವಸ್ತಗೊಂಡಿರುವ ರೈತರಿಗೆ ಗಣನೀಯ ಸಹಾಯವನ್ನು ಒದಗಿಸುತ್ತಿತ್ತು. ಸರ್ಕಾರದ ದತ್ತಾಂಶದ ಪ್ರಕಾರ ಭಾರತದಲ್ಲಿ ಪ್ರತಿದಿನ 31 ರೈತರು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. 2014 ರಿಂದ ಮೋದಿ ಆಡಳಿತದಲ್ಲಿ 16 ಲಕ್ಷ ಕೋಟಿ ರೂ.ಗಳಿಗೂ ಹೆಚ್ಚು ಕಾರ್ಪೊರೇಟ್ ಸಾಲ ಮನ್ನಾ ಮಾಡಿರುವುದು ಮೋದಿ–ಕಾರ್ಪೊರೇಟ್ ಪ್ರೇಮಕಥೆಯ ಆಳವನ್ನು ಸೂಚಿಸುತ್ತದೆ. ಆದಾಗ್ಯೂ, ಈ ಅವಧಿಯಲ್ಲಿ ಮೋದಿ ಸರ್ಕಾರ ರೈತರು ಮತ್ತು ಕೃಷಿ ಕಾರ್ಮಿಕರ ಸಾಲದ ಒಂದು ರೂಪಾಯಿ ಕೂಡ ಮನ್ನಾ ಮಾಡಲಿಲ್ಲ.

ಕೇಂದ್ರ ಬಜೆಟ್ 2025–26ರಲ್ಲಿ ನಗದು ಕೊರತೆಯಿರುವ ಮನರೇಗಕ್ಕೆ ಕೇವಲ ರೂ. 86,000 ಕೋಟಿ ಹಂಚಿಕೆ ಮಾಡಿದೆ. ಕೋಟ್ಯಂತರ ಗ್ರಾಮೀಣ ಬಡವರಿಗೆ ಜೀವನಾಡಿಯಾಗಿರುವ ಈ ಯೋಜನೆ 100 ದಿನಗಳ ಕೆಲಸದ ಖಾತ್ರಿ ಒದಗಿಸಿದರೂ, ಈಗ ಕೇವಲ ಸರಾಸರಿ ರೂ. 300 ದಿನಗೂಲಿಯಲ್ಲಿ 45 ದಿನಗಳ ಕೆಲಸವನ್ನು ಒದಗಿಸುತ್ತಿದೆ ಎಂದು ಗಮನಿಸುತ್ತ ಎಐಕೆಎಸ್, ಆರ್‌ಬಿಐ ಮಿಗುತೆಯ ಗಣನೀಯ ಭಾಗವನ್ನು ಇದಕ್ಕೆ ವರ್ಗಾಯಿಸಿದ್ದರೆ ಕೃಷಿ ಕಾರ್ಮಿಕರು, ಸಣ್ಣ ಮತ್ತು ಮಧ್ಯಮ ರೈತರು ಮತ್ತು ಗ್ರಾಮೀಣ ಕಾರ್ಮಿಕರ ಸಂಘಟನೆಗಳ ಬೇಡಿಕೆಯಂತೆ ಗ್ರಾಮೀಣ ಬಡವರಿಗೆ 600 ರೂ. ದಿನಗೂಲಿ ಮತ್ತು 200 ಕೆಲಸದ ದಿನಗಳನ್ನು ಒದಗಿಸಬಹುದಿತ್ತು ಎಂದು ಹೇಳಿದೆ. ಇದು ದುಡಿಯುವ ಜನರ ಖರೀದಿ ಶಕ್ತಿಯನ್ನು ಹೆಚ್ಚಿಸುತ್ತಿತ್ತು ಮತ್ತು ಎಲ್ಲಾ ವಲಯಗಳಲ್ಲಿ ಆರ್ಥಿಕ ಅಭಿವೃದ್ಧಿಗೆ ಸಹಾಯ ಮಾಡುತ್ತಿತ್ತು. ಮನರೇಗಕ್ಕೆ ಸಾಕಷ್ಟು ಹಣವನ್ನು ಒದಗಿಸುವುದು ಮತ್ತು ಅದನ್ನು ಕೃಷಿಯೊಂದಿಗೆ ಜೋಡಿಸುವುದು ಕೃಷಿ ಬಿಕ್ಕಟ್ಟನ್ನು ಪರಿಹರಿಸುವಲ್ಲಿ ನಿರ್ಣಾಯಕವಾಗಿದೆ ಎಂದು ಎಐಕೆಎಸ್ ಅಭಿಪ್ರಾಯಪಟ್ಟಿದೆ.

ಜುಲೈ 9ರ ಅಖಿಲ ಭಾರತ ಸಾರ್ವತ್ರಿಕ ಮುಷ್ಕರದ ರೈತ–ಕಾರ್ಮಿಕ ಜಂಟಿ ಕಾರ್ಯಾಚರಣೆಯ ಭಾಗವಾಗಿ, ಸಾಮ್ರಾಜ್ಯಶಾಹಿ ಮತ್ತು ಕೇಂದ್ರ ಸರ್ಕಾರದ ದೊಡ್ಡ ಬಂಡವಾಳಿಗ ಪರ ನೀತಿಗಳ ವಿರುದ್ಧದ ಹೋರಾಟವನ್ನು ತೀವ್ರಗೊಳಿಸುವಂತೆ ಮತ್ತು ಈ ಬಗ್ಗೆ ದುಡಿಯುವ ಜನರಲ್ಲಿ ಸಾಧ್ಯವಾದಷ್ಟು ವ್ಯಾಪಕವಾದ ಅಭಿಯಾನವನ್ನು ಕೈಗೊಳ್ಳುವಂತೆ ಎಐಕೆಎಸ್ ರೈತರು ಮತ್ತು ಎಲ್ಲಾ ದುಡಿಯುವ ಜನರಿಗೆ ಮನವಿ ಮಾಡಿದೆ.

ಧರ್ಮದ ಆಧಾರದ ಮೇಲೆ ಗುರುತಿಸಬೇಡಿ

*** ಅಕ್ರಮ ವಲಸಿಗರ ಕುರಿತು ಸಿಪಿಎಂ ಪೊಲಿಟ್ ಬ್ಯೂರೋ * ಅಕ್ರಮವಾಗಿ ಪ್ರವೇಶಿಸಿದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು**

ನವದೆಹಲಿ: ಧರ್ಮದ ಆಧಾರದ ಮೇಲೆ ಅಕ್ರಮ ವಲಸಿಗರನ್ನು ಗುರುತಿಸಬಾರದು ಮತ್ತು ದೇಶಕ್ಕೆ ಅಕ್ರಮವಾಗಿ ಪ್ರವೇಶಿಸಿದ ಎಲ್ಲರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಸಿಪಿಎಂ ಪೊಲಿಟ್ ಬ್ಯೂರೋ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ. ಈ ಕುರಿತು ಮೇ 31ರಂದು ಹೇಳಿಕೆ ಬಿಡುಗಡೆ ಮಾಡಿದೆ. ಶಂಕಿತ ಬಾಂಗ್ಲಾದೇಶಿ ನಾಗರಿಕರನ್ನು ದೇಶದಿಂದ ಗಡೀಪಾರು ಮಾಡುವ ಕೇಂದ್ರದ ನಿರ್ಧಾರವು ಅಮಾನವೀಯವಾಗಿದೆ ಎಂದು ಪೊಲಿಟ್ ಬ್ಯೂರೋ ತನ್ನ ಆಕ್ರೋಶವನ್ನು ವ್ಯಕ್ತಪಡಿಸಿದೆ. ಪಹಲ್ಗಾಮ್ ಭಯೋತ್ಪಾದಕ ದಾಳಿಯ ನಂತರ, ಬಿಜೆಪಿ ನೇತೃತ್ವದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿಶೇಷವಾಗಿ ಬಂಗಾಳಿ ಮಾತನಾಡುವ ಮುಸ್ಲಿಮರನ್ನು ಗುರಿಯಾಗಿಸಿಕೊಂಡಿವೆ ಮತ್ತು ಯಾವುದೇ ಪರಿಶೀಲನೆ ಇಲ್ಲದೆ ಅವರನ್ನು ಬಾಂಗ್ಲಾದೇಶಕ್ಕೆ ತಳ್ಳಿವೆ ಎಂದು ಅದು ಹೇಳಿದೆ. ಕೆಲವು ಭಾರತೀಯ ನಾಗರಿಕರನ್ನು ಸಹ ಬಂಧಿಸಿ ಬಾಂಗ್ಲಾದೇಶಕ್ಕೆ ಕಳುಹಿಸಲಾಗಿದೆ ಎಂಬ ವರದಿಗಳು ಬಂದಿವೆ ಎಂದು ಅದು ಹೇಳಿದೆ. ಅಸ್ಸಾಂ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಮುಂದೆ ಕೆಲವು ಪ್ರಕರಣಗಳಲ್ಲಿ ಮೇಲ್ಮನವಿಗಳು ಇನ್ನೂ ಬಾಕಿ ಇವೆ. ಆದಾಗ್ಯೂ, ಅವರನ್ನು ಬಲವಂತವಾಗಿ ದೇಶದಿಂದ ಹೊರಗೆ ಕಳುಹಿಸಲಾಗಿದೆ, ಇದನ್ನು ಅನುಮತಿಸಬಾರದು ಎಂದು ಪೊಲಿಟ್ ಬ್ಯೂರೋ ಹೇಳಿಕೆಯಲ್ಲಿ ತಿಳಿಸಿದೆ.

ಅಕ್ರಮ ಮಾರ್ಗಗಳ ಮೂಲಕ ದೇಶವನ್ನು ಪ್ರವೇಶಿಸಿದವರಿಗೆ ನ್ಯಾಯಯುತ ವಿಚಾರಣೆ ನೀಡಬೇಕು ಮತ್ತು ಯಾವುದೇ ದುರುದ್ದೇಶಪೂರಿತ ಉದ್ದೇಶವಿಲ್ಲದೆ ದೇಶವನ್ನು ಪ್ರವೇಶಿಸುವ ಬಡ ಮತ್ತು ದಾಖಲೆರಹಿತ ವಲಸಿಗರನ್ನು ಗೌರವದಿಂದ ನಡೆಸಿಕೊಳ್ಳಬೇಕು ಮತ್ತು ಕಾನೂನಿನ ಪ್ರಕಾರ ನಡೆಸಿಕೊಳ್ಳಬೇಕು ಎಂದು ಅದು ಹೇಳಿದೆ. ಈ ಹೇಳಿಕೆಯಲ್ಲಿ, ಅಸ್ಸಾಂನಲ್ಲಿ ಬಿಜೆಪಿ ಸರ್ಕಾರವು ದೂರದ ಪ್ರದೇಶಗಳಲ್ಲಿ ವಾಸಿಸುವ ಸ್ಥಳೀಯ ಜನರಿಗೆ ಶಸ್ತ್ರಾಸ್ತ್ರ ಪರವಾನಗಿಗಳನ್ನು ನೀಡಲು ಇತ್ತೀಚೆಗೆ ಅನುಮೋದಿಸಿದ ನೀತಿಯನ್ನು ಪೊಲಿಟ್ ಬ್ಯುರೊ ಟೀಕಿಸಿದೆ. ಇದು ತುಂಬಾ ಅಪಾಯಕಾರಿ ನಿರ್ಧಾರವಾಗಿದ್ದು, ಇದರ ಪರಿಣಾಮಗಳು ತುಂಬಾ ಗಂಭೀರವಾಗಿರುತ್ತವೆ ಎಂದು ಅದು ಹೇಳಿದೆ. ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವುದು ಮತ್ತು ಒಳನುಸುಳುವಿಕೆಯನ್ನು ತಡೆಯುವುದು ಕೇಂದ್ರ ಸರ್ಕಾರದ ಕರ್ತವ್ಯವಾಗಿದೆ ಮತ್ತು ಅದನ್ನು ಬದಿಗಿಟ್ಟು ಧರ್ಮದ ಆಧಾರದ ಮೇಲೆ ಆಯ್ಕೆಯಾದವರಿಗೆ ಶಸ್ತ್ರಾಸ್ತ್ರಗಳನ್ನು ಒದಗಿಸುವುದು ಪರಿಹಾರವಲ್ಲ ಎಂದು ಪೊಲಿಟ್ ಬ್ಯುರೊ ತನ್ನ ಹೇಳಿಕೆಯಲ್ಲಿ ಸ್ಪಷ್ಟಪಡಿಸಿದೆ.

➘ 18 ರಿಂದ 40 ವರ್ಷ ವಯಸ್ಸಿನವರು ಮಾತ್ರ ಈ ಯೋಜನೆಗೆ ಸೇರಬಹುದು. ಈ ಪಿಂಚಣಿ ಯೋಜನೆಗೆ ಕಾರ್ಮಿಕರು ಸರಕಾರಕ್ಕೆ ಮಾಸಿಕ 55ರಿಂದ 200 ರೂ.ವರೆಗೂ ತುಂಬಬೇಕು. 60 ವಯಸ್ಸಿನ ನಂತರ ತಿಂಗಳಿಗೆ 3000 ರೂಪಾಯಿ ಪಿಂಚಣಿ ಸಿಗುತ್ತದೆ. ಈಗ 40 ವರ್ಷ ವಯಸ್ಸಿನ ಕಾರ್ಮಿಕರು ಯೋಜನೆಗೆ ಸೇರಿದರೆ, ಮುಂದಿನ 20 ವರ್ಷಗಳವರೆಗೆ ಸರ್ಕಾರಕ್ಕೆ ತಿಂಗಳಿಗೆ 200 ರೂ.ಗಳನ್ನು ಪಾವತಿಸುತ್ತಾರೆ ಮತ್ತು 20 ವರ್ಷಗಳ ನಂತರ ಅವರಿಗೆ ತಿಂಗಳಿಗೆ 3,000 ರೂ. ಮಾತ್ರ ಪಿಂಚಣಿ ಸಿಗುತ್ತದೆ. ಆಗ 3 ಸಾವಿರದ ನಿಜವಾದ ಮೌಲ್ಯ ತೀವ್ರವಾಗಿ ಕುಗ್ಗಿರುತ್ತದೆ.

ಕನಿಷ್ಟ ವೇತನ ರೂ.36,000

1957ರಲ್ಲಿ ನಡೆದ ಭಾರತೀಯ ಕಾರ್ಮಿಕ ಸಮ್ಮೇಳನವು ಕಾರ್ಮಿಕರ ಅಗತ್ಯತೆಗಳ ಆಧಾರದ ಮೇಲೆ ಕನಿಷ್ಟ ವೇತನವನ್ನು ನೀಡಬೇಕೆಂದು ನಿರ್ಧರಿಸಿತು. ಇಂದಿನ ಬೆಲೆಗಳ ಪ್ರಕಾರ, 1957ರ ಸಮ್ಮೇಳನವು ನಿರ್ಧರಿಸಿದ ಅವಶ್ಯಕತೆಯ ಆಧಾರದ ಮೇಲೆ ಕನಿಷ್ಠ ವೇತನ 36 ಸಾವಿರ ರೂಪಾಯಿಗಳನ್ನು ನಿಗದಿಮಾಡಬೇಕು. ಅದು ಎಲ್ಲರಿಗೂ ಸಿಗುವಂತೆ ನೋಡಿಕೊಳ್ಳಬೇಕು. ಅಂತಹ ಪ್ರಮುಖ ಬೇಡಿಕೆಗಳನ್ನು ಒತ್ತಿಹೇಳುವುದು, ಕೇಂದ್ರ ಸರ್ಕಾರದ ಕಾರ್ಮಿಕ ಮತ್ತು ಜನವಿರೋಧಿ ನೀತಿಗಳನ್ನು ಸೋಲಿಸಲು, ಜಾತಿ, ಧರ್ಮ, ಜನಾಂಗ ಮತ್ತು ಭಾಷೆಯ ಭೇದವಿಲ್ಲದೆ ಕರ್ನಾಟಕದ ಕಾರ್ಮಿಕ ವರ್ಗವನ್ನು ಒಗ್ಗೂಡಿಸಲು, ಪ್ರಬಲ ವರ್ಗ ಹೋರಾಟಗಳನ್ನು ಮುಂದಕ್ಕೆ ಕೊಂಡೊಯ್ಯಲು, ಮತೀಯ ರಾಜಕಾರಣಕ್ಕೆ ಅಂತ್ಯ ಹಾಡಲು ಮೇ 30 ರಂದು ಸಿಐಟಿಯುನ 55ನೇ ಸಂಸ್ಥಾಪನಾ ದಿನದ ಆಚರಣೆಯ ಈ ಸಂದರ್ಭದಲ್ಲಿ ಪಣತೊಡೋಣ.

ರಾಜ್ಯದ ಕಾರ್ಮಿಕರ ಹಕ್ಕೊತ್ತಾಯಗಳು

29 ಕಾನೂನುಗಳನ್ನು 4 ಸಂಹಿತೆಗಳನ್ನಾಗಿ ಮಾಡಿರುವ ಕೇಂದ್ರದ ಶಾಸನಗಳ ನಿಯಮಾವಳಿಗಳನ್ನು ರಾಜ್ಯ ಸರ್ಕಾರ ಜಾರಿ ಮಾಡಬಾರದು. ಕಾರ್ಮಿಕರ ಪರವಾದ ಕಾನೂನುಗಳನ್ನು ಜಾರಿಗೆ ತರಬೇಕು. ವಿದ್ಯುಚ್ಛಕ್ತಿ ಖಾಸಗೀಕರಣ ಕೈಬಿಟ್ಟು, ವಿದ್ಯುತ್ ತಿದ್ದುಪಡಿ ಮಸೂದೆ 2020ನ್ನು ತಿರಸ್ಕರಿಸಬೇಕು. ಬೆಲೆ ಏರಿಕೆ ಆಧಾರದಲ್ಲಿನ ತುಟ್ಟಿಭತ್ಯೆಯೊಂದಿಗೆ ಎಲ್ಲಾ ವಿಭಾಗಗಳ ಕಾರ್ಮಿಕರಿಗೂ ಸಮಾನ ಕನಿಷ್ಠ ವೇತನ ರೂ.36 ಸಾವಿರ ಜಾರಿಗೊಳಿಸಬೇಕೆಂದು.

ಬೀಡಿ ಕಾರ್ಮಿಕರ ಎಲ್ಲಾ ಕಲ್ಯಾಣ ಯೋಜನೆಗಳನ್ನು ಜಾರಿಗೆ ತರಬೇಕು. ರಾಜ್ಯ ಸರ್ಕಾರ ಕೇರಳ ಮಾದರಿಯಲ್ಲಿ ಕಲ್ಯಾಣ ಕಾರ್ಯಕ್ರಮ ಜಾರಿ ಮಾಡಬೇಕು. ತೋಟ ಕಾರ್ಮಿಕರ ಕಾಯ್ದೆಯನ್ನು ಉಳಿಸಿ ಪ್ಲಾಂಟೇಶನ್ ಕಾರ್ಮಿಕರಿಗೆ ಪ್ರತ್ಯೇಕ ಕಲ್ಯಾಣ ಮಂಡಳಿ ಸ್ಥಾಪಿಸಿ ಮನೆ, ಶಿಕ್ಷಣ, ಆರೋಗ್ಯ, ಸವಲತ್ತುಗಳನ್ನು ಜಾರಿ ಮಾಡಬೇಕು. ಅಂತರ ರಾಜ್ಯ ವಲಸೆ ಕಾರ್ಮಿಕರ ಕಲ್ಯಾಣ ಮಂಡಳಿ ರಚಿಸಿ, ಯೋಜನೆ ರೂಪಿಸಿ ವಸತಿ ಆರೋಗ್ಯ, ಶಿಕ್ಷಣ ಒದಗಿಸಬೇಕು. ಜೀವವಿಮಾ ಪ್ರತಿನಿಧಿಗಳನ್ನು ಕೇರಳದ ಮಾದರಿಯಲ್ಲಿ ರಾಜ್ಯ ಸರ್ಕಾರದ ಅಸಂಘಟಿತ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ಸೇರ್ಪಡೆ ಮಾಡಬೇಕು.

ಕನಿಷ್ಟ ವೇತನ ಸಲಹಾ ಮಂಡಳಿ, ಕಾರ್ಮಿಕರ ಕಲ್ಯಾಣ ಮಂಡಳಿ, ಕಟ್ಟಡ ಹಾಗು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಅಸಂಘಟಿತ ಕಾರ್ಮಿಕರ ಕಲ್ಯಾಣ ಮೊದಲಾದ ತ್ರಿಪಕ್ಷೀಯ ಮಂಡಳಿ/ಸಮಿತಿಗಳಲ್ಲಿ ಸಿಐಟಿಯು ಪ್ರತಿನಿಧಿಗಳನ್ನು ಸೇರ್ಪಡೆ ಮಾಡಬೇಕು. ರಾಜ್ಯದಲ್ಲಿ ಕಾರ್ಖಾನೆ ಕಾಯ್ದೆಗೆ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ, ಕೈಗಾರಿಕಾ ನಿಶ್ಚಿತ ಕಾಲಾವಧಿ ಕಾರ್ಮಿಕರ ನೇಮಕದ ಮಾದರಿ ಸ್ಥಾಯಿ ಆದೇಶಗಳಿಗೆ ಮಾಡಲಾಗಿರುವ ಕಾರ್ಮಿಕ ವಿರೋಧಿ ತಿದ್ದುಪಡಿಗಳನ್ನು ವಾಪಸ್ಸು ಪಡೆಯಬೇಕು.

ಸಂಘಟಿತ ಕಾರ್ಮಿಕರು ಹಾಗೂ ಅಸಂಘಟಿತ ವಲಯದಲ್ಲಿ ದುಡಿಯುತ್ತಿರುವ ಕಟ್ಟಡ ನಿರ್ಮಾಣ ಕಾರ್ಮಿಕರು, ಆಟೋ, ಟ್ಯಾಕ್ಸಿ, ಮನೆಗೆಲಸ, ಹಮಾಲಿ, ಬೀದಿಬದಿ ಹಾಗೂ ಉದ್ಯೋಗ ಖಾತ್ರಿ ಯೋಜನೆಗಳಲ್ಲಿ ದುಡಿಯುತ್ತಿರುವ ಲಕ್ಷಾಂತರ ಶ್ರಮಜೀವಿಗಳು ಹಾಗೂ ಖಾಸಗಿ ಮತ್ತು ಸರ್ಕಾರದ ಮುನ್ಸಿಪಾಲಿಟಿ, ಗ್ರಾಮ ಪಂಚಾಯ್ತಿಗಳಲ್ಲಿ ದುಡಿಯುತ್ತಿರುವ ನೌಕರರು ಸೇರಿ ವಿವಿಧ ಇಲಾಖೆಗಳಲ್ಲಿ ಗುತ್ತಿಗೆ, ಹೊರಗುತ್ತಿಗೆ, ಮತ್ತು ವಿವಿಧ ಸ್ಕೀಂಗಳಲ್ಲಿ ಕೆಲಸ ಮಾಡುವ ಅಂಗನವಾಡಿ, ಬಿಸಿಯೂಟ, ಆಶಾ ಮೊದಲಾದ ಕಾರ್ಮಿಕರ ಬೇಡಿಕೆಗಳನ್ನು ಪರಿಗಣಿಸಬೇಕು. ಸಿಐಟಿಯುನ 55ನೇ ವಾರ್ಷಿಕೋತ್ಸವದ ಸಂಭ್ರಮದ ಈ ಸಂದರ್ಭದಲ್ಲಿ, ಈ ಎಲ್ಲಾ ಬೇಡಿಕೆಗಳನ್ನು ಇಟ್ಟು ಇದೇ ಜುಲೈ 9ರಂದು ನಡೆಯುವ ಅಖಿಲ ಭಾರತ ಸಾರ್ವತ್ರಿಕ ಮುಷ್ಕರವನ್ನು ಯಶಸ್ವಿಗೊಳಿಸಲು ಕಾರ್ಮಿಕರು ಪಣ ತೊಟ್ಟಿದ್ದಾರೆ.

–ಸಿಬಿ

ಜನತಾ ಪ್ರತಿರೋಧ ಗೆರಿಲ್ಲಾ ಸೈನ್ಯಗಳ ಪಾತ್ರ

ಫ್ಯಾಸಿಸಂ ವಿರುದ್ಧ ವಿಜಯದ 80ನೇ ವಾರ್ಷಿಕೋತ್ಸವ

ಫ್ಯಾಸಿಸಂ ವಿರುದ್ಧ ವಿಜಯದ 80ನೇ ವಾರ್ಷಿಕೋತ್ಸವವನ್ನು ಇತ್ತೀಚೆಗೆ (ಮೇ8–9) ಜಗತ್ತಿನಾದ್ಯಂತ ಸಂಭ್ರಮದಿಂದ ಆಚರಿಸಲಾಯಿತು. ಈಗಲೂ ಈ ಸಂಭ್ರಮಾಚರಣೆ ಏಕೆ? ಫ್ಯಾಸಿಸಂ ಅನ್ನು ಏಕೆ ವಿರೋಧಿಸಬೇಕು? ಫ್ಯಾಸಿಸಂ ವಿರುದ್ಧ ವಿಜಯದಲ್ಲಿ ವಿವಿಧ ದೇಶಗಳ ಸರಕಾರಗಳ, ರಾಜಕೀಯ ಶಕ್ತಿಗಳ ಪಾತ್ರವೇನಿತ್ತು? ಎರಡನೆಯ ಮಹಾಯುದ್ಧ ಏಕೆ ಫ್ಯಾಸಿಸಂ ಜತೆಗೆ ತಳುಕು ಹಾಕಿಕೊಂಡಿದೆ? ಫ್ಯಾಸಿಸಂ ವಿರುದ್ಧ ವಿಜಯದಲ್ಲಿ ಮಿತ್ರಕೂಟದ ಸೈನ್ಯಗಳ ಪಾತ್ರವೇನಿತ್ತು? ಯುರೋಪಿಯನ್ ಜನತಾ ಪ್ರತಿರೋಧ ಗೆರಿಲ್ಲಾ ಸೈನ್ಯದ ಪಾತ್ರವೇನಿತ್ತು? ಆಗಿನ ಫ್ಯಾಸಿಸಂ ವಿರುದ್ಧ ಮಿತ್ರಕೂಟದ ಪಾಶ್ಚಿಮಾತ್ಯ ದೇಶಗಳು ಮತ್ತು ಮಾಜಿ ಸೋವಿಯೆಟ್ ದೇಶಗಳು ಬೇರೆ ಬೇರೆ ದಿನದಂದು ಬೇರೆ ಬೇರೆ ರೀತಿಯಲ್ಲಿ ಬೇರೆಯಾಗಿ ಏಕೆ ಆಚರಿಸುತ್ತಾರೆ? ಈ ಕುರಿತು ಏಳುವ ಕೆಲವು ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವುದು ಈ ಲೇಖನ ಸರಣಿಯ ಉದ್ದೇಶ. ಈ ಸರಣಿಯ ಭಾಗ–1ರಲ್ಲಿ ಮೊದಲ 3 ಪ್ರಶ್ನೆಗಳಿಗೆ ಉತ್ತರಿಸಲಾಗಿದೆ. ಭಾಗ–2ರಲ್ಲಿ ನಂತರದ 3 ಪ್ರಶ್ನೆಗಳಿಗೆ ಉತ್ತರ ಕೊಡಲಾಗಿದೆ. ಈ ಭಾಗ–3ರಲ್ಲಿ ಕೊನೆಯ 2 ಪ್ರಶ್ನೆಗಳಿಗೆ ಉತ್ತರಿಸಲಾಗಿದೆ.

ಭಾಗ 3

7. ಫ್ಯಾಸಿಸಂ ವಿರುದ್ಧ ಸಮರ ಮತ್ತು ಅದರ ವಿಜಯದಲ್ಲಿ ಯುರೋಪಿನ ರಾಷ್ಟ್ರೀಯ ಪ್ರತಿರೋಧ/ವಿಮೋಚನಾ ರಂಗಗಳ ಪಾತ್ರವೇನಿತ್ತು?

ಫ್ಯಾಸಿಸಂ ಬೆಳೆದ ಮತ್ತು ಆಕ್ರಮಣಕ್ಕೆ ತುತ್ತಾದ ಹೆಚ್ಚಿನ ದೇಶಗಳಲ್ಲಿ ಫ್ಯಾಸಿಸ್ಟ್–ವಿರೋಧಿ ಶಕ್ತಿಗಳು ಎರಡನೇ ಮಹಾಯುದ್ಧದ ಅವಧಿಯಲ್ಲಿ ಫ್ಯಾಸಿಸ್ಟ್ ಸರಕಾರಕ್ಕೆ ಮತ್ತು ಅದರ ಯುದ್ಧಕ್ಕೆ ಪ್ರತಿರೋಧವೊಡ್ಡಲು "ರಾಷ್ಟ್ರೀಯ ವಿಮೋಚನಾ ರಂಗ" ರಚಿಸಿದವು. ಈ ರಂಗಗಳು (ಫ್ರಾನ್ಸ್ ಮತ್ತು ಇಟಲಿಯಲ್ಲಿ ಇದ್ದಂತೆ) ಸೈನ್ಯದ ಒಂದು ವಿಭಾಗದ ಜತೆ ಸೇರಿ ಮಿತ್ರ ಮತ್ತು ತಟಸ್ಥ ವಿದೇಶಗಳಿಂದ ಕೆಲಸ ಮಾಡುವ ವಿಮೋಚನಾ ಸೈನ್ಯವನ್ನೇ ಕಟ್ಟಿದವು. ಇದಲ್ಲದೆ ದೇಶದೊಳಗೆ ಪ್ರತಿರೋಧ ಒಡ್ಡುವ ಗೆರಿಲ್ಲಾ ಮತ್ತು ಗುಪ್ತ ದಳಗಳನ್ನು ರಚಿಸಿದವು. ಫ್ಯಾಸಿಸ್ಟ್ ಸರಕಾರದ ವಿರುದ್ಧ ಬುಡಮೇಲು ಕೃತ್ಯ, ಮಿಲಿಟರಿ ಸ್ಥಾವರಗಳ ಮೇಲೆ ಆಕಸ್ಮಿಕ ದಾಳಿಗಳು, ಗೆರಿಲ್ಲಾ ಯುದ್ಧ, ವಿಮೋಚಿತ ಪ್ರದೇಶಗಳ ನೆಲೆಗಳ ಸ್ಥಾಪನೆ, ಸಾಮೂಹಿಕ ಪ್ರತಿಭಟನಾ ಕಾರ್ಯಾಚರಣೆಗಳು ಇತ್ಯಾದಿಗಳನ್ನು ಸಂಘಟಿಸಿದವು. ಹಲವು ಕಡೆ ನಾಜಿ ಬೇಟೆ ದಮನಕ್ಕೆ ಒಳಗಾಗಿದ್ದ 'ಜ್ಯೂ'ಗಳನ್ನು ರಕ್ಷಿಸುವುದರಲ್ಲಿ, ಸುರಕ್ಷಿತ ದೇಶಗಳಿಗೆ ಓಡಿ ಹೋಗಲು, ಯಾತನಾ ಶಿಬಿರಗಳಿಂದ ಬಿಡುಗಡೆ ಇತ್ಯಾಧಿಗಳಲ್ಲೂ ಈ ಗುಪ್ತದಳಗಳು ತೊಡಗಿದ್ದವು. ಇದರ ನಾಯಕತ್ವ ಮತ್ತು ಕಾರ್ಯಕರ್ತರು ಪ್ರಮುಖವಾಗಿ ಕಮ್ಯುನಿಸ್ಟ್, ಸೋಶಲಿಸ್ಟ್ ಮತ್ತು ಇತರ ದೇಶಪ್ರೇಮಿ ಪಕ್ಷಗಳಿಗೆ ಸೇರಿದವರು ಮತ್ತು ಕೆಲ ಬಿಡಿ ವ್ಯಕ್ತಿಗಳಾಗಿದ್ದರು. 1935ರಲ್ಲಿ ಕಮ್ಯುನಿಸ್ಟ್ ಅಂತರರಾಷ್ಟ್ರೀಯ 'ವಿಶ್ವ ಫ್ಯಾಸಿಸ್ಟ್ ರಂಗ' ಕಟ್ಟುವ ಕರೆಯ ಮೇರೆಗೆ ಎಲ್ಲೆಡೆ ಕಮ್ಯುನಿಸ್ಟ್ ಪಕ್ಷಗಳೂ ಮುಂಚೂಣಿಯಲ್ಲಿದ್ದವು. ಮುಂದೆ ಬ್ರಿಟಿಷ್–ಅಮೆರಿಕನ್ ಅಥವಾ ಸೋವಿಯೆಟ್ ಪಡೆಗಳು ಮುನ್ನಡೆ ಸಾಧಿಸಿದಾಗ ಅವುಗಳಿಗೆ ಸ್ಥಳೀಯ ಬೆಂಬಲ ಕೊಡುವುದಲ್ಲದೆ, ಜತೆಗೆ ಸೇರಿ ಕಾಳಗದಲ್ಲೂ


ಫ್ರೆಂಚ್ ಪ್ರತಿರೋಧದ ಸೈನಿಕರು ಪ್ಯಾರೀಸಿನಲ್ಲಿ ಜನವರಿ 1944

ಭಾಗವಹಿಸಿದವು.

ಫ್ರಾನ್ಸ್ ಅನ್ನು ಜರ್ಮನಿ ವಶಪಡಿಸಿಕೊಳ್ಳುತ್ತಿದ್ದಂತೆ 8,000 ಕಮ್ಯುನಿಸ್ಟರು ಸೇರಿದಂತೆ ಸಾವಿರಾರು ವಿರೋಧಿ ರಾಜಕೀಯ ಕಾರ್ಯಕರ್ತರನ್ನು ಬಂಧಿಸಲಾಯಿತು. ಆದರೂ ಧೃತಿಗೆಡದೆ ಜುಲೈ 1941ರ ಹೊತ್ತಿಗೆ 'ರಾಷ್ಟ್ರೀಯ ಪ್ರತಿರೋಧ ರಂಗ' ಮತ್ತು ಅದರಡಿಯಲ್ಲಿ ಗುಪ್ತ 'ಜನತಾ ಪ್ರತಿರೋಧ ಸಮಿತಿ'ಗಳು ಮತ್ತು 'ಸಶಸ್ತ್ರ ಹೋರಾಟಗಾರರ ಲಘು ದಳ'ಗಳನ್ನು ರಚಿಸಲಾಯಿತು. 1943ರ ಹೊತ್ತಿಗೆ 5 ಲಕ್ಷಕ್ಕೂ ಹೆಚ್ಚು ಸಶಸ್ತ್ರ ಹೋರಾಟಗಾರರಿದ್ದರು. ಎಪ್ರಿಲ್ 1943ರಲ್ಲಿ ದೇಶವ್ಯಾಪಿ ಸಶಸ್ತ್ರ ಬಂಡಾಯಕ್ಕೆ ಕರೆ ನೀಡಲಾಯಿತು. 1944ರ ಹೊತ್ತಿಗೆ 40 ಪ್ರದೇಶಗಳಲ್ಲಿ ಸಶಸ್ತ್ರ ಕಾರ್ಯಾಚರಣೆಗಳು ನಡೆದವು. ಜೂನ್ 1944ರಲ್ಲಿ ಅಮೆರಿಕ ಪಡೆಗಳು ಫ್ರಾನ್ಸ್‌ನ ಕರಾವಳಿಯಲ್ಲಿ ಇಳಿದ ನಂತರ ಎರಡೇ ತಿಂಗಳಲ್ಲಿ (ಅಗಸ್ಟ್‌ನಲ್ಲಿ) ನಾಜಿ ಪಡೆಗಳನ್ನು ಸೋಲಿಸಿ, ಪ್ಯಾರಿಸ್ ವಿಮೋಚನೆ ಮಾಡುವುದರಲ್ಲಿ ಈ ಗೆರಿಲ್ಲಾ ಪಡೆಗಳ ಪಾತ್ರ ಮಹತ್ವದ್ದಾಗಿತ್ತು. ಫ್ರಾನ್ಸ್‌ನಲ್ಲಿ 75 ಸಾವಿರ ಕಮ್ಯುನಿಸ್ಟರು ಸಶಸ್ತ್ರ ಕಾರ್ಯಾಚರಣೆಯಲ್ಲಿ


ಗಾರಿಬಾಲ್ಡಿ ಬ್ರಿಗೇಡ್ ನ ಹೋರಾಟಗಾರರು ಇಟಲಿಯ ಪಾವಿಯ ಬಳಿ

ಮಡಿದರು ಎಂಬುದರಿಂದ ಅವರ ಪಾತ್ರದ ಮಹತ್ವ ತಿಳಿಯುತ್ತದೆ.

ಇದೇ ರೀತಿ ಫ್ಯಾಸಿಸ್ಟ್ ತಾಯ್ನಾಡು ಇಟಲಿಯಲ್ಲಿ ಸಹ ಸಶಸ್ತ್ರ 'ಗ್ಯಾರಿಬಾಲ್ಡಿ ಬ್ರಿಗೇಡ್' (ಗ್ಯಾರಿಬಾಲ್ಡಿ ಇಟಲಿಯ ಜನಪ್ರಿಯ ದೇಶಪ್ರೇಮಿ ಚಾರಿತ್ರಿಕ ನಾಯಕ) ಸ್ಥಾಪಿಸಲಾಯಿತು. 'ಗ್ಯಾರಿಬಾಲ್ಡಿ ಬ್ರಿಗೇಡ್' ಗಳಲ್ಲಿ ಒಟ್ಟು 3.5 ಲಕ್ಷ ಸಶಸ್ತ್ರ ಗೆರಿಲ್ಲಾ ಸೈನಿಕರಿದ್ದರು. ಇವರಲ್ಲಿ 2.1 ಲಕ್ಷ ಕಮ್ಯುನಿಸ್ಟರು. 1943ರಲ್ಲಿ 3 ಲಕ್ಷ ಮತ್ತು 1944ರಲ್ಲಿ 10 ಲಕ್ಷ ಕಾರ್ಮಿಕರ 8 ದಿನಗಳ ಮುಷ್ಕರವನ್ನು ಸಂಘಟಿಸಲಾಯಿತು. ಈಗಾಗಲೇ ಹೇಳಿದಂತೆ ಜುಲೈ 1943ರಲ್ಲಿ ದಕ್ಷಿಣ ಇಟಲಿಯಲ್ಲಿ ಬ್ರಿಟಿಶ್–ಅಮೆರಿಕನ್ ಪಡೆಗಳ ಆಗಮನ ಮತ್ತು ದೇಶದಾದ್ಯಂತ 'ಗ್ಯಾರಿಬಾಲ್ಡಿ ಬ್ರಿಗೇಡ್'ಗಳ ಕಾರ್ಯಾಚರಣೆ, ಕಾರ್ಮಿಕ ಸಾರ್ವತ್ರಿಕ ಮುಷ್ಕರಗಳಿಂದ ಮುಸೊಲಿನಿ ಸರಕಾರ ಬೀಳುತ್ತದೆ. ಆದರೆ ಜರ್ಮನ್ ಪಡೆಗಳು ಮತ್ತೆ ಆಕ್ರಮಿಸಿ, ಅಗಸ್ಟ್ 1944ರವರೆಗೆ ನಡೆದ ಅಂತಿಮ ಹೋರಾಟದಲ್ಲಿ 'ಗ್ಯಾರಿಬಾಲ್ಡಿ ಬ್ರಿಗೇಡ್' ಮಹತ್ವದ ಪಾತ್ರ ವಹಿಸುತ್ತದೆ. ಮುಸೊಲಿನಿಯನ್ನು ಮತ್ತೆ ಬಂಧಿಸಿ ಮರಣಡಂಡನೆ ಕೊಟ್ಟಿದ್ದು ಸಹ ಈ 'ಬ್ರಿಗೇಡ್'. ಬೆಲ್ಜಿಯಂನಲ್ಲಿ ಕಮ್ಯುನಿಸ್ಟ್ ಪಕ್ಷ 50 ಸಾವಿರಕ್ಕೂ ಹೆಚ್ಚು ಸಶಸ್ತ್ರ ಗೆರಿಲ್ಲಾ ಪಡೆಗಳ ಜೊತೆಗೆ ಪ್ರತಿರೋಧ ಒಡ್ಡಿದಲ್ಲದೆ, ಬ್ರಿಟಿಶ್–ಅಮೆರಿಕನ್ ಪಡೆಗಳ ಜತೆ ಅಂತಿಮ ವಿಮೋಚನೆಯಲ್ಲಿ ಮುಖ್ಯ ಪಾತ್ರ ವಹಿಸಿತು. ಗ್ರೀಸ್‌ನಲ್ಲೂ ಕಮ್ಯುನಿಸ್ಟರ ನೇತೃತ್ವದ ದೇಶಪ್ರೇಮಿ ಪಡೆ ಜರ್ಮನರನ್ನು ದೇಶದ ಬಹುಭಾಗಗಳಿಂದ ಓಡಿಸುವಲ್ಲಿ, ಬ್ರಿಟಿಶ್–


ಜರ್ಮನ್ ನಾಜಿ–ವಿರೋಧಿ ಗೆರಿಲ್ಲಾ ದಳ

ಅಮೆರಿಕನ್ ಪಡೆಗಳು ಬರುವ ಮೊದಲೇ ಸಫಲವಾಗಿದ್ದವು.

ಯುಗೊಸ್ಲಾವಿಯದಲ್ಲಿ ಕಮ್ಯುನಿಸ್ಟರ ನಾಯಕತ್ವದಲ್ಲಿ ಸ್ಥಾಪಿಸಲಾದ 7 ಲಕ್ಷ ಹೋರಾಟಗಾರರಿದ್ದ ರಾಷ್ಟ್ರೀಯ ವಿಮೋಚನಾ ಸೈನ್ಯ 1941ರ ಹೊತ್ತಿಗೆ ದೇಶದ ಬಹುಭಾಗವನ್ನು ವಿಮೋಚನೆ ಮಾಡಿತ್ತು. ಬಲ್ಗೇರಿಯದಲ್ಲಿ 1942ರಲ್ಲಿ 3 ಲಕ್ಷ ಸಶಸ್ತ್ರ ಹೋರಾಟಗಾರರು, 37 ತುಕಡಿಗಳು, 11 ಬ್ರಿಗೇಡುಗಳ ಸೈನ್ಯ ಕಟ್ಟಲಾಗಿತ್ತು. ಅಗಸ್ಟ್ 1943ರಲ್ಲಿ ರಚಿತವಾದ 'ಪಿತೃಭೂಮಿ ರಂಗ'ದ ನಾಯಕತ್ವದ ಸೈನ್ಯ, ಸೋವಿಯೆಟ್ ಕೆಂಪು ಸೈನ್ಯದ ಸಹಾಯದೊಂದಿಗೆ ಸೆಪ್ಟೆಂಬರ್ 1944ರಲ್ಲಿ ಬಲ್ಗೇರಿಯವನ್ನು ನಾಜಿಗಳಿಂದ ವಿಮೋಚನೆಗೊಳಿಸುವುದರಲ್ಲಿ ಮುಖ್ಯ ಪಾತ್ರ ವಹಿಸಿತು. ಇದೇ ರೀತಿ ಪೋಲೆಂಡ್, ಚೆಕೊಸ್ಲೊವಾಕಿಯ, ಹಂಗೇರಿ, ಅಲ್ಬೇನಿಯಗಳಲ್ಲಿ ಜನತಾ ವಿಮೋಚನಾ ಸೇನೆಗಳು ನಾಜಿಗಳಿಂದ ವಿಮೋಚನೆಯಲ್ಲಿ


ಯುಗೋಸ್ಲಾವ್ ಜನತಾ ಸೈನ್ಯ ತುಕಡಿ

ಪ್ರಮುಖ ಪಾತ್ರ ವಹಿಸಿದವು.

8. ಫ್ಯಾಸಿಸಂ–ವಿರೋಧಿ ವಿಜಯ ದಿನವನ್ನು ಮಿತ್ರಕೂಟದಲ್ಲಿ ಜತೆಗಿದ್ದ ದೇಶಗಳು ಒಟ್ಟಾಗಿ ಆಚರಿಸುವುದಿಲ್ಲ. ರಶ್ಯಾ ಸಮಾಜವಾದದ ಪತನದ ನಂತರವೂ ಅದನ್ನು ದೊಡ್ಡದಾಗಿ ಆಚರಿಸುತ್ತದೆ. ಅಮೆರಿಕ–ಪಶ್ಚಿಮ ಯುರೋಪುಗಳಲ್ಲಿ ಅದು ಅಷ್ಟೇನೂ ಮಹತ್ವದ ಆಚರಣೆಯಾಗುವುದಿಲ್ಲ. ಏಕೆ?

ಹೌದು. ಫ್ಯಾಸಿಸಂ–ವಿರೋಧಿ ವಿಜಯ ದಿನವನ್ನು ಪಾಶ್ಚಿಮಾತ್ಯ ದೇಶಗಳು ಮತ್ತು ರಷ್ಯಾ ಪ್ರತ್ಯೇಕ ದಿನ (ಅನುಕ್ರಮವಾಗಿ ಮೇ 8 ಮತ್ತು 9)ಗಳಂದು ಆಚರಿಸಲಾಗುತ್ತದೆ. ಇದು ಜರ್ಮನ್ ಪಡೆಗಳು ಪೂರ್ಣವಾಗಿ ಶರಣಾಗತವಾದ ದಿನ. ಶರಣಾಗತಿ ಬರ್ಲಿನ್‌ನಲ್ಲಿ ಮೇ 8ರ ತಡರಾತ್ರಿಯಲ್ಲಿ ಆಗಿದ್ದು ಸಮಯ ವ್ಯತ್ಯಾಸಗಳಿಂದಾಗಿ ಮಾಸ್ಕೊದಲ್ಲಿ ಆಗಲೇ ಮೇ 9 ಬೆಳಿಗ್ಗೆ ಆಗಿತ್ತು. ಆದರೆ ಪ್ರತ್ಯೇಕ ದಿನದಂದು ಆಚರಿಸುವುದು, ಸಮಯ ವ್ಯತ್ಯಾಸದಿಂದಾಗಿ ಮಾತ್ರವಲ್ಲ. ಪಾಶ್ಚಿಮಾತ್ಯ ದೇಶಗಳು 'ಯುರೋಪಿನಲ್ಲಿ ವಿಜಯ ದಿನ' (ವಿಇಡೇ– ವಿಕ್ಟರಿ ಇನ್ ಯುರೋಪ್ ಡೇ) ಎಂದು ಕರೆದರೆ, ರಷ್ಯಾ ಸೇರಿದಂತೆ ಮಾಜಿ ಸೋವಿಯೆಟ್ ದೇಶಗಳಲ್ಲಿ "ಫ್ಯಾಸಿಸಂ ವಿರುದ್ಧ ವಿಜಯದ ದಿನ'ವೆಂದು ಕರೆಯಲಾಗುತ್ತದೆ. ಹೀಗೆ ದಿನದ ರಾಜಕೀಯ ಮಹತ್ವದ ತಿರುಳಲ್ಲಿ ಸಹ ವ್ಯತ್ಯಾಸವಿದೆ. ಪಾಶ್ಚಿಮಾತ್ಯ ಸಂಕಥನಗಳಲ್ಲಿ ಸೋವಿಯೆಟ್ ಒಕ್ಕೂಟದ ಸೈನ್ಯ ಮತ್ತು ಜನತೆ, ಯುರೋಪಿನಾದ್ಯಂತ ಕಮ್ಯೂನಿಸ್ಟ್ ನಾಯಕತ್ವದ ಜನತಾ ವಿಮೋಚನಾ ಗೆರಿಲ್ಲಾಗಳ ಪಾತ್ರವನ್ನು ನಿರ್ಲಕ್ಷಿಸಲಾಗುತ್ತದೆ. ಸ್ಟಾಲಿನ್ ಗ್ರಾಡ್, ಲೆನಿನ್ ಗ್ರಾಡ್‌ಗಳಲ್ಲಿ ಬೀದಿ ಬೀದಿಯಲ್ಲೂ ಅವುಡುಗಚ್ಚಿ ಹೋರಾಡಿದ ಕೆಂಪು ಸೈನ್ಯ ಮತ್ತು ಜನತೆಯ ಧೀರೋದಾತ್ತ ಪಾತ್ರವನ್ನು ಮರೆಮಾಚಿ, ರಷ್ಯಾದ ಕಠಿಣ ಚಳಿಗಾಲ ತಡೆಯಲಾಗದೆ ಹಿಟ್ಲರನ ಪಡೆಗಳು ಸೋತವು ಎಂಬ ನಿರೂಪಣೆಗಳನ್ನು ಹರಿಯ ಬಿಡಲಾಗುತ್ತದೆ. ಅದೇ ರೀತಿಯಲ್ಲಿ ಯುರೋಪಿಯನ್ ದೇಶಗಳಲ್ಲಿ ಕಮ್ಯೂನಿಸ್ಟ್ ನಾಯಕತ್ವದ ರಾಷ್ಟ್ರೀಯ ವಿಮೋಚನಾ ರಂಗದ ಧೀರೋದಾತ್ತ ಪಾತ್ರವನ್ನು ಸಹ ನಿರ್ಲಕ್ಷಿಸಲಾಗುತ್ತದೆ, ಮರೆ ಮಾಚಲಾಗುತ್ತದೆ.

ಫೆಬ್ರುವರಿ 1943ರ ಸ್ಟಾಲಿನ್ ಗ್ರಾಡ್ ಸಮರದಲ್ಲಿ ನಾಜಿ ಪಡೆ ಸೋತು ಹಿಮ್ಮೆಟ್ಟಲು ಆರಂಭಿಸದ ಮೇಲಷ್ಟೇ, ಆ ಮೇಲೂ ಅತ್ಯಂತ ವಿಳಂಬದ ನಂತರ ಜೂನ್ 1944ರಲ್ಲಿ ಮಿತ್ರಕೂಟದ ಪಡೆಗಳು ಫ್ರಾನ್ಸಿನ ನಾರ್ಮಂಡಿಯಿಂದ ಆರಂಭಿಸಿದ ದಾಳಿಯನ್ನು ಜರ್ಮನಿಯನ್ನು ಸೋಲಿಸಿದ ಪ್ರಮುಖ ತಿರುವೆಂದು ಪುಟ 14 ಕ್ಕೆ

ಅಸಂಬದ್ಧ ನಿಯಮದ ಮೇಲೆ ನಿಂತಿರುವ 'ರಫ್ತು-ಪ್ರಧಾನ ಬೆಳವಣಿಗೆ'ಯ ಕಾರ್ಯತಂತ್ರವನ್ನು ತೊರೆಯುವುದು ಅಗತ್ಯ



ಬಂಡವಾಳಶಾಹಿ ಅರ್ಥವ್ಯವಸ್ಥೆಯಲ್ಲಿ ಪೂರೈಕೆಯೇ ಬೇಡಿಕೆಯನ್ನು ಸೃಷ್ಟಿಸುತ್ತದೆ ಎಂಬ ಫ್ರೆಂಚ್ ಅರ್ಥಶಾಸ್ತ್ರಜ್ಞ ಜಿ.ಬಿ.ಸೇ ಅವರ ಅಸಂಬದ್ಧವೆಂದು ಆಗಲೇ ಇತ್ಯರ್ಥವಾಗಿರುವ ನಿಯಮವನ್ನು ಆಧರಿಸಿದ 'ರಫ್ತು-ಪ್ರಧಾನ ಬೆಳವಣಿಗೆ' ಕಾರ್ಯತಂತ್ರವು, ವಾಸ್ತವವಾಗಿ ದೇಶಗಳನ್ನು, ಅದರಲ್ಲೂ ವಿಶೇಷವಾಗಿ ಮೂರನೇ ಜಗತ್ತಿನ ದೇಶಗಳನ್ನು ಪರಸ್ಪರರ ವಿರುದ್ಧ ಎತ್ತಿಕಟ್ಟಿತು; ಈ ಕಾರ್ಯತಂತ್ರವು ನೈತಿಕವಾಗಿ ಅಸಂಗತವಾಗಿರುವುದರ ಜೊತೆಗೆ, ದಮನಿತ ಜನರ ನಡುವೆ ಪರಸ್ಪರರನ್ನು ಹಾಳುಗೆಡವುವ ಸ್ಪರ್ಧೆಯನ್ನು ಆದರ್ಶೀಕರಿಸುತ್ತದೆ. ಇದು ಈಗ, ವಿಶ್ವ ಅರ್ಥವ್ಯವಸ್ಥೆಯನ್ನು ಮುಂದೆ ಹೋಗಲಾರದಂತಹ ಒಂದು ಸ್ಥಿತಿಗೆ ತಂದಿದೆ. ಮೂರನೇ ಜಗತ್ತಿನ ದೇಶಗಳ ಅರ್ಥವ್ಯವಸ್ಥೆಗಳಿಗೆ ಈ ಬಿಕ್ಕಟ್ಟಿನಿಂದ ಹೊರಬರುವ ಏಕೈಕ ಮಾರ್ಗವೆಂದರೆ 'ರಫ್ತು ಪ್ರಧಾನ ಬೆಳವಣಿಗೆ'ಯ ಕಾರ್ಯತಂತ್ರವನ್ನು ತೊರೆಯುವುದು ಮತ್ತು ಅದಕ್ಕಾಗಿ ಈಗಾಗಲೇ ಬಹಳಷ್ಟು ಹಾನಿ ಮಾಡಿರುವ ಸೇ ನಿಯಮದ ಬಿಗಿ ಹಿಡಿತದಿಂದ ಹೊರಬರುವುದು.

ಪ್ರೊ. ಪ್ರಭಾತ್ ಪಟ್ನಾಯಕ್
ಅನು: ಕೆ.ಎಂ.ನಾಗರಾಜ್

ಜೀನ್-ಬ್ಯಾಪ್ಟಿಸ್ಟ್ ಸೇ ಎಂಬ ಒಬ್ಬ ಫ್ರೆಂಚ್ ಅರ್ಥಶಾಸ್ತ್ರಜ್ಞ, 'ಪೂರೈಕೆಯು ತಾನೇ ಅದಕ್ಕೆ ಬೇಡಿಕೆಯನ್ನು ಸೃಷ್ಟಿಸುತ್ತದೆ' ಎಂಬ ಒಂದು ನಿಯಮವನ್ನು ಹದಿನೆಂಟನೇ ಶತಮಾನದ ಉತ್ತರಾರ್ಧದಲ್ಲಿ ರೂಪಿಸಿದ್ದರು. ಈ ನಿಯಮದ ಪ್ರಕಾರ, ಯಾವುದೇ ಒಂದು ಅರ್ಥವ್ಯವಸ್ಥೆಯಲ್ಲಿ ಉತ್ಪಾದಿಸುವ ಒಟ್ಟು ಮೊತ್ತದ ಸರಕುಗಳ ಮೇಲಿನ ಬೇಡಿಕೆಯು ಎಂದಿಗೂ ಅಸಮರ್ಪಕವಾಗಿರಲು ಸಾಧ್ಯವಿಲ್ಲ. ಅವರ ವಾದ ಹೀಗಿತ್ತು: ಉತ್ಪಾದಿಸುವ ಯಾವುದೇ ವಸ್ತುವು ತನ್ನ ಉತ್ಪಾದನೆಗೆ ಸಮಾನ ಪ್ರಮಾಣದ ವರಮಾನವನ್ನು ಈ ಉತ್ಪಾದನೆಗೆ ಸಂಬಂಧಿಸಿದವರಲ್ಲಿ ಉಂಟುಮಾಡುತ್ತದೆ. ಈ ವರಮಾನವನ್ನು ಒಂದೋ ಬಳಕೆ ಮಾಡಲಾಗುತ್ತದೆ ಅಥವಾ 'ಉಳಿಕೆ' ಮಾಡಲಾಗುತ್ತದೆ (ಅಂದರೆ, ಬಳಕೆಯಾಗುವುದಿಲ್ಲ). ಈ ವರಮಾನದಲ್ಲಿ ಎಷ್ಟು ಬಳಕೆಯಾಗಿದೆಯೋ ಅದು ಅದರ ಸಮಾನ ಪ್ರಮಾಣದ ಬೇಡಿಕೆಯನ್ನು ಉತ್ಪಾದಿಸಿದ ಗ್ರಾಹಕ ಸರಕುಗಳ ಮೇಲೆ ಉಂಟುಮಾಡುತ್ತದೆ. ಮತ್ತು ಎಷ್ಟು 'ಉಳಿಕೆ'ಯಾಗಿದೆಯೋ ಅಷ್ಟು ಬಂಡವಾಳ ಸರಕುಗಳನ್ನು ಖರೀದಿಸಲು ನೇರವಾಗಿ ಬಳಕೆಯಾಗುತ್ತದೆ, ಅಥವಾ ಬಂಡವಾಳ ಸರಕುಗಳನ್ನು ಖರೀದಿಸುವವರಿಗೆ ಸಾಲವಾಗಿ, ಅಂದರೆ ಹೂಡಿಕೆ ಮಾಡಬಯಸುವವರಿಗೆ ಸಾಲ ನೀಡಲು ಬಳಕೆಯಾಗುತ್ತದೆ. 'ಉಳಿಕೆ'ಯಾದ ಸಕಲವನ್ನೂ ಮತ್ತು ಹೂಡಿಕೆ ಮಾಡಿದ ಸಕಲವನ್ನೂ ಅಂತಿಮವಾಗಿ ಬಡ್ಡಿ ದರಗಳ ಹೊಂದಾಣಿಕೆಯ ಮೂಲಕ ಸರಿದೂಗಿಸಲಾಗುತ್ತದೆ. ಯಾವ ರೀತಿಯಲ್ಲಿ ಅಂದರೆ, ಅಂತಹ ಹೊಂದಾಣಿಕೆಗಳ ಮೂಲಕ ಒಂದು ಅರ್ಥವ್ಯವಸ್ಥೆಯಲ್ಲಿ ಉತ್ಪಾದಿಸಿದ ಎಲ್ಲವೂ ಅಂತಿಮವಾಗಿ ಒಟ್ಟಾರೆ ಬೇಡಿಕೆಯಾಗಿ ಪರಿಣಮಿಸುತ್ತವೆ ಮತ್ತು ಬಂಡವಾಳಶಾಹಿ ಅರ್ಥವ್ಯವಸ್ಥೆಯು ಒಂದು ಗರಿಷ್ಠ ಮಟ್ಟದ ಉತ್ಪಾದನೆಯ ಸ್ಥಿತಿಯಲ್ಲಿರುತ್ತದೆ. ಅಂದರೆ, ಅರ್ಥವ್ಯವಸ್ಥೆಯು ಪೂರ್ಣ ಉದ್ಯೋಗದಲ್ಲಿ ಇರದಿರಲು ಯಾವುದೇ ಕಾರಣಗಳಿಲ್ಲ. ಬೇಡಿಕೆ-ಪೂರೈಕೆಯ ವ್ಯತ್ಯಯಗಳು ನಿರ್ದಿಷ್ಟ ಮಾರುಕಟ್ಟೆಗಳಲ್ಲಿ ಇರಬಹುದೇ ವಿನಃ, ಒಟ್ಟಾರೆಯಾಗಿ ಅಲ್ಲ ಎಂಬುದು ಅವರ ಗ್ರಹಿಕೆ.

ಸೇ ಅವರ ಈ ನಿಯಮದಲ್ಲಿರುವ ಸಮಸ್ಯೆಯೆಂದರೆ, ಅದು ವರ್ತಮಾನದ ಅವಧಿಯಲ್ಲಿ ಗಳಿಸಿದ ವರಮಾನದಿಂದ ಉಂಟಾಗುವ ಎಲ್ಲ ಬೇಡಿಕೆಯೂ ವರ್ತಮಾನದ ಅವಧಿಯಲ್ಲಿ ಉತ್ಪಾದಿಸುವ ಸರಕುಗಳಿಗೆ – ಅದು ಬಳಕೆಯೇ ಇರಬಹುದು ಅಥವಾ ಸಂಪತ್ತಿಗೆ ಕೂಡಿಸುವುದೇ (ಅಂದರೆ, ಹೂಡಿಕೆಯೇ) ಇರಬಹುದು-ಎಂದು ಗ್ರಹಿಸುತ್ತದೆ. ಆದರೆ, ವ್ಯಕ್ತಿಗಳು ತಮ್ಮ ವರಮಾನವನ್ನು ತಾವು ಹೊಂದಿರುವ ಸಂಪತ್ತಿನೊಂದಿಗೆ ಹಣದ ರೂಪದಲ್ಲಿ ಸೇರಿಸಿಕೊಳ್ಳಬಯಸುತ್ತಾರೆ (ಸಂಪತ್ತನ್ನು ಅವರು ಭಾಗಶಃವಾಗಿ ಹಣದ ರೂಪದಲ್ಲಿ ಹೊಂದಿದ್ದರೆ ಈ ಬಯಕೆಯು ನಿಜವೂ ಹೌದು).

ಆದರೆ, ಈ ಹಣವು ವರ್ತಮಾನದ ಅವಧಿಯಲ್ಲಿ ಉತ್ಪಾದಿಸಿದ ಒಂದು ಸರಕಲ್ಲ. ಉದಾಹರಣೆಗೆ, ವರ್ತಮಾನದಲ್ಲಿ ತಮ್ಮ ಹಣವನ್ನು ಕಾಗದ ರೂಪದಲ್ಲಿ (paper money) ಹಿಡಿದಿಟ್ಟುಕೊಳ್ಳಲು ಅವರು ಬಯಸಿದ್ದರೆ. ಅಂಥಹ ಒಂದು ಸನ್ನಿವೇಶದಲ್ಲಿ ಉತ್ಪಾದಿಸಿದ ಸರಕುಗಳ ಪೂರೈಕೆಯು, ತತ್ಸಮಾನವಾದ ಬೇಡಿಕೆಯನ್ನು ಉಂಟುಮಾಡುವುದು ಶಕ್ಯವಿಲ್ಲ. ಹಾಗಾಗಿ, ಸಿ-ಎಂ-ಸಿ ಸಂಚಾರಪಥದಲ್ಲಿ (ಇದರಲ್ಲಿ ಸಿ ಅಂದರೆ ಒಂದು ಸರಕು ಎಂ ಅಂದರೆ ಹಣಕ್ಕೆ ಮಾರಾಟವಾಗುತ್ತದೆ; ಆ ಹಣವು ಸಿ ಅಂದರೆ ಮತ್ತೊಂದು ಸರಕನ್ನು ಕೊಳ್ಳುವಲ್ಲಿ ಬಳಕೆಯಾಗುತ್ತದೆ ಮತ್ತು ಬಳಕೆಯೇ ಈ ಸಂಚಾರಪಥದ ಉದ್ದೇಶ) ವ್ಯಕ್ತಿಗಳು ತಮ್ಮ ಹಣವನ್ನು (ಎಂ) ಒಂದು ವೇಳೆ ಸರಕಾಗಿ(ಸಿ) ಪರಿವರ್ತಿಸಬಯಸದಿದ್ದರೆ, ಉತ್ಪಾದನೆಯಾಗುವ ಸರಕುಗಳು ಆಗ ಅತಿ ಎನಿಸುತ್ತವೆ. ಇಂತಹ ಸಾಕಷ್ಟು ಬೇಡಿಕೆಯಿಲ್ಲದ ಸನ್ನಿವೇಶದಲ್ಲಿ ಉತ್ಪಾದಿತ ಸರಕಿನ ಹಣ-ಬೆಲೆ ಇಳಿದರೆ, ಅದರಿಂದ ಸಂಪತ್ತನ್ನು ಹಣ ರೂಪದಲ್ಲಿ ಹೊಂದುವ ಬಯಕೆ ಬಲಗೊಳ್ಳುತ್ತದೆ. ಹಾಗಾಗಿ, ಅತಿ-ಉತ್ಪಾದನೆಯ ಪ್ರವೃತ್ತಿಯು ನಿವಾರಣೆಯಾಗುವುದಿಲ್ಲ.



ಅಸಂಬದ್ಧ ಗ್ರಹಿಕೆ

ಸೇ ಅವರ ನಿಯಮವನ್ನು ಆಧಾರವಿಲ್ಲದೆ ಒಪ್ಪಿಕೊಂಡ ಮುಖ್ಯಧಾರೆಯ ಬೂರ್ಜ್ವಾ ಅರ್ಥಶಾಸ್ತ್ರವು, ಹಣವು ಚಲಾವಣೆಯ ಒಂದು ಮಾಧ್ಯಮವಷ್ಟೇ ಹೊರತು, ಸಂಪತ್ತಿನ ಒಂದು ರೂಪವಲ್ಲ, ಆದುದರಿಂದ, ವ್ಯಕ್ತಿಗಳು ಹಣವನ್ನು ಸಂಪತ್ತಿನ ರೂಪದಲ್ಲಿ ಹಿಡಿಟ್ಟುಕೊಳ್ಳಲು ಬಯಸುವುದಿಲ್ಲ ಎಂದು ಭಾವಿಸಿತು. ಈ ಗ್ರಹಿಕೆಯು ಒಂದು ಅಸಂಬದ್ಧವೇ ಸರಿ. ಅನುಭವಾತ್ಮಕವಾಗಿ ಇದು ಅಸತ್ಯ ಮಾತ್ರವಲ್ಲ, ತಾರ್ಕಿಕವಾಗಿ ಸಮರ್ಥನೀಯವೂ ಅಲ್ಲದುದರಿಂದ, ಒಂದು ಬಂಡವಾಳಶಾಹಿ ಅರ್ಥವ್ಯವಸ್ಥೆಯ ಸಂದರ್ಭದಲ್ಲಿ ಸೇ ಅವರ ನಿಯಮವು ಅಸಂಬದ್ಧವಾಗುತ್ತದೆ. ಈ ನಿಯಮದ ಬಗ್ಗೆ ಮತ್ತು ಒಬ್ಬ ಅರ್ಥಶಾಸ್ತ್ರಜ್ಞರಾಗಿ ಜೆಬಿಸೇ ಅವರನ್ನು ಕಾರ್ಲ್ ಮಾರ್ಕ್ಸ್ ಸಾಕಷ್ಟು ಕಟುವಾಗಿ ಟೀಕಿಸುತ್ತಿದ್ದರು (ಅವರನ್ನು "trite" Monsieur Say ಅಂದರೆ "ಹಳಸಲು" ಶ್ರೀಮಾನ್ ಸೆ ಎಂದು ಅವರು ಕರೆದಿದ್ದರು) ಮತ್ತು ಬಂಡವಾಳಶಾಹಿಯ ಅಡಿಯಲ್ಲಿ ಅತಿ-ಉತ್ಪಾದನೆಯ ಬಿಕ್ಕಟ್ಟುಗಳ ಸಾಧ್ಯತೆಯನ್ನು ವ್ಯಾಖ್ಯಾನಿಸಿದ್ದರು.



ಹೀಗೆ ಮಾರ್ಕ್ಸ್ ಅವರಿಂದ ಮಾತ್ರವಲ್ಲದೆ 1930ರ ದಶಕದ ಮಹಾ ಆರ್ಥಿಕ ಕುಸಿತದ ಸಮಯದಲ್ಲಿ ಬೂರ್ಜ್ವಾ ಅರ್ಥಶಾಸ್ತ್ರದಲ್ಲಿ ಉಂಟಾದ ಕೀನ್ಸಿಯನ್ ಕ್ರಾಂತಿಯ ಸನ್ನಿವೇಶದಲ್ಲಿ ಮತ್ತೊಮ್ಮೆ ಬಗೆಹರಿಸಲ್ಪಟ್ಟ ಅರ್ಥಶಾಸ್ತ್ರ ಸಂಬಂಧಿತ ಈ ನಿಗೂಢ ಚರ್ಚೆಗಳ ಬಗ್ಗೆ ನಾವೀಗ ಏಕೆ ಮಾತನಾಡುತ್ತಿದ್ದೇವೆ ಎಂದು ಆಶ್ಚರ್ಯಪಡಬಹುದು. ಮಹಾ ಆರ್ಥಿಕ ಕುಸಿತದ ಸಮಯದಲ್ಲಿ, ಹೀಗೆ ಒಂದು ಬಂಡವಾಳಶಾಹಿ ಅರ್ಥವ್ಯವಸ್ಥೆ ಎಂದಿಗೂ ಒಟ್ಟು ಬೇಡಿಕೆಯ ಕೊರತೆಯನ್ನು ಕಾಣುವುದಿಲ್ಲ ಎಂದು ಹೇಳುವುದು ಹಾಸ್ಯಾಸ್ಪದ ಸಂಗತಿಯಾಗಿ ಬಿಟ್ಟಿತ್ತು. ಕೀನ್ಸ್ ಬೋಲ್ಶೆವಿಕ್-ಶೈಲಿ ಕ್ರಾಂತಿಯಿಂದ ಪಾಶ್ಚ್ಯಾತ್ಯ ಬಂಡವಾಳಶಾಹಿಯನ್ನು ರಕ್ಷಿಸಲು ಬಯಸಿದ್ದರು, ಮತ್ತು ಅದನ್ನು ಸಾಧಿಸುವುದಕ್ಕಾಗಿ, ಬಂಡವಾಳಶಾಹಿಯ ವೈಫಲ್ಯಗಳನ್ನು ಮೊದಲು ಒಪ್ಪಿಕೊಳ್ಳಬೇಕು ಮತ್ತು ಅವುಗಳಿಂದ ಹೊರಬರುವ ಉಪಾಯಗಳ ಮೂಲಕ ಬಂಡವಾಳಶಾಹಿ ವ್ಯವಸ್ಥೆಯನ್ನು ಸರಿಪಡಿಸುವುದರಿಂದ ಕ್ರಾಂತಿಯನ್ನು ತಡೆಯಬಹುದು ಎಂದು ಅವರು ಗುರುತಿಸಿದರು.

ಘಾತಕ ಮತ್ತು ಮರೆಮಾಚುವ ಹುನ್ನಾರ

ಸೇ ಅವರ ನಿಯಮದ ಬಗ್ಗೆ ನಾವು ಮಾತನಾಡುತ್ತಿರುವ ಕಾರಣವೆಂದರೆ, ಈ ನಿಯಮವು ಸದ್ದಿಲ್ಲದೆ ಆರ್ಥಿಕ ಸಂಕಥನಕ್ಕೆ ಮೌನವಾಗಿ ಮರಳಿದೆ. ಈ ಪುನರಾಗಮನದ ಬಗ್ಗೆ ತೋರುತ್ತಿರುವ ಮೌನವು ಅದನ್ನು ಎಷ್ಟು ಪ್ರಭಾವಶಾಲಿಯಾಗಿ ಮಾಡಿದೆಯೋ, ಅದು ಅಷ್ಟೇ ಘಾತುಕವೂ ಆಗಿದೆ. ಹಾಗೆ ನೋಡಿದರೆ, ಇಡೀ ನವ-ಉದಾರವಾದಿ ಆರ್ಥಿಕ ವ್ಯವಸ್ಥೆಯ ತರ್ಕವೇ ಸೇ ನಿಯಮದ ಸಿಂಧುತ್ವವನ್ನು ಒಪ್ಪಿಕೊಂಡಿರುವ ಅಂಶದ ಮೇಲೆ ನಿಂತಿದೆ.

ನವ ಉದಾರವಾದದ ಬೌದ್ಧಿಕ ತಳಹದಿಯನ್ನು ಮತ್ತು ಅದು ಮುನ್ನೆಲೆಗೆ ಬರುವವರೆಗೂ ಪ್ರಚಲಿತವಿದ್ದ ನಿಯಂತ್ರಣ ನೀತಿಗಳ ಕಾರ್ಯತಂತ್ರವನ್ನು (ಭಾರತದಲ್ಲಿ ನಿಯಂತ್ರಣ ನೀತಿಗಳ ಕಾರ್ಯತಂತ್ರವನ್ನು ಬಹುತೇಕವಾಗಿ ನೆಹರು-ಮಹಾಲನೋಬಿಸ್ ಕಾರ್ಯತಂತ್ರ ಎಂದು ಕರೆಯಲಾಗಿದೆ) ತೊರೆಯುವ ಬೌದ್ಧಿಕ ತಳಹದಿಯನ್ನು ಎಪ್ಪತ್ತರ ದಶಕದ ಆರಂಭದಲ್ಲಿ ಹಾಕಲಾಯಿತು. ದಕ್ಷಿಣ ಕೊರಿಯಾ, ತೈವಾನ್, ಹಾಂಗ್‌ಕಾಂಗ್ ಮತ್ತು ಸಿಂಗಾಪುರ, ಈ ನಾಲ್ಕು ಪೂರ್ವ ಏಷ್ಯಾದ 'ಹುಲಿಗಳು' ಗಮನಾರ್ಹವಾದ ಉನ್ನತ ಆರ್ಥಿಕ ಬೆಳವಣಿಗೆಯ ದರಗಳನ್ನು ತೋರಿಸಿವೆ; ಈ ದೇಶಗಳ ಬೆಳವಣಿಗೆಯು ನಿಯಂತ್ರಣ ನೀತಿಗಳ ಕಾರ್ಯತಂತ್ರವನ್ನು ಅನುಸರಿಸುವ ಭಾರತದಂತಹ ದೇಶಗಳಿಗಿಂತ ಉನ್ನತವಾಗಿದೆ; ಮತ್ತು ಉಳಿದ ದೇಶಗಳೂ ಸಹ ನಿಯಂತ್ರಣ ನೀತಿಗಳ ಕಾರ್ಯತಂತ್ರವನ್ನು (ಅದನ್ನು ವಿಶ್ವ ಬ್ಯಾಂಕ್ 'ಒಳಮುಖವಾದ' ಅಭಿವೃದ್ಧಿ ಕಾರ್ಯತಂತ್ರ ಎಂದು ಕರೆದಿತ್ತು) ತ್ಯಜಿಸಿ, ಅದರ ಬದಲಿಗೆ 'ರಫ್ತು-ಪ್ರಧಾನ ಬೆಳವಣಿಗೆ'ಯನ್ನು ಅನುಸರಿಸಿದರೆ, ಈ ದೇಶಗಳೂ ಸಹ 'ಏಷ್ಯಾದ ಹುಲಿ'ಗಳ ರೀತಿಯಲ್ಲಿ ಯಶಸ್ವಿಯಾಗಬಹುದು ಎಂಬ ಒಂದು ವಾದವನ್ನು ಮಂಡಿಸಲಾಯಿತು.

ಈ ವಾದವು ಅಸಂಬದ್ಧವಾಗಿದೆ. ವಿಶ್ವದ ಒಟ್ಟು ಬೇಡಿಕೆಯ ಮಟ್ಟವು ಒಂದು ನಿರ್ದಿಷ್ಟ ದರದಲ್ಲಿ ವಿಸ್ತರಿಸುತ್ತಿದ್ದರೆ, ಆಗ ಎಲ್ಲ ದೇಶಗಳ ಒಟ್ಟು ಉತ್ಪಾದನೆಯು ಒಂದು ಹೆಚ್ಚಿನ ದರದಲ್ಲಿ ವಿಸ್ತರಿಸುವುದು ಸಾಧ್ಯವಿಲ್ಲ. ಕೆಲವು ದೇಶಗಳ ಉತ್ಪಾದನೆ ಮಾತ್ರವೇ ವಿಶ್ವದ ಒಟ್ಟು ಬೇಡಿಕೆಗಿಂತಲೂ ಒಂದು ಉನ್ನತವಾದ ದರದಲ್ಲಿ ಒಂದು ವೇಳೆ ವಿಸ್ತರಿಸುತ್ತಿದ್ದರೆ, ಆಗ ಉಳಿದ ದೇಶಗಳ ಉತ್ಪಾದನೆಯ ವಿಸ್ತರಣೆಯು ತಗ್ಗಿದ ದರದಲ್ಲಿರುವುದೇ ಅದಕ್ಕೆ ಕಾರಣವಾಗುತ್ತದೆ. ಇದುವರೆಗೂ ನಿಧಾನವಾಗಿ ಬೆಳೆಯುತ್ತಿದ್ದ ದೇಶಗಳ ಉತ್ಪಾದನಾ ಬೆಳವಣಿಗೆಯು ವೇಗವನ್ನು ಪಡೆದುಕೊಂಡರೆ, ಅದು ಇದುವರೆಗೂ ವೇಗವಾಗಿ ಬೆಳೆಯುತ್ತಿದ್ದ ದೇಶಗಳಿಗೆ ನಷ್ಟ ಉಂಟುಮಾಡುವ ಮೂಲಕ ಮಾತ್ರ ಆಗಿರಬಹುದು. ಆದ್ದರಿಂದ, ಎಲ್ಲಾ ದೇಶಗಳೂ 'ರಫ್ತು-ಪ್ರಧಾನ ಬೆಳವಣಿಗೆ' ಕಾರ್ಯತಂತ್ರವನ್ನು ಅನುಸರಿಸಿದರೆ 'ಏಷ್ಯನ್ ಹುಲಿಗಳ' ವೇಗದಲ್ಲೇ ಬೆಳೆಯಬಹುದು ಎಂದು ಆಸೆ ತೋರಿಸುವುದು ಅಸಂಬದ್ಧವಾಗಿದೆ; ಅದು ಒಟ್ಟಾರೆ ಬೇಡಿಕೆಯ ಮೇಲಿನ ನಿರ್ಬಂಧವನ್ನು ನಿರ್ಲಕ್ಷಿಸಿದಂತೆಯೇ ಸರಿ, ಅಂದರೆ 'ಸೇ' ನಿಯಮವನ್ನು ಒಪ್ಪಿಕೊಳ್ಳುವುದು. ಆದ್ದರಿಂದ ನೆಹರೂ ಅನುಸರಿಸಿದ ಕಾರ್ಯತಂತ್ರವನ್ನು ತೊರೆಯುವ ಕರೆಯ ಹಿಂದೆ, ಈ ಅಸಂಬದ್ಧ 'ಸೇ' ನಿಯಮದ ಮೊರೆಹೋಗುವ ಹುನ್ನಾರವಿತ್ತು.

'ರಫ್ತು-ಪ್ರಧಾನ ಬೆಳವಣಿಗೆ'ಯ 'ಯಶಸ್ಸಿ'ನ ಹಿಂದೆ

ಈ ಹುನ್ನಾರವನ್ನು ಮರೆಮಾಚಲಾಯಿತು. ಹಾಗಾಗಿಯೇ ಅದು ಯಶಸ್ವಿಯಾಯಿತು. ಇದು 'ಸಣ್ಣ ದೇಶಗಳ' ಉದಾಹರಣೆಯ ರೂಪವನ್ನು ಪಡೆದುಕೊಂಡಿತು. ಒಂದು ಸಣ್ಣ ದೇಶವು, ಅದು ಸಣ್ಣದಾಗಿರುವುದರಿಂದಲೇ, ದೊಡ್ಡ ದೇಶಗಳಿಗೆ ನಷ್ಟವನ್ನು ಉಂಟುಮಾಡುವ ಮೂಲಕ ತಮ್ಮ ರಫ್ತುಗಳನ್ನು ತಳ್ಳಬಲ್ಲವು. ಆದರೆ, ಈ ನಷ್ಟಗಳು ದೊಡ್ಡ ದೇಶಗಳು ಗಮನಿಸಬಹುದಾದ ಪ್ರಮಾಣದಲ್ಲಿ ಇರುವುದಿಲ್ಲ. ಆದ್ದರಿಂದ ಈ ಸಣ್ಣ ದೇಶಗಳು ತಾವು ಬಯಸಿದರೆ ಇನ್ನೂ ಹೆಚ್ಚಿನದನ್ನು ರಫ್ತು ಮಾಡಬಹುದು ಎಂದು ಭಾವಿಸಿದವು. ಅಂದರೆ, ಅವು ಪುಟ 15 ಕ್ಕೆ

ಕೇರಳ: ಎಲ್‌ಡಿಎಫ್ ಸರ್ಕಾರವು ಬದ್ಧತೆಯಿಂದ ಮುನ್ನಡೆಯುತ್ತಿದೆ........

ಪುಟ 8 ರಿಂದ

ವರ್ಷಗಳಲ್ಲಿ 477 ಕಂಪನಿಗಳು ಮತ್ತು 62,490 ಉದ್ಯೋಗಿಗಳನ್ನು ಹೊಸದಾಗಿ ಸೇರಿಸಲಾಗಿದೆ. ಮುಂದಿನ ಐದು ವರ್ಷಗಳಲ್ಲಿ ಟೆಕ್ನೋಪಾರ್ಕ್‌ಗಳಲ್ಲಿ ಐದು ಲಕ್ಷ ಜನರು ಕೆಲಸ ಮಾಡಲಿದ್ದಾರೆ.

ಕೆ–ಫೋನ್ ಯೋಜನೆ ಮೂಲಕ ಇಂಟರ್‌ನೆಟ್

ಕೆ–ಫೋನ್ ಯೋಜನೆಯ ಮೂಲಕ ಕೇರಳದ ಎಲ್ಲಾ ಮನೆಗಳು ಮತ್ತು ಸರ್ಕಾರಿ ಕಚೇರಿಗಳಿಗೆ ಬ್ರಾಡ್‌ಬ್ಯಾಂಡ್ ಇಂಟರ್‌ನೆಟ್ ಪ್ರವೇಶ ಲಭ್ಯವಾಗುವಂತೆ ಮಾಡಲಾಗುತ್ತಿದೆ. ಎಲ್ಲಾ ಆಧುನಿಕ ದೃಷ್ಟಿಕೋನಗಳನ್ನು ಒಳಗೊಂಡ ವೈಜ್ಞಾನಿಕ ಪ್ರಗತಿಯನ್ನು ಸರ್ಕಾರ ಗುರಿಯಾಗಿಸಿಕೊಂಡಿದೆ. ಇಂದು ಸಾಧ್ಯವಾದಷ್ಟು ಉತ್ತಮ ರೀತಿಯಲ್ಲಿ ಮುಂದುವರಿಯಲು ಕೇರಳಕ್ಕೆ ಸಾಧ್ಯವಾಗಿದೆ.

ಲಾಭದಲ್ಲಿ 53 ಸಾರ್ವಜನಿಕ ವಲಯದ ಉದ್ಯಮಗಳು

ಕೇರಳದಾದ್ಯಂತ ಪ್ರಸ್ತುತ 131 ಸಾರ್ವಜನಿಕ ವಲಯದ ಉದ್ಯಮಗಳು ಕಾರ್ಯನಿರ್ವಹಿಸುತ್ತಿವೆ. ಕಳೆದ ಒಂಬತ್ತು ವರ್ಷಗಳಲ್ಲಿ ಅವುಗಳ ಕಾರ್ಯಾಚರಣೆಗಳಲ್ಲಿ ಗಮನಾರ್ಹ ಪ್ರಗತಿ ಸಾಧಿಸಲಾಗಿದೆ. 2016ರಲ್ಲಿ 41 ಸಾರ್ವಜನಿಕ ವಲಯದ ಉದ್ಯಮಗಳು ಲಾಭದಲ್ಲಿ ಕಾರ್ಯನಿರ್ವಹಿಸುತ್ತಿದ್ದವು, ಆದರೆ ಈಗ ಅವುಗಳ ಸಂಖ್ಯೆ 53ಕ್ಕೆ ಏರಿದೆ. 2016ರಲ್ಲಿ ಅವುಗಳ ನಿರ್ವಹಣಾ ಲಾಭ 584 ಕೋಟಿ ರೂ.ಗಳಾಗಿದ್ದರೆ, ಈಗ ಅದು 1913 ಕೋಟಿ ರೂ.ಗಳಿಗೆ ಏರಿದೆ. ಸಾರ್ವಜನಿಕ ವಲಯದ ಉದ್ಯಮಗಳ ಬಗ್ಗೆ ಎಡ ಪ್ರಜಾಸತ್ತಾತ್ಮಕ ರಂಗ ತೋರಿಸಿದ ವಿಶೇಷ ಕಾಳಜಿಯ ಪರಿಣಾಮವಾಗಿ ಈ ಪ್ರಗತಿ ಸಾಧ್ಯವಾಯಿತು.

ಪ್ರವಾಸೋದ್ಯಮ ಕ್ಷೇತ್ರ ಹೊಸ ಎತ್ತರಕ್ಕೆ

ಕೇರಳದ ಆರ್ಥಿಕತೆಗೆ ಪ್ರಮುಖ ಕೊಡುಗೆ ನೀಡುವ ಪ್ರವಾಸೋದ್ಯಮ ಕ್ಷೇತ್ರವು ಸಹ ಹೊಸ ಎತ್ತರಕ್ಕೆ ಏರುತ್ತಿದೆ. ಕೇರಳಕ್ಕೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆಯಲ್ಲಿ ಗಣನೀಯ ಏರಿಕೆ ಕಂಡುಬಂದಿದೆ ಎಂದು ಅಂಕಿಅಂಶಗಳು ಸೂಚಿಸುತ್ತವೆ. ಕಳೆದ ವರ್ಷ ಸುಮಾರು 2.5 ಕೋಟಿ ದೇಶೀಯ ಪ್ರವಾಸಿಗರು ಕೇರಳಕ್ಕೆ ಆಗಮಿಸಿದ್ದರು. ಸುಮಾರು 7.5 ಲಕ್ಷ ವಿದೇಶಿ ಪ್ರವಾಸಿಗರು ಕೇರಳಕ್ಕೆ ಭೇಟಿ ನೀಡಿದರು. ಇದೆಲ್ಲವೂ ಕೇರಳದ ಪ್ರವಾಸೋದ್ಯಮ ಕ್ಷೇತ್ರವನ್ನು ಪ್ರವಾಸಿಗರು ಎಷ್ಟು ಒಪ್ಪಿಕೊಂಡಿದ್ದಾರೆ ಎಂಬುದನ್ನು ಸೂಚಿಸುತ್ತದೆ. ಸಾಹಸ ಪ್ರವಾಸೋದ್ಯಮ, ಸಿನಿಮಾ ಪ್ರವಾಸೋದ್ಯಮ, ಕ್ಯಾರವಾನ್ ಪ್ರವಾಸೋದ್ಯಮ ಮತ್ತು ಜವಾಬ್ದಾರಿಯುತ ಪ್ರವಾಸೋದ್ಯಮದಂತಹ ಹೊಸ ದಿಕ್ಕುಗಳಲ್ಲಿ ಕೇರಳ ಮುಂದುವರಿಯುತ್ತಿದೆ.

ಗಲಭೆಗಳಿಂದ ಮುಕ್ತವಾದ ಶಾಂತಿಯುತ ಸಾಮಾಜಿಕ ಜೀವನ

ಯಾವುದೇ ಸಮಾಜಕ್ಕೆ ಶಾಂತಿಯುತ ಜೀವನ ಅತ್ಯಂತ ಮುಖ್ಯ. ಕೇರಳವು ಸ್ಥಿರವಾದ ಕಾನೂನು ಮತ್ತು ಸುವ್ಯವಸ್ಥೆ ಪರಿಸ್ಥಿತಿ ಹಾಗೂ ಕೋಮು ಸಂಘರ್ಷಗಳು ಅಥವಾ ಗಲಭೆಗಳಿಂದ ಮುಕ್ತವಾದ ಶಾಂತಿಯುತ ಸಾಮಾಜಿಕ ಜೀವನವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗಿದೆ. ಕೇರಳದ ಪೊಲೀಸ್ ಪಡೆ ಅತ್ಯುತ್ತಮ ವೈಜ್ಞಾನಿಕ ತನಿಖಾ ವ್ಯವಸ್ಥೆಗಳನ್ನು ಹೊಂದಿದೆ ಮತ್ತು ಸೈಬರ್ ಪ್ರಕರಣಗಳನ್ನು ತನಿಖೆ ಮಾಡುವ ಮತ್ತು ಅಪರಾಧಿಗಳನ್ನು ಕಾನೂನಿಗೆ ಒಳಪಡಿಸುವ ಸಾಮರ್ಥ್ಯವನ್ನು ಹೊಂದಿದೆ. ಕೇರಳವು ಮಾದಕ ವ್ಯಸನದ ಹಿಡುಗಿನ ವಿರುದ್ಧ ಬಲವಾದ ಹೋರಾಟವನ್ನು ನಡೆಸುತ್ತಿದೆ. ಮಾದಕ ವಸ್ತುಗಳ ಮಾರಾಟ, ಸಂಗ್ರಹಣೆ ಮತ್ತು ಬಳಕೆಯನ್ನು ತಡೆಗಟ್ಟಲು ಕೇರಳ ಪೊಲೀಸರು ಆಪರೇಷನ್ ಡಿ–ಹಂಟ್ ಅನ್ನು ಜಾರಿಗೊಳಿಸುತ್ತಿದ್ದಾರೆ.

ಸರ್ಕಾರಿ ಸೇವೆಗಳಲ್ಲಿ ಅಂಗವಿಕಲರಿಗೆ ಶೇ.4ರಷ್ಟು ಮೀಸಲಾತಿ

ಕೇರಳ ಲೋಕಸೇವಾ ಆಯೋಗವು ಭಾರತದ ಅತಿ ದೊಡ್ಡ ಲೋಕಸೇವಾ ನೇಮಕಾತಿ ಆಯೋಗವಾಗಿದೆ. ಪಿಎಸ್‌ಸಿ ಮೂಲಕ ಎರಡೂವರೆ ಲಕ್ಷಕ್ಕೂ ಹೆಚ್ಚು ನೇಮಕಾತಿಗಳನ್ನು ಮಾಡಲಾಯಿತು. ಸುಮಾರು 40,000 ಶೀರ್ಷಿಕೆಗಳು ಸೃಷ್ಟಿಯಾದವು. ಕೇಂದ್ರ ಸೇವೆ ಮತ್ತು ಸಾರ್ವಜನಿಕ ವಲಯದ ಉದ್ಯಮಗಳಲ್ಲಿ ಲಕ್ಷಾಂತರ ಹುದ್ದೆಗಳು ಖಾಲಿ ಇದ್ದ ಸಮಯದಲ್ಲಿ, ಭಾರತದ ಬೇರೆ ಯಾವುದೇ ನಾಗರಿಕ ಸೇವೆ ಹೇಳಿಕೊಳ್ಳಲಾಗದ ಈ ಸಾಧನೆಯನ್ನು ಕೇರಳ ಸಾಧಿಸಿದೆ. ಸರ್ಕಾರಿ ಸೇವೆಗಳಲ್ಲಿ ಅಂಗವಿಕಲರಿಗೆ ಶೇ.4ರಷ್ಟು ಮೀಸಲಾತಿ ಖಾತ್ರಿಪಡಿಸಲಾಗಿದೆ.

ಹಲವು ಸವಾಲುಗಳನ್ನು ಎದುರಿಸಿ...

ಇಷ್ಟೆಲ್ಲಾ ಸಾಧನೆಗಳು ಸಾಧ್ಯ ಎಂದು ಹೇಳುತ್ತಿದ್ದರೂ, ಎಲ್‌ಡಿಎಫ್ ಸರ್ಕಾರವು ಎದುರಿಸಿದ ಸವಾಲುಗಳು ಮತ್ತು ಬಿಕ್ಕಟ್ಟುಗಳು ಕಡಿಮೆಯೇನಲ್ಲ. ಒಂದೆಡೆ, ಓಖಿ ಚಂಡಮಾರುತ, 2018ರ ಪ್ರವಾಹ, 2019ರ ಮಾನ್ಸೂನ್, ಕೋವಿಡ್ ಸಾಂಕ್ರಾಮಿಕ ಮತ್ತು ಇತ್ತೀಚೆಗೆ ಚುರಲ್ಮಲಾ ಭೂಕುಸಿತದಂತಹ ನೈಸರ್ಗಿಕ ವಿಕೋಪಗಳಿವೆ. ಇನ್ನೊಂದೆಡೆ, ಕೇಂದ್ರ ಸರ್ಕಾರದ ನಡೆಯಿಂದ ಸೃಷ್ಟಿಯಾದ ವಿರೂಪಗಳು. ಕೇಂದ್ರ ಯೋಜನೆ ಹಂಚಿಕೆ ಮತ್ತು ತೆರಿಗೆ ಆದಾಯದಲ್ಲಿನ ಕಡಿತವು ಕೇರಳದ ಆದಾಯದಲ್ಲಿ ಗಮನಾರ್ಹ ಕುಸಿತಕ್ಕೆ ಕಾರಣವಾಗಿದೆ. ಎಲ್‌ಡಿಎಫ್ ಸರ್ಕಾರವು ಈ ಸವಾಲುಗಳನ್ನು ನಿವಾರಿಸಿ ಮುಂದುವರಿಯಲು ಪ್ರಯತ್ನಿಸುತ್ತಿದೆ.

ಕಳೆದ ನಾಲ್ಕು ವರ್ಷಗಳ ಅಂಕಿಅಂಶಗಳನ್ನು ನೋಡಿದರೆ, ರಾಜ್ಯದ ಸ್ವಂತ ತೆರಿಗೆ ಆದಾಯವು 47,000 ಕೋಟಿ ರೂ.ಗಳಿಂದ 81,000 ಕೋಟಿ ರೂ.ಗಳಿಗೆ ಹೆಚ್ಚಾಗಿದೆ. ಒಟ್ಟು ಸ್ವಂತ ಆದಾಯವು 55,000 ಕೋಟಿ ರೂ.ಗಳಿಂದ 1,04,000 ಕೋಟಿ ರೂ.ಗಳಿಗೆ ಏರಿತು ಮತ್ತು ಸಾರ್ವಜನಿಕ ಸಾಲ ಮತ್ತು ಜಿಡಿಪಿ ನಡುವಿನ ಅಂತರವು ಶೇಕಡಾ 36ರಿಂದ 34ಕ್ಕೆ ಇಳಿದಿದೆ. ಆದಾಗ್ಯೂ, ಕಳೆದ ಹಣಕಾಸು ವರ್ಷದಲ್ಲಿ ರಾಜ್ಯ ಸರ್ಕಾರವು ಸುಮಾರು 70 ಪ್ರತಿಶತದಷ್ಟು ವೆಚ್ಚವನ್ನು ಭರಿಸಿತು. ಈ ಹಣಕಾಸು ವರ್ಷದಲ್ಲಿ ಒಟ್ಟು ವೆಚ್ಚದ ಸುಮಾರು 75 ಪ್ರತಿಶತವನ್ನು ರಾಜ್ಯವು ಭರಿಸಬೇಕಾಗುತ್ತದೆ ಎಂದು ಅಂದಾಜಿಸಲಾಗಿದೆ. 2016ರಲ್ಲಿ, ರಾಜ್ಯದ ತಲಾ ಆದಾಯವು 1.48 ಲಕ್ಷ ರೂ.ಗಳಷ್ಟಿತ್ತು, ಅದು ಈಗ 2.28 ಲಕ್ಷ ರೂ.ಗಳಿಗೆ ಏರಿದೆ.

"ನಾವು ಬಿಕ್ಕಟ್ಟುಗಳಿಂದ ನಿರುತ್ಸಾಹಗೊಳ್ಳುವುದಿಲ್ಲ, ಬದಲಿಗೆ ಅವುಗಳನ್ನು ಅವಕಾಶಗಳಾಗಿ ಪರಿವರ್ತಿಸುತ್ತೇವೆ–ಮುಂದುವರಿಯುತ್ತೇವೆ. ನಾಲ್ಕನೇ ವಾರ್ಷಿಕೋತ್ಸವದ ಆಚರಣೆಯಲ್ಲಿ ಭಾಗವಹಿಸಿದ ಬೃಹತ್ ಜನಸಮೂಹವು ಎಲ್‌ಡಿಎಫ್ ಸರ್ಕಾರವು ಆಡಳಿತದಲ್ಲಿ ಮುಂದುವರಿಯುತ್ತದೆ ಎಂಬುದರ ಖಾತರಿಯಾಗಿದೆ. ಕೇರಳ ಕೇವಲ ಒಂದು ರಾಜ್ಯದ ಹೆಸರಲ್ಲ, ಅದು ನಮ್ಮ ಭೂಮಿ ಮತ್ತು ನಮ್ಮ ಮನಸ್ಸು. ಈ ಭೂಮಿ ಮಲಯಾಳಿಗಳ ಹೆಮ್ಮೆ. ಕೇರಳದ ಜ್ಯೋತಿ ಈಗ ಹೆಚ್ಚು ಪ್ರಖರವಾಗಿ ಉರಿಯುತ್ತಿದೆ. ಜನರು ಕೂಡ ಎಲ್‌ಡಿಎಫ್ ತನ್ನ ಆಡಳಿತವನ್ನು ಮುಂದುವರೆಸಿ ನವ ಕೇರಳದ ಕನಸನ್ನು ನನಸಾಗಿಸಲು ಬಯಸುತ್ತಾರೆ. ಆ ಆಶಯವನ್ನು ಸರ್ಕಾರಕ್ಕೆ ನೀಡುವುದು ದೊಡ್ಡ ಜವಾಬ್ದಾರಿಯಾಗಿದೆ. ಸರ್ಕಾರವು ಬದ್ಧತೆಯೊಂದಿಗೆ ಮತ್ತು ರಾಜಿ ಮಾಡಿಕೊಳ್ಳದೆ ಮುಂದುವರಿಯುತ್ತಿದೆ." ಎನ್ನುತ್ತಾರೆ ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್.

–ಸಿಚಿ

ಫ್ಯಾಸಿಸಂ ವಿರುದ್ಧ ವಿಜಯದ 80ನೇ.....


ಪುಟ 12 ರಿಂದ

ಬಿಂಬಿಸುತ್ತವೆ. ಅದರ ಮಹತ್ವವನ್ನು ಉತ್ಪ್ರೇಕ್ಷೆ ಮಾಡುತ್ತವೆ. ಅದೇ ವರ್ಷವೂ ಸೇರಿದಂತೆ ಪ್ರತಿ ವರ್ಷವೂ, ಎಲ್ಲ ಪಾಶ್ಚಿಮಾತ್ಯ ದೇಶಗಳೂ ಈ 'ನಾರ್ಮಂಡಿ ಲ್ಯಾಂಡಿಂಗ್' ದಿನವನ್ನು 'ವಿಇಡೇ'ಗಿಂತಲೂ ಜೋರಾಗಿ ಆಚರಿಸುತ್ತವೆ! ಆದರೆ ಜರ್ಮನಿ ಸೋವಿಯೆಟ್ ಒಕ್ಕೂಟದ ಮೇಲೆ ದಾಳಿಮಾಡಿದ ಸ್ವಲ್ಪ ಸಮಯದಲ್ಲೇ 1942ರಲ್ಲಿ ಪಶ್ಚಿಮದಿಂದಲೂ ದಾಳಿ ಆರಂಭಿಸಿದ್ದರೆ, ನಾಜಿ ಪಡೆಗಳನ್ನು ಇನ್ನಷ್ಟು ಬೇಗನೆ ಬಹಳ ಕಡಿಮೆ ಸಾವು–ನೋವುಗಳಿಂದ ಸೋಲಿಸಬಹುದಾಗಿತ್ತು. ನಾಜಿ ಪಡೆಗಳು ಸೋವಿಯೆಟ್ ಒಕ್ಕೂಟವನ್ನು ನಾಶಮಾಡಲಿ, ಆ ಮೇಲೆ ನೋಡ್ಡೋಣ ಎಂದು ಅವು ಕಾದಿದ್ದವು, ಆದರೆ ಫೆಬ್ರವರಿ 1943ರ ಸ್ಟಾಲಿನ್ ಗ್ರಾಡ್ ಸಮರದಲ್ಲಿ ಸೋವಿಯೆಟ್ ವಿಜಯದ ನಂತರ ಇನ್ನೂ ಕಾದರೆ, ಸೋವಿಯೆಟ್ ಪಡೆಗಳು ಇಡೀ ಯುರೋಪನ್ನು ಕಮ್ಯೂನಿಸ್ಟ್ ನಾಯಕತ್ವದ ರಾಷ್ಟ್ರೀಯ ವಿಮೋಚನಾ ರಂಗದ ಜತೆಗೆ ವಿಮೋಚನೆ ಮಾಡಿಬಿಡುತ್ತವೆ. ಇಡೀ ಯುರೋಪ್ ಕಮ್ಯುನಿಸ್ಟ್ ಆಗುವ ಅಪಾಯವಿದೆ. ಹಾಗಾಗಿ 'ನಾರ್ಮಂಡಿ ಲ್ಯಾಂಡಿಂಗ್' ಯೋಜಿಸಲಾಯಿತು ಎಂಬ ವಾಸ್ತವವನ್ನೂ ಈ ಪಾಶ್ಚಿಮಾತ್ಯ ನಿರೂಪಣೆಗಳು ಮರೆಮಾಚುತ್ತವೆ.

ಎರಡನೇ ಮಹಾಯುದ್ಧದ ನಂತರದ ಶೀತ ಸಮರದ ಅವಧಿಯಲ್ಲಿ ಇನ್ನೊಂದು ರೀತಿಯ ಹುಸಿ ನಿರೂಪಣೆಯನ್ನೂ ಪಾಶ್ಚಿಮಾತ್ಯ ಸರಕಾರಗಳು ಪ್ರಚಾರ ಮಾಡುತ್ತಿವೆ. ಫ್ಯಾಸಿಸಂ ಮತ್ತು ಕಮ್ಯುನಿಸಂ ಗಳನ್ನು ಸೈದ್ಧಾಂತಿಕವಾಗಿ ಒಂದೇ ಎಂಬ ಅಪಪ್ರಚಾರವನ್ನು ವ್ಯವಸ್ಥಿತವಾಗಿ ಮಾಡಲಾಗುತ್ತಿದೆ. ಸೋವಿಯೆಟ್ ಒಕ್ಕೂಟದ ಪತನದ ನಂತರವಂತೂ ಹಲವು ಯುರೋಪಿಯನ್ ದೇಶಗಳಲ್ಲಿ ಫ್ಯಾಸಿಸಂ ಮತ್ತು ಅದರ ಪ್ರತೀಕಗಳು, ಪ್ರಚಾರದ ಮೇಲೆ ಇದ್ದ ನಿಷೇಧವನ್ನು ಕಮ್ಯುನಿಸಂಗೆ ವಿಸ್ತರಿಸಲಾಗಿದೆ. ಸಮಾಜವಾದಿ ಸರಕಾರಗಳ ಪತನದ ನಂತರ ಪೂರ್ವ ಯುರೋಪಿನಲ್ಲಿ ನಡೆದ ಯುಎಸ್ ಪ್ರಾಯೋಜಿತ 'ಬಣ್ಣದ ಕ್ರಾಂತಿ'ಗಳಲ್ಲಿ ಹಲವು ಮಾಜಿ ಫ್ಯಾಸಿಸ್ಟ್ ಸಂಘಟನೆಗಳು, ಶಕ್ತಿಗಳು, ವ್ಯಕ್ತಿಗಳನ್ನು ಬಳಸಿಕೊಳ್ಳಲಾಯಿತು.

ಈಗ ಯುರೋಪಿನಲ್ಲಿ ಉಂಟಾಗಿರುವ ಆರ್ಥಿಕ ರಾಜಕೀಯ ಬಿಕ್ಕಟ್ಟಿನ ಫಲವಾಗಿ ಮತ್ತೆ ಕಮ್ಯೂನಿಸ್ಟ್ ನಾಯಕತ್ವದ ಎಡ ಪ್ರಗತಿಪರ ರಾಜಕೀಯ ಶಕ್ತಿಗಳು ಬಲಗೊಳ್ಳದಂತೆ, ಅಲ್ಲಿನ ಆಳುವ ವರ್ಗಗಳು, ಅದರ ಪ್ರಭುತ್ವ ಮತ್ತು ರಾಜಕೀಯ ಪಕ್ಷಗಳು ನವ–ಫ್ಯಾಸಿಸ್ಟ್ ಪಕ್ಷಗಳಿಗೆ ಪರೋಕ್ಷ ಬೆಂಬಲ ನೀಡುತ್ತಿವೆ. ಫ್ರಾನ್ಸಿನ ಇತ್ತೀಚಿನ ಚುನಾವಣೆಗಳ ನಂತರ ಇದು ಸ್ಪಷ್ಟವಾಗಿ ಕಂಡುಬಂದಿದೆ. ಆಸ್ಟ್ರಿಯ, ಇಟಲಿಗಳಲ್ಲಿ ನವ–ಫ್ಯಾಸಿಸ್ಟ್ ಪಕ್ಷಗಳು ಅಧಿಕಾರ ಹಿಡಿದಿವೆ. ಜರ್ಮನಿಯಲ್ಲಿ ಅತಿ ದೊಡ್ಡ ಪಕ್ಷವಾಗಿ ಹೊಮ್ಮಿದೆ. ಟ್ರಂಪ್ ನಾಯಕತ್ವದ ರಿಪಬ್ಲಿಕನ್ನರು ಜರ್ಮನಿ, ಇಂಗ್ಲೆಂಡ್, ಇಟಲಿ ಮುಂತಾದ ನವ–ಫ್ಯಾಸಿಸ್ಟ್ ಪಕ್ಷಗಳನ್ನು ಈಗಾಗಲೇ ಬಹಿರಂಗವಾಗಿ ಬೆಂಬಲಿಸಿದ್ದಾರೆ. ಟ್ರಂಪ್ ಉದ್ಘಾಟನಾ ಸಮಾರಂಭದಲ್ಲಿ ಎಲೊನ್ ಮಸ್ಕ್ ಮತ್ತು ಉಪಾಧ್ಯಕ್ಷ ವಾನ್ಸ್ ನಾಜಿ ಸೆಲ್ಯೂಟ್‌ಗಳನ್ನು ಸಹ ಹೊಡೆದರು.

ಈ ಹಿನ್ನೆಲೆಯಲ್ಲಿ ಮಾಸ್ಕೋದಲ್ಲಿ ನಡೆದ ಈ ವರ್ಷದ ಮೇ 9ರ 'ಫ್ಯಾಸಿಸಂ–ವಿರುದ್ಧ ವಿಜಯ' ಸಂಭ್ರಮಾಚರಣೆ ಮಹತ್ವದ್ದಾಗಿತ್ತು. ಒಂದು ಕಡೆ ಯುರೋಪಿನ ನಾಯಕರು ಈ ಸಂಭ್ರಮಾಚರಣೆಯನ್ನು ಬಹಿಷ್ಕರಿಸಿದರು. ಈ ಬಹಿಷ್ಕಾರ ಲೆಕ್ಕಿಸದೆ ಭಾಗವಹಿಸಿದ ಸ್ಲೊವಾಕಿಯ ಮತ್ತು ಸರ್ಬಿಯ ಮುಖ್ಯಸ್ಥರು 'ಇತಿಹಾಸದ ತಪ್ಪು ಪಕ್ಷ'ದಲ್ಲಿದ್ದಾರೆ (ಆನ್ ದಿ ರಾಂಗ್ ಸೈಡ್ ಆಫ್ ಹಿಸ್ಟರಿ) ಎಂದು ಯುರೋಕೂಟ ವಕ್ತಾರರು ಟೀಕಿಸಿದರು. ಅವರ ವಿಮಾನಕ್ಕೆ ಕೆಲವು ಯುರೋಕೂಟದ ದೇಶಗಳು ಅನುಮತಿ ನಿರಾಕರಿಸಿದವು. ಅವರು ಸುತ್ತಿ ಬಳಸಿ ಮಾಸ್ಕೊಗೆ ಬರಬೇಕಾಯಿತು. ಇನ್ನೊಂದು ಕಡೆ ಜಾಗತಿಕ ದಕ್ಷಿಣ ಎನ್ನಬಹುದಾದ 29 ದೇಶಗಳ ಮುಖ್ಯಸ್ಥರು ಅಥವಾ ಪ್ರತಿನಿಧಿಗಳು ಭಾಗವಹಿಸಿದರು. ಚೀನಾ, ಬ್ರೆಜಿಲ್, ಉತ್ತರ ಕೊರಿಯಾ, ವೆನೆಜುವೇಲಾ, ವಿಯೇಟ್ನಾಂ, ಜಿಂಬಾಬ್ವೆ, ಈಜಿಪ್ಟ್, ಮಂಗೋಲಿಯ, ಮತ್ತು ಮಾಜಿ ಸೋವಿಯೆಟ್ ಒಕ್ಕೂಟದ ದೇಶಗಳ ಮುಖ್ಯಸ್ಥರು ಭಾಗವಹಿಸಿದ್ದರು. ಭಾರತ ಸೇರಿದಂತೆ ಏಷ್ಯಾ, ಆಫ್ರಿಕಾ, ಲ್ಯಾಟಿನ್ ಅಮೆರಿಕದ ಹಲವು ದೇಶಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ವಿಯೇಟ್ನಾಂ, ಲಾವೋಸ್, ಮ್ಯಾನ್ಮಾರ್, ಈಜಿಪ್ಟ್ ಮತ್ತು ಕೆಲವು ಮಾಜಿ ಸೋವಿಯೆಟ್ ದೇಶಗಳು ಸೇರಿದಂತೆ 13 ದೇಶಗಳ ಸೇನಾ ತುಕಡಿಗಳು ಮಿಲಿಟರಿ ಪೆರೇಡ್‌ನಲ್ಲಿ ಭಾಗವಹಿಸಿದ್ದು ವಿಶೇಷವಾಗಿತ್ತು. 'ಫ್ಯಾಸಿಸಂ–ವಿರುದ್ಧ ವಿಜಯ' ಆಚರಣೆಯಲ್ಲಿ ಪಾಶ್ಚಿಮಾತ್ಯ ದೇಶಗಳು ಬಹುಶಃ 'ಇತಿಹಾಸದ ತಪ್ಪು ಪಕ್ಷ'ದಲ್ಲಿ ಇರುವಂತೆ ಕಾಣುತ್ತದೆ.



ವಿಯೇಟ್ನಾಂ ಪಡೆಗಳು ಮೊದಲ ಬಾರಿಗೆ ಮಾಸ್ಕೊ ಫ್ಯಾಸಿಸ್ಟ್ ವಿರುದ್ಧ ವಿಜಯದ ವಾರ್ಷಿಕೋತ್ಸವದ ಮಿಲಿಟರಿ ಪರೇಡ್‌ನಲ್ಲಿ ಪಾಲುಗೊಂಡವು

ಅಸಂಬದ್ಧ ನಿಯಮದ ಮೇಲೆ ನಿಂತಿರುವ......

ಪುಟ 13 ರಿಂದ

ಬೇಡಿಕೆ ನಿರ್ಬಂಧವನ್ನು ಎದುರಿಸುವುದಿಲ್ಲ ಎಂದು ಊಹಿಸಿಕೊಂಡವು ಮತ್ತು ತಮ್ಮ ರಫ್ತುಗಳನ್ನು ಹೆಚ್ಚಿಸಿದವು ಕೂಡ. ಈ ವಿದ್ಯಮಾನವನ್ನೇನೋ ಅರ್ಥಮಾಡಿಕೊಳ್ಳಬಹುದು. ಆದರೆ, 'ರಫ್ತು–ಪ್ರಧಾನ ಬೆಳವಣಿಗೆ'ಯ ನವ–ಉದಾರವಾದಿ ಕಾರ್ಯತಂತ್ರವನ್ನು, ಪ್ರತಿಯೊಂದು ದೇಶವೂ ಒಂದು 'ಸಣ್ಣ ದೇಶ'ದಂತೆ ಅಳವಡಿಸಿಕೊಳ್ಳಬಹುದು ಎಂಬ ಮುಚ್ಚುಮರೆಯ ಮೂಲಕ, ಎಲ್ಲ ದೇಶಗಳಿಗೂ ಮಾರಾಟ ಮಾಡಲಾಯಿತು; ಇದಂತೂ ಪಕ್ಕಾ ಅಸಂಬದ್ಧ ಮಾತಾಗಿತ್ತು. ಇದು, ಒಟ್ಟು ಕುಟುಂಬದ ಪ್ರತಿಯೊಬ್ಬರೂ ಕುಟುಂಬದ ಒಟ್ಟು ಆಸ್ತಿಯು ತಮ್ಮದೇ ಎಂದು ಭಾವಿಸುವ ರೀತಿಯ ತಪ್ಪು ಕಲ್ಪನೆಯ ಪ್ರಕರಣವೇ ಸರಿ ಮತ್ತು ಇದು 'ಸೇ' ನಿಯಮದ ಹಿಂಬಾಗಿಲು ಪ್ರವೇಶವೂ ಹೌದು.

ಏಷ್ಯಾದ ಈ ನಾಲ್ಕು 'ದೇಶಗಳ' ಯಶಸ್ಸಿನ ನಂತರ ಚೀನಾ ಮತ್ತು ಆಗ್ನೇಯ ಏಷ್ಯಾದಲ್ಲಿ ಅದ್ಭುತ ಬೆಳವಣಿಗೆಯ ಯಶಸ್ಸುಗಳು ಕಂಡುಬಂದವು; ನಿಜ, ಅವು ನವ–ಉದಾರವಾದಿ ಕಾರ್ಯತಂತ್ರದ ಅಥವಾ 'ರಫ್ತು–ಪ್ರಧಾನ ಬೆಳವಣಿಗೆ'ಯ ಪಕ್ಕಾ ಮತ್ತು ಸರಳ ಉದಾಹರಣೆಗಳಲ್ಲ. ಈ ದೇಶಗಳು ರಫ್ತಿನಲ್ಲಿ ಯಶಸ್ಸು ಪಡೆದಿದ್ದರೆ, ಅದಕ್ಕೆ ಬಹುಮಟ್ಟಿಗೆ ಪಶ್ಚಿಮದ ಮುಂದುವರೆದ ದೇಶಗಳ ಬಂಡವಾಳಗಾರರು ತಮ್ಮ ಮುಂದುವರೆದ ಪಾಶ್ಚಿಮಾತ್ಯ ಮಾರುಕಟ್ಟೆಗಾಗಿ ಉತ್ಪಾದಿಸಲು ತಮ್ಮ ಕಾರ್ಖಾನೆಗಳನ್ನು ಈ ದೇಶಗಳಿಗೆ ಸ್ಥಳಾಂತರಿಸುವ ಮಾರ್ಗವನ್ನು ಆಯ್ಕೆ ಮಾಡಿಕೊಂಡದ್ದು ಕಾರಣ. ವಿಷಯವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ಈ ದೇಶಗಳ ಯಶಸ್ಸಿನ ಹಿಂದೆ ಮುಂದುವರೆದ ಬಂಡವಾಳಶಾಹಿ ಅರ್ಥವ್ಯವಸ್ಥೆಗಳ ಬೆಳವಣಿಗೆಯ ನಿಧಾನಗತಿ ಇತ್ತು; ನಿಜ ಇದು ಮುಂದುವರೆದ ದೇಶಗಳ ಬಂಡವಾಳಕ್ಕೆ ಅನ್ವಯಿಸುವುದಿಲ್ಲ. ಇನ್ನು, ಮೂರನೇ ಜಗತ್ತಿನ ಉಳಿದ ದೇಶಗಳು ಈ ಓಟದಲ್ಲಿ ಹೊರಗುಳಿದವು ಎಂಬುದು ಬೇರೇ ಮಾತು. ಅದೇನೇ ಇರಲಿ, ಇದು ದೇಶ ದೇಶಗಳ ನಡುವಿನ ಸ್ಪರ್ಧೆಯಾಗಿತ್ತು ಎಂಬುದಂತೂ ಹೌದು.

ಸೇ ನಿಯಮ ಸರಿಯಾಗಿದೆ ಎಂದು ಭಾವಿಸಿಕೊಂಡ 'ರಫ್ತು–ಪ್ರಧಾನ ಬೆಳವಣಿಗೆ' ಕಾರ್ಯತಂತ್ರವು ವಾಸ್ತವವಾಗಿ ದೇಶಗಳನ್ನು, ಅದರಲ್ಲೂ ವಿಶೇಷವಾಗಿ ಮೂರನೇ ಜಗತ್ತಿನ ದೇಶಗಳನ್ನು ಪರಸ್ಪರರ ವಿರುದ್ಧ ಎತ್ತಿಕಟ್ಟಿತು; ಉದಾಹರಣೆಗೆ, ಭಾರತವು ಬಾಂಗ್ಲಾದೇಶಕ್ಕೆ ನಷ್ಟವನ್ನು ಉಂಟುಮಾಡುವ ಮೂಲಕ ಮಾತ್ರವೇ ಹೆಚ್ಚು ಹೆಚ್ಚು ಉಡುಪುಗಳನ್ನು ರಫ್ತು ಮಾಡಬಹುದು, ಇತ್ಯಾದಿ. ಅಂದರೆ, ಒಂದು ದೇಶವು ತನ್ನ ದುಡಿಯುವ ಜನರಿಗೆ ಕೆಳ ಮಟ್ಟದ ಕೂಲಿಯನ್ನು ಕೊಡುವ ಮೂಲಕ, ಅವರಿಂದ ಅಧಿಕವಾಗಿ ಕೆಲಸ ತೆಗೆಯುವ ಮೂಲಕ ಮತ್ತು ಅವರಿಗೆ ನೀಡಬೇಕಾದ ಕಾನೂನುಬದ್ಧ ಪಾವತಿಗಳನ್ನು ತಡೆಹಿಡಿಯುವ ವಂಚನೆಯ ಮೂಲಕ ಅವರನ್ನು ಹೆಚ್ಚು ಹಿಂಡಿ, ತನ್ನ ರಫ್ತು ಧಾವಂತದಲ್ಲಿ ಹೆಚ್ಚು ಯಶಸ್ವಿಯಾಗುತ್ತದೆ. ಹೀಗೆ ಅಸಮ ಬೆಳವಣಿಗೆಯನ್ನು ಅಥವಾ ಬಡತನವನ್ನು ಉಂಟುಮಾಡುವ ಬೆಳವಣಿಗೆ ಎಂಬುದು 'ರಫ್ತು–ಪ್ರಧಾನ ಬೆಳವಣಿಗೆ'ಯ ತರ್ಕದಲ್ಲಿಯೇ ಅಡಕವಾಗಿದೆ.

ಹೊರಬರುವ ಏಕೈಕ ಮಾರ್ಗ

ಆದರೆ ಬೆಳವಣಿಗೆಯನ್ನು ಅಸಮಗೊಳಿಸುವುದು ಎಂದರೆ ವಿಶ್ವ ಅರ್ಥವ್ಯವಸ್ಥೆಯಲ್ಲಿ ಬೇಡಿಕೆಯ ಬೆಳವಣಿಗೆಯ ದರವು ಅಂತಿಮವಾಗಿ ನಿಧಾನಗೊಳ್ಳುತ್ತದೆ. ಇದರಿಂದ ರಫ್ತು–ಪ್ರಧಾನ ಬೆಳವಣಿಗೆಯ ಕಾರ್ಯತಂತ್ರವು ಒಂದು ಬಿಕ್ಕಟ್ಟಿಗೆ ಸಿಕ್ಕಿಕೊಳ್ಳುತ್ತದೆ. ಕೊರೊನಾ ಹರಡುವ ಮುನ್ನವೇ, ವಿಶ್ವ ಅರ್ಥವ್ಯವಸ್ಥೆಯ ಒಟ್ಟಾರೆ ಜಿಡಿಪಿಯ ದಶಕದ ಬೆಳವಣಿಗೆಯ ದರವು ಎರಡನೇ ಮಹಾಯುದ್ಧಾನಂತರದ ಎಲ್ಲ ದಶಕಗಳಿಗಿಂತಲೂ ಅತಿ ಕೆಳ ಮಟ್ಟದಲ್ಲಿತ್ತು; ಮತ್ತು ಸಾಂಕ್ರಾಮಿಕದ ನಂತರ ಈ ಬೆಳವಣಿಗೆಯ ದರವು ಇನ್ನೂ ಹೆಚ್ಚು ನಿಧಾನಗೊಂಡಿದೆ.

ಈ ಕಾರ್ಯತಂತ್ರವು ನೈತಿಕವಾಗಿ ಅಸಂಗತವಾಗಿರುವುದರ ಜೊತೆಗೆ, ದಮನಿತ ಜನರು ಪರಸ್ಪರರನ್ನು ಹಾಳುಗೆಡವುವ ಸ್ಪರ್ಧೆಯನ್ನು ಆದರ್ಶೀಕರಿಸುತ್ತದೆ. ಇದರ ಪರಿಣಾಮವೆಂದರೆ, ವಿಶ್ವ ಅರ್ಥವ್ಯವಸ್ಥೆಯನ್ನು ಮುಂದೆ ಹೋಗಲಾರದಂತಹ ಒಂದು ಸ್ಥಿತಿಗೆ ತಂದಿದೆ. ಮೂರನೇ ಜಗತ್ತಿನ ದೇಶಗಳ ಅರ್ಥವ್ಯವಸ್ಥೆಗಳಿಗೆ ಈ ಬಿಕ್ಕಟ್ಟಿನಿಂದ ಹೊರಬರುವ ಏಕೈಕ ಮಾರ್ಗವೆಂದರೆ ದೇಶೀಯ ಮಾರುಕಟ್ಟೆಯನ್ನು ವಿಸ್ತರಿಸುವುದು. ಅದಕ್ಕಾಗಿ ಬೃಹತ್ ವೆಚ್ಚಗಳನ್ನು ಕೈಗೊಳ್ಳುವಂತೆ ಪ್ರಭುತ್ವವನ್ನು ಕ್ರಿಯಾಶೀಲಗೊಳಿಸಬೇಕಾಗುತ್ತದೆ. ಆಂತರಿಕ ಮಾರುಕಟ್ಟೆಯನ್ನು ವಿಸ್ತರಿಸಲು ಕೃಷಿ ಬೆಳವಣಿಗೆಯ ದರವನ್ನು ಹೆಚ್ಚಿಸಬೇಕಾಗುತ್ತದೆ (ಇದು ರೈತರು ಮತ್ತು ಕೃಷಿ ಕಾರ್ಮಿಕರ ಕೈಯಲ್ಲಿ ಹೆಚ್ಚಿನ ಆದಾಯವನ್ನು ಇರಿಸುತ್ತದೆ), ಕನಿಷ್ಠ ವೇತನದ ಮಟ್ಟವನ್ನು ಹೆಚ್ಚಿಸಬೇಕಾಗುತ್ತದೆ (ಇದು ಕಾರ್ಮಿಕರ ಕೈಯಲ್ಲಿ ಹೆಚ್ಚಿನ ಆದಾಯವನ್ನು ಇರಿಸುತ್ತದೆ) ಮತ್ತು ಕಲ್ಯಾಣ ಪ್ರಭುತ್ವ ಕ್ರಮಗಳನ್ನು ಹೆಚ್ಚಿಸಬೇಕಾಗುತ್ತದೆ (ಇದು ಇಡೀ ದುಡಿಯುವ ಜನಸಮೂಹಗಳ ಜೀವನ ಮಟ್ಟವನ್ನು ಸುಧಾರಿಸುತ್ತದೆ). ಈ ಉದ್ದೇಶಕ್ಕಾಗಿ ಬೇಕಾಗುವ ಹಣವನ್ನು ಸಂಪತ್ತು ತೆರಿಗೆ ಮತ್ತು ಉತ್ತರಾಧಿಕಾರ ತೆರಿಗೆಗಳ ಮೂಲಕ ಒದಗಿಸಿಕೊಳ್ಳುವ ಅಗತ್ಯವಿದೆ.

ಈ ಎಲ್ಲವನ್ನೂ ಕೈಗೊಳ್ಳಲು ಬಂಡವಾಳದ ಹರಿವಿನ ಮೇಲೆ, ವಿಶೇಷವಾಗಿ ಹಣಕಾಸಿನ ಹೊರಹರಿವಿನ ಮೇಲೆ ನಿಯಂತ್ರಣವನ್ನು ಹೇರುವ ಅಗತ್ಯವಿರುತ್ತದೆ. ಅದಕ್ಕಾಗಿ ವಿದೇಶಗಳೊಂದಿಗಿನ ವ್ಯಾಪಾರಗಳನ್ನು ನಿಯಂತ್ರಿಸುವ ಅಗತ್ಯವಿರುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, 'ರಫ್ತು ಪ್ರಧಾನ ಬೆಳವಣಿಗೆ'ಯ ಕಾರ್ಯತಂತ್ರವನ್ನು ತೊರೆಯುವುದು ಮತ್ತು ಅದಕ್ಕಾಗಿ ಈಗಾಗಲೇ ಬಹಳಷ್ಟು ಹಾನಿ ಮಾಡಿರುವ 'ಸೇ' ನಿಯಮದ ಬಿಗಿ ಹಿಡಿತದಿಂದ ಹೊರಬರುವುದು ಅಗತ್ಯವಾಗುತ್ತದೆ.

ಅತಿ ದೊಡ್ಡ ಆರ್ಥಿಕತೆ ಎಂಬ ಢಾಂಬಿಕತೆ....

ಪುಟ 16 ರಿಂದ

2025 ರಲ್ಲಿ 2,878.45 ಡಾಲರ್ ಎಂದು ಅಂದಾಜಿಸಲಾಗಿದೆ. ಈ ಅಂಕಿ ಅಂಶವು ದೇಶದ ಒಟ್ಟು ಆರ್ಥಿಕ ಉತ್ಪಾದನೆ(ಜಿಡಿಪಿ)ಯನ್ನು ಒಟ್ಟು ಜನಸಂಖ್ಯೆಯಿಂದ ಭಾಗಿಸಿದಾಗ ಸಿಗುವ ಮೌಲ್ಯವನ್ನು ಪ್ರತಿನಿಧಿಸುತ್ತದೆ, ಇದು ಪ್ರತಿ ವ್ಯಕ್ತಿಯ ಸರಾಸರಿ ಆದಾಯದ ಸ್ನ್ಯಾಪ್‌ಶಾಟ್ ಅನ್ನು ನೀಡುತ್ತದೆ.

ತಲಾ ಜಿಡಿಪಿ ಕೂಡಾ ವಾಸ್ತವವಾಗಿ ಒಂದು ಮೈಂಡ್ ಗೇಮ್ ಅಲ್ಲದೆ ಬೇರೇನೂ ಅಲ್ಲ. ಕೆಲವೇ ಜನರ ಕೈಯಲ್ಲಿ ಹೆಚ್ಚಿನ ಸಂಪತ್ತು ಸಂಗ್ರಹವಾಗುತ್ತಿದೆ ಎಂದರೆ, ಆರ್ಥಿಕ ಅಸಮಾನತೆ ಹೆಚ್ಚುತ್ತಿದೆ ಎಂದರ್ಥ. ಮೋದಿ ಆಳ್ವಿಕೆಯಲ್ಲಿ ಅದು ಸ್ಪಷ್ಟವಾಗಿ ಕಾಣುತ್ತಿದೆ. ನಾಗಣ್ಣನ ಸಂಪತ್ತು ಒಂದು ರೂಪಾಯಿ, 50 ರೂಪಾಯಿ ಅಂಬಾನಿ ಮತ್ತು 48 ರೂಪಾಯಿ ಇರುವ ಅದಾನಿಯ ಸಂಪತ್ತನ್ನು ಸೇರಿಸಿ ಅದನ್ನು ಮೂರರಿಂದ ಭಾಗಿಸಿದರೆ, 33 ರೂಪಾಯಿ ನಾಗಣ್ಣನ ಸಂಪತ್ತು ಎಂದರೆ ನಗುತ್ತಾರೆ.

ನಮ್ಮ ತಲಾ ಆದಾಯ ಹತ್ತು ಸಾವಿರ ಡಾಲರ್‌ಗೆ ತಲುಪಬೇಕಾದರೆ, ಕನಿಷ್ಠ 30 ವರ್ಷಗಳ ಕಾಲ ಶ್ರಮಿಸಬೇಕು ಮತ್ತು ಅದಕ್ಕೆ ಅನುಕೂಲಕರವಾದ ಆರ್ಥಿಕ ಪರಿಸ್ಥಿತಿಗಳು ಇರಬೇಕು ಎಂದು ಅರ್ಥಶಾಸ್ತ್ರಜ್ಞ ಡಿ. ಮುತ್ತುಕೃಷ್ಣನ್ ಹೇಳುತ್ತಾರೆ. ಚೀನಾದ ತಲಾವಾರು ಜಿಡಿಪಿ 2025 ರಲ್ಲಿ 13,873 ಡಾಲರ್‌ಗಳು, ನಮ್ಮ ಪ್ರಸ್ತುತ 2,937 ಡಾಲರ್, ಮೊದಲ ಸ್ಥಾನದಲ್ಲಿರುವ ಮೊನಾಕೊ 2,56,581 ಡಾಲರ್ (2023 ವಿಶ್ವಬ್ಯಾಂಕ್ ಡೇಟಾ) ಅಥವಾ ಡಾಲರ್ ದೇವರ ನಾಡು ಎಂದು ಕರೆಯಲ್ಪಡುವ ಅಮೆರಿಕ 89,678 ಡಾಲರ್ (ಐಎಂಎಫ್ ಮಾಹಿತಿ 2025). ಆರಾಮ ಕುರ್ಚಿ ಗುರುಗಳು ಹೇಳುವಂತೆ, ಚೀನಾವನ್ನು 'ಜಯಿಸಲು' ಕೂಡ ಬಹಳ ಸಮಯ ತೆಗೆದುಕೊಳ್ಳುತ್ತದೆ ಎಂದು ಹೇಳಬೇಕಾಗಿಲ್ಲ,

"ಕಳೆದ ಹತ್ತು ವರ್ಷಗಳಲ್ಲಿ ಜಿಡಿಪಿಯನ್ನು ದ್ವಿಗುಣಗೊಳಿಸುವುದು ಕೇವಲ ಸಂಖ್ಯೆಗಳಲ್ಲ, 25 ಕೋಟಿ ಜನರನ್ನು ಬಡತನ ರೇಖೆಯಿಂದ ಮೇಲಕ್ಕೆತ್ತಿ ಹೊಸ ಮಧ್ಯಮ ವರ್ಗವನ್ನು ಸೃಷ್ಟಿಸಿದ್ದೇವೆ. ಅವರು ಹೊಸ ಜೀವನವನ್ನು ಪ್ರಾರಂಭಿಸಿದ್ದಾರೆ, ಸಕ್ರಿಯವಾಗಿ ಆರ್ಥಿಕತೆ ವೃದ್ಧಿಗೆ ಕೊಡುಗೆ ನೀಡುತ್ತಿದ್ದಾರೆ" ಎಂದು ಪ್ರಧಾನಿ ಮೋದಿ ಒಮ್ಮೆ ಹೇಳಿದ್ದರು. ಮತ್ತೊಂದೆಡೆ, ಕನಿಷ್ಠ ಆಹಾರಧಾನ್ಯಗಳನ್ನು ಖರೀದಿಸಲು ಸಾಧ್ಯವಾಗದ ಪರಿಸ್ಥಿತಿಯಲ್ಲಿರುವ 80 ಕೋಟಿ ಜನರಿಗೆ ಆಹಾರ ಭದ್ರತಾ ಯೋಜನೆಯಡಿಯಲ್ಲಿ ಉಚಿತವಾಗಿ ಗೋಧಿ, ಅಕ್ಕಿಯನ್ನು ನೀಡುತ್ತಿದ್ದೇವೆ, ಇನ್ನೂ ಕೆಲವು ವರ್ಷಗಳವರೆಗೆ ಅದನ್ನು ಮುಂದುವರಿಸುತ್ತೇವೆ, ಇದೊಂದು ಸಾಧನೆ ಎಂದು ಹೇಳಿಕೊಳ್ಳುತ್ತಾರೆ. ಜಾಗತಿಕ ಹಸಿವು ಸೂಚ್ಯಂಕದಲ್ಲಿ ಪ್ರಸ್ತುತ 127 ದೇಶಗಳಲ್ಲಿ ಭಾರತ 105 ನೇ ಸ್ಥಾನದಲ್ಲಿದೆ. ವಿಶ್ವದ ಬಡವರಲ್ಲಿ ಹೆಚ್ಚಿನ ಸಂಖ್ಯೆಯ ಜನರನ್ನು ಹೊಂದಿರುವ ನಾವು ನಾಲ್ಕನೇ ಅತಿದೊಡ್ಡ ಆರ್ಥಿಕತೆಯಾಗಲಿದ್ದೇವೆ.

ಹಂಚಿಕೆಯ ಸಮೃದ್ಧಿ ಇಲ್ಲದೆ ಜಿಡಿಪಿ ಬೆಳವಣಿಗೆ

ವಿಶ್ವ ಅಸಮಾನತೆ ವರದಿ 2022ರ ಪ್ರಕಾರ, ಭಾರತದ ಜನಸಂಖ್ಯೆಯ ತುತ್ತತುದಿಯ ಶೇ. ಒಂದರಷ್ಟು ಜನರು ದೇಶದ ಸಂಪತ್ತಿನ ಶೇ.40ಕ್ಕಿಂತ ಹೆಚ್ಚು ಸಂಪತ್ತನ್ನು ಹೊಂದಿದ್ದಾರೆ. ಆದರೆ ಕೆಳಗಿನ ಶೇ.50 ಜನರು ಕೇವಲ ಶೇ.3 ರಷ್ಟನ್ನು ಮಾತ್ರ ಹೊಂದಿದ್ದಾರೆ. ಆದಾಯದ ವಿಷಯದಲ್ಲಿ, ಮೇಲಿನ ಶೇ.10 ಜನರು ರಾಷ್ಟ್ರೀಯ ಆದಾಯದ ಶೇ.57 ಕ್ಕಿಂತ ಹೆಚ್ಚು ಗಳಿಸುತ್ತಾರೆ.

ಈ ಮಟ್ಟದ ಸಂಪತ್ತು ಕೇಂದ್ರೀಕರಣ ಎಂದರೆ ತಲಾ ಜಿಡಿಪಿ, ಮೇಲೆ ಹೇಳಿದಂತೆ, ಹಾಸ್ಯಾಸ್ಪದ ಅಥವ ದಾರಿತಪ್ಪಿಸುವ ಅಳತೆ ಆಗುತ್ತದೆ. ಭಾರತದ ತಲಾ ಜಿಡಿಪಿ ಸರಿಸುಮಾರು 2880 ಡಾಲರ್ ಗಳಷ್ಟಿದೆ, ಆದರೆ ಇದು ಸರಾಸರಿ. ನೀವು ಲೆಕ್ಕಾಚಾರದಿಂದ ಅಗ್ರ ಶೇ.1 ಗಳಿಸುವವರನ್ನು ತೆಗೆದುಹಾಕಿ ಲೆಕ್ಕ ಹಾಕಿದರೆ, ಸಂಖ್ಯೆ ನಾಟಕೀಯವಾಗಿ ಇಳಿಯುತ್ತದೆ.

ಉದಾಹರಣೆಗೆ, ಭಾರತದ ಜಿಡಿಪಿ ಸುಮಾರು 3.9 ಟ್ರಿಲಿಯನ್ ಡಾಲರ್ ಆಗಿದ್ದರೆ ಮತ್ತು ಅಗ್ರ ಶೇ.1 ಜನರು ಅದರ ಶೇ.40 ಅನ್ನು (ಅಂದರೆ, \$1.56 ಟ್ರಿಲಿಯನ್) ನಿಯಂತ್ರಿಸಿದರೆ, ಅದು ಉಳಿದ ಶೇ.99 ಜನರಿಗೆ (ಸುಮಾರು 140 ಕೋಟಿ ಜನರು) 2.34 ಟ್ರಿಲಿಯನ್ ಅನ್ನು ಉಳಿಸುತ್ತದೆ. ಇದರ ಪರಿಣಾಮವಾಗಿ ತಲಾ ಜಿಡಿಪಿ ಸುಮಾರು 1,670 ಡಾಲರ್‌ಗೆ ಇಳಿಯುತ್ತದೆ. ಇದು ಅಧಿಕೃತ ಸರಾಸರಿಗಿಂತ ಬಹಳ ದೂರದಲ್ಲಿದೆ. ರಾಷ್ಟ್ರೀಯ ಸಂಪತ್ತಿನ ಸುಮಾರು ಶೇ.62 ಅನ್ನು ನಿಯಂತ್ರಿಸುವ ಅಗ್ರ ಶೇ.5 ಜನರನ್ನು ನೀವು ತೆಗೆದುಹಾಕಿದರೆ, ಸರಾಸರಿ ತಲಾವಾರು ಸುಮಾರು 1100 ಡಾಲರ್‌ಗೆ ಇಳಿಯುತ್ತದೆ. ಅದು ಇಡೀ ವರ್ಷಕ್ಕೆ ಒಂದು ಲಕ್ಷ ರೂಪಾಯಿಗಳಿಗಿಂತ ಕಡಿಮೆ. ಸರ್ಕಾರವು 80 ಕೋಟಿ ಭಾರತೀಯರಿಗೆ ಉಚಿತ ಪಡಿತರವನ್ನು ನೀಡುತ್ತಿರುವುದು ಇದನ್ನು ಸಮರ್ಥಿಸುತ್ತದೆ.

ಅದೇ ಸಮಯದಲ್ಲಿ, ಶತಕೋಟ್ಯಾಧಿಪತಿಗಳು ಅಭಿವೃದ್ಧಿ ಹೊಂದುತ್ತಿದ್ದಾರೆ. ಗೌತಮ್ ಅದಾನಿಯ ನಿವ್ವಳ ಮೌಲ್ಯವು 2020ರಲ್ಲಿ 9 ಬಿಲಿಯನ್ ಡಾಲರ್ ನಿಂದ 2022ರ ವೇಳೆಗೆ 100 ಬಿಲಿಯನ್ ಡಾಲರ್‌ಗೆ ಜಿಗಿದಿದೆ. ಷೇರು ಮಾರುಕಟ್ಟೆಗಳು ಗಗನಕ್ಕೇರುತ್ತವೆ, ಆದರೆ ಶೇ.90 ಕ್ಕಿಂತ ಹೆಚ್ಚು ಭಾರತೀಯರ ಮಟ್ಟಿಗೆ ಷೇರುಗಳಿಗೆ ಯಾವುದೇ ಮಾನ್ಯತೆ ಇಲ್ಲ.

ಹೆಚ್ಚಿನ ಜನಸಂಖ್ಯೆ ಅನೌಪಚಾರಿಕ ವಲಯದಲ್ಲಿ

ವಾಸ್ತವವಾಗಿ ಬಹುಪಾಲು ದುಡಿಯುವ ಜನರು ದುಡಿಯುತ್ತಿರುವುದು ಅನೌಪಚಾರಿಕ ವಲಯದಲ್ಲಿ. ಇವರಿಗೆ ಸಾಮಾಜಿಕ ರಕ್ಷಣೆ ಕಡಿಮೆ ಅಥವಾ ಯಾವುದೇ ಸಾಮಾಜಿಕ ರಕ್ಷಣೆ ಇಲ್ಲ. ಇದನ್ನು ಪರಿಗಣಿಸಿ. ಭಾರತೀಯ ಶ್ರಮಿಕ ಪಡೆಯ ಸುಮಾರು ಶೇ.50 ಕೃಷಿಯಲ್ಲಿ ದುಡಿಯುತ್ತಿದ್ದಾರೆ. ಆದರೆ, ಈ ವಲಯವು ಜಿಡಿಪಿಗೆ ಕೇವಲ ಶೇ.18ರಷ್ಟು ಕೊಡುಗೆ ನೀಡುತ್ತದೆ. ಮತ್ತೊಂದೆಡೆ, ಐಟಿ, ಹಣಕಾಸು ಮತ್ತು ರಿಯಲ್ ಎಸ್ಟೇಟ್ ನಂತಹ ಬಂಡವಾಳ–ತೀವ್ರ ಸೇವಾ ವಲಯಗಳು ಜಿಡಿಪಿಗೆ ಶೇ.50ಕ್ಕಿಂತ ಹೆಚ್ಚು ಕೊಡುಗೆ ನೀಡುತ್ತವೆ. ಆದರೆ, ಇವು ಕೇವಲ ಶೇ.30 ರಷ್ಟು ಉದ್ಯೋಗಿಗಳನ್ನು ಮಾತ್ರ ನೇಮಿಸಿಕೊಳ್ಳುತ್ತವೆ ಮತ್ತು ಹೆಚ್ಚಾಗಿ ನಗರ ಪ್ರದೇಶಗಳಲ್ಲಿ ಕೇಂದ್ರೀಕೃತವಾಗಿರುತ್ತವೆ.

ಇಲ್ಲಿಯೂ ಸಹ, ವೇತನಗಳು ವರ್ಷಗಳಿಂದ ನಿಶ್ಚಲವಾಗಿವೆ, ಮತ್ತು ಆದರೆ, ದೊಡ್ಡ ಉದ್ಯಮಿಗಳ ಲಾಭಾಂಶಗಳು ಏರುತ್ತಲೇ ಇವೆ. ಮಧ್ಯಮ ವರ್ಗವನ್ನು ಅದರ ಹಿಂದಿನ ಬೆಳವಣಿಗೆಯ ಪಥದಿಂದ ದೂರವಿಡಲಾಗಿದೆ. ಭಾರತದ ಓರೆಯಾದ ಯಶಸ್ಸಿನ ಕಥೆಯಲ್ಲಿ ಮಧ್ಯಮ ವರ್ಗವು ಕೆಳಕ್ಕೆ ಇಳಿಯುವ ಅಪಾಯದಲ್ಲಿದೆ. ಮೂಲಭೂತ ಪೋಷಣೆ, ವಸತಿ, ಶಿಕ್ಷಣ ಮತ್ತು ಆರೋಗ್ಯ ರಕ್ಷಣೆ ಇಲ್ಲದೆ ಬದುಕುತ್ತಿರುವ 80 ಕೋಟಿ ಭಾರತೀಯರಿಗೆ ಜಿಡಿಪಿ ಶ್ರೇಯಾಂಕಗಳು ಅಪ್ರಸ್ತುತವಾಗುತ್ತವೆ. ತೀವ್ರ ಅಸಮಾನತೆಯು ಆಳುವವರನ್ನು ಎಚ್ಚರಿಸಬೇಕು. ಏಕೆಂದರೆ, ದೇಶಗಳು ಶ್ರೀಮಂತರಾಗುತ್ತಿವೆ. ಆದರೆ ಅವುಗಳ ಜನರು ಶ್ರೀಮಂತರಾಗುತ್ತಿಲ್ಲ, ಬದಲಾಗಿ ದಾರಿದ್ರ್ಯಕ್ಕೆ ಇಳಿಯುತ್ತಿದ್ದಾರೆ.



"ಅಪ್ಪಾ, ನಾವು ಈ ಮನೆಯಲ್ಲಿ ಯಾವಾಗದಿಂದ ಇದ್ದೇವೆ?"

"ನಮ್ಮ ಆರ್ಥಿಕತೆ 10ನೇ ರ್‍ಯಾಂಕಿನಲ್ಲಿ ಇದ್ದಾಗಿನಿಂದ...."

ವ್ಯಂಗ್ಯಚಿತ್ರ: ರಾಕೇಶ್‌ರಂಜನ್, ಮೊಲಿಟಿಕ್ಸ್.ಇನ್

NEW No. MAG(3)/NPP/205/2021-2022
JANASHAKTHI KANNADA VARA PATRIKE June 2-8, 2025 Price: Rs. 10/- Date of Publication: 30 May 2025 RNI No. KARKAN/2006/17926 Posted on 03-06-2025
Posted at BG PSO, BG - 560026 **Posted at Periodical Rate -** Rs. 2

ಭಾರತ: ಅತಿ ಹೆಚ್ಚು ಬಡವರು, ಅತಿ ದೊಡ್ಡ ಆರ್ಥಿಕತೆ ಎಂಬ ಢಾಂಬಿಕತೆ

“ಭಾರತ ಜಪಾನ್ ದೇಶವನ್ನು ಹಿಂದಿಕ್ಕಿ, ವಿಶ್ವದ ನಾಲ್ಕನೇ ಅತಿದೊಡ್ಡ ಆರ್ಥಿಕತೆಯಾಗಿದೆ, ಇನ್ನು ಎರಡು ಮೂರು ವರ್ಷಗಳಲ್ಲಿ ಜರ್ಮನಿಯನ್ನು ಹಿಂದಿಕ್ಕಿ 3ನೇ ಸ್ಥಾನಕ್ಕೆ ಏರಲಿದೆ” ಎಂಬ ಅಬ್ಬರದ ಪ್ರಚಾರ ನಡೆದಿದೆ. ಇದು ಮೋದಿ ಸರ್ಕಾರದ ದೊಡ್ಡ ಸಾಧನೆ ಎಂದು ಬಿಜೆಪಿ ಮತ್ತು ಸಂಘಪರಿವಾರದವರು ಹೇಳಿದರೆ, ಮುಖ್ಯಮಂತ್ರಿ ಸಿದ್ದರಾಮಯ್ಯನವರೂ ಕೂಡಾ “ನೆಹರೂರವರು ಹಾಕಿದ ಅಡಿಪಾಯಗಳಿಂದ ಭಾರತ ವಿಶ್ವದ 4ನೇ ದೊಡ್ಡ ಆರ್ಥಿಕ ಶಕ್ತಿಯಾಗಿದೆ.” ಎಂದು ಶ್ಲಾಘಿಸಿದ್ದಾರೆ. ವಿಶ್ವದ ಬಡವರಲ್ಲಿ ಹೆಚ್ಚಿನ ಸಂಖ್ಯೆಯ ಜನರನ್ನು ಹೊಂದಿರುವ ನಾವು ನಾಲ್ಕನೇ ಅತಿದೊಡ್ಡ ಆರ್ಥಿಕತೆಯಾಗಲಿದ್ದೇವೆ. ಇದೇನಿದು ಲೆಕ್ಕಾಚಾರ?

ಸಿ.ಸಿದ್ದಯ್ಯ



ಹಂಗಾದ್ರೆ, ನಮ್ಮ ಉಚಿತ ರೇಷನ್ ಇನ್ನು ಬುಲೆಟ್ ರೈಲಿನಲ್ಲಿ ಬರಲಿದೆಯೇ?
ವ್ಯಂಗ್ಯಚಿತ್ರ: ಸಂದೀಪ ಅಧ್ವರ್ಯು, ಟೈಂಸ್ ಆಫ್ ಇಂಡಿಯ

ಇತ್ತೀಚೆಗೆ ಒಂದು ಸುದ್ದಿ ವ್ಯಾಪಕವಾಗಿ ಚರ್ಚೆಯಾಗುತ್ತಿದೆ. ‘ಭಾರತ ಜಪಾನನ್ನು ಹಿಂದಿಕ್ಕಿ ವಿಶ್ವದ ನಾಲ್ಕನೇ ಅತಿದೊಡ್ಡ ಆರ್ಥಿಕತೆಯಾಗಿದೆ. ಇನ್ನು ಎರಡು ಮೂರು ವರ್ಷಗಳಲ್ಲಿ ಜರ್ಮನಿಯನ್ನು ಹಿಂದಿಕ್ಕಿ 3ನೇ ಸ್ಥಾನಕ್ಕೆ ಏರಲಿದೆ” ಎಂಬುದು ಆ ಸುದ್ದಿ. ಅರೇ, ಇದೇನಿದು? 80 ಕೋಟಿ ಜನರು ಪಡಿತರದ ಮೂಲಕ ಉಚಿತ ಆಹಾರ ಧಾನ್ಯಗಳನ್ನು ಪಡೆಯುತ್ತಿರುವ ಭಾರತ, ಜಪಾನ್ ದೇಶವನ್ನು ಆರ್ಥಿಕವಾಗಿ ಹಿಂದಿಕ್ಕಲು ಹೇಗೆ ಸಾಧ್ಯ? ಎಂಬ ಪ್ರಶ್ನೆಗಳೂ ಮೂಡುತ್ತವೆ.

ನೀತಿ ಆಯೋಗದ ಸಿಇಒ ಹೇಳಿದ್ದೇನು?

“ನಾನು ಹೇಳಿದಂತೆ, ನಮ್ಮದು ನಾಲ್ಕನೇ ಅತಿದೊಡ್ಡ ಆರ್ಥಿಕತೆ, ನಮ್ಮದು ನಾಲ್ಕು ಲಕ್ಷ ಕೋಟಿಗಳ ಆರ್ಥಿಕತೆ, ಇದು ನನ್ನ ದತ್ತಾಂಶವಲ್ಲ. ಐಎಂಎಫ್‌ನ ದತ್ತಾಂಶ. ಭಾರತವು ಜಪಾನ್‌ಗಿಂತ ದೊಡ್ಡ ಆರ್ಥಿಕತೆಯಾಗಿದೆ” ಎಂದು ನೀತಿ ಆಯೋಗದ ಆಡಳಿತ ಮಂಡಳಿಯ ಹತ್ತನೇ ಸಭೆಯ ನಂತರ ಪತ್ರಿಕಾಗೋಷ್ಠಿಯಲ್ಲಿ ನೀತಿ ಆಯೋಗದ ಸಿಇಒ ಬಿ.ವಿ.ಆರ್. ಸುಬ್ರಮಣ್ಯಂ ಘೋಷಿಸಿದರು. “ಪ್ರಸ್ತುತ ಅಮೆರಿಕ, ಚೀನಾ ಮತ್ತು ಜರ್ಮನಿ ಮಾತ್ರ ನಮ್ಮ ಮುಂದಿವೆ. ನಾವು ರೂಪಿಸಿದ ಯೋಜನೆಗಳೆಲ್ಲ ಕೈಗೂಡಿದರೆ, ಭಾರತವು ಮುಂದಿನ 2.5 ರಿಂದ 3 ವರ್ಷಗಳಲ್ಲಿ ಜರ್ಮನಿಯನ್ನು ಹಿಂದಿಕ್ಕಿ ಮೂರನೇ ಸ್ಥಾನವನ್ನು ಪಡೆಯುವ ಸಾಧ್ಯತೆಯಿದೆ” ಎಂದೂ ಅವರು ಹೇಳಿದರು.

ಈ ರೀತಿ ಹೇಳುವಾಗ ಮಾಧ್ಯಮಗಳು ಒಂದು ವಿಷಯವನ್ನು ಅಷ್ಟಾಗಿ ಚರ್ಚೆಗೆ ತೆಗೆದುಕೊಳ್ಳದೇ ಇರುವುದನ್ನು ಗಮನಿಸಬೇಕು. ಅದೆಂದರೆ, “ಆಸ್ತಿ ಹಣಗಳಿಕೆಯ (Asset monetization) ಉಪಕ್ರಮಗಳ ಹೊಸ ಅಲೆಯು ಪೈಪ್‌ಲೈನ್ ನಲ್ಲಿದೆ ಎಂದು ಸುಬ್ರಮಣ್ಯಂ ಬಹಿರಂಗಪಡಿಸಿದರು. ಸರ್ಕಾರವು ತನ್ನ ಆಸ್ತಿ ಹಣಗಳಿಕೆಯ ಕಾರ್ಯಕ್ರಮದ ಎರಡನೇ ಸುತ್ತಿನ ಸಿದ್ಧತೆ ನಡೆಸುತ್ತಿದ್ದು, ಆಗಸ್ಟ್‌ನಲ್ಲಿ ಇದನ್ನು ಜಾರಿಗೆ ತರುವ ನಿರೀಕ್ಷೆಯಿದೆ” ಎಂದರು. ಇದರರ್ಥ, ಸಾರ್ವಜನಿಕ ಆಸ್ತಿಗಳನ್ನು ಖಾಸಗಿಯವರಿಗೆ ಒಪ್ಪಿಸಿ, ಒಂದಷ್ಟು ಹಣ ಗಳಿಸುವುದು ಎಂಬುದು. ದೇಶವು ಆರ್ಥಿಕವಾಗಿ ಮುನ್ನಡೆಯುತ್ತಿದ್ದರೆ, ಆಸ್ತಿ ಹಣಗಳಿಕೆ ಉಪಕ್ರಮದ ಮೂಲಕ ಕೇಂದ್ರ ಸರ್ಕಾರ ಹಣ ಸಂಗ್ರಹ ಮಾಡುವುದೇಕೆ? ಎಂಬ ಪ್ರಶ್ನೆ ಮೂಡುತ್ತದೆ.

ಐಎಮ್‌ಎಫ್ ಹೇಳಿದ್ದೇನು?

ಭಾರತವು 2025ರಲ್ಲಿ ನಾಲ್ಕನೇ ಅತಿದೊಡ್ಡ ಆರ್ಥಿಕತೆಯಾಗಲಿದೆ ಎಂದು ಐಎಂಎಫ್ ಮೇ 2025ರ ಆರಂಭದಲ್ಲಿ ಬಿಡುಗಡೆ ಮಾಡಿದ ತನ್ನ ವಿಶ್ವ ಆರ್ಥಿಕ ಮುನ್ನೋಟದಲ್ಲಿ ಹೇಳಿದೆ (ಈಗಾಗಲೇ ಆಗಿದೆ ಎಂದು ಹೇಳಿಲ್ಲ ಎಂಬುದನ್ನು ಗಮನಿಸಿ). ಐಎಂಎಫ್ ಪ್ರಕಾರ ಹಣಕಾಸು ವರ್ಷ ಜನವರಿ 1ರಿಂದ ಡಿಸೆಂಬರ್ 31ರವರೆಗೆ. ಭಾರತದಲ್ಲಿ ಹಣಕಾಸು ವರ್ಷ ಎಪ್ರಿಲ್ 1ರಿಂದ ಮಾರ್ಚ್ 31 ರವರೆಗೆ. ಭಾರತದ ನಾಮಿನಲ್ ಜಿಡಿಪಿ, ಅಂದರೆ ಪ್ರಸ್ತುತ ಬೆಲೆಗಳಲ್ಲಿ (ಹಣದುಬ್ಬರವನ್ನು ಪರಿಗಣಿಸದಿರುವ) ಜಿಡಿಪಿ 4,187.017 ಬಿಲಿಯನ್ ಡಾಲರ್‌ಗೆ ಏರುವ ನಿರೀಕ್ಷೆಯಿದೆ, (ಇಲ್ಲಿಯೂ ‘ನಿರೀಕ್ಷೆಯಿದೆ’ ಎಂದು ಹೇಳಿದೆ). ಇದು ಜಪಾನ್‌ನ ಅಂದಾಜು 4,186.431 ಬಿಲಿಯನ್ ಡಾಲರ್ ಅನ್ನು ಮೀರಿಸುತ್ತದೆ.

ಈಗ, ಭಾರತದ ಜಿಡಿಪಿ ಸುಮಾರು 3.9 ಟ್ರಿಲಿಯನ್ ಡಾಲರ್ ಎಂದು ಅಂದಾಜಿಸಲಾಗಿದೆ. ಆದರೆ ಜಪಾನ್‌ನ ಜಿಡಿಪಿ ಸುಮಾರು 4 ಟ್ರಿಲಿಯನ್ ಡಾಲರ್ ಆಗಿದೆ. ಮಾರ್ಚ್ ತ್ರೈಮಾಸಿಕದ ಅಧಿಕೃತ ಜಿಡಿಪಿ ಅಂಕಿಅಂಶಗಳು ಬಿಡುಗಡೆಯಾಗುವ ಮೇ 30 ರ ವೇಳೆಗೆ, 2024-2025 ರ ಹಣಕಾಸು ವರ್ಷದಲ್ಲಿ ಆರ್ಥಿಕತೆಯ ಗಾತ್ರ ಎಷ್ಟು ಎಂದು ನಮಗೆ ನಿಖರವಾಗಿ ತಿಳಿಯುತ್ತದೆ.

ಐಎಂಎಫ್ 2025ರ ಏಪ್ರಿಲ್ 22ರ ದತ್ತಾಂಶದ ಪ್ರಕಾರ, ಪ್ರಸ್ತುತ ದರಗಳಲ್ಲಿ (ನಾಮಿನಲ್) ಜಿಡಿಪಿ ಅಮೆರಿಕಾ 30.51 ಲಕ್ಷ ಕೋಟಿ ಡಾಲರ್‌ಗಳು, ಚೀನಾ 19.23, ಜರ್ಮನಿ 4.74, ಭಾರತ 4.19, ಜಪಾನ್ 4.19, ಬ್ರಿಟನ್ 3.84, ಫ್ರಾನ್ಸ್ 3.21, ಇಟಲಿ 2.42, ಕೆನಡಾ 2.23, ಮತ್ತು ಬ್ರೆಜಿಲ್ 2.13 ಲಕ್ಷ ಕೋಟಿ ಡಾಲರ್‌ಗಳೊಂದಿಗೆ ಮೊದಲ 10 ಸ್ಥಾನಗಳಲ್ಲಿವೆ.

2025ರ ವೇಳೆಗೆ 5 ಟ್ರಿಲಿಯನ್ ಡಾಲರ್?

ನರೇಂದ್ರ ಮೋದಿಯವರು ಅಧಿಕಾರಕ್ಕೆ ಬಂದ ನಂತರ, ದೇಶದ ಜಿಡಿಪಿ 2015ರಲ್ಲಿ 2.1 ಲಕ್ಷ ಕೋಟಿ (2.1 ಟ್ರಿಲಿಯನ್) ಡಾಲರ್ ಇತ್ತು, 2025ರಲ್ಲಿ 4.3 ಟ್ರಿಲಿಯನ್ ಡಾಲರ್‌ಗಳಿಗೆ ಹೆಚ್ಚಾಗಿದೆ ಎಂದೂ, 10 ವರ್ಷಗಳಲ್ಲಿ ಇದು ಶೇ. 105 ರಷ್ಟು ಹೆಚ್ಚಳವಾಗಿದೆ ಎಂದು ಐಎಂಎಫ್ ಕೆಲವು ತಿಂಗಳ ಹಿಂದೆ ಹೇಳಿತ್ತು. ಅದೇ ಸಂಸ್ಥೆ ಬಿಡುಗಡೆ ಮಾಡಿದ ಇತ್ತೀಚಿನ ಅಂದಾಜಿನ ಪ್ರಕಾರ ಆ ಮೊತ್ತ 4.187 ಟ್ರಿಲಿಯನ್‌ಗಳಿಗೆ ಇಳಿದಿದೆ. ಜಪಾನ್‌ನ ಜಿಡಿಪಿ 4.186 ಟ್ರಿಲಿಯನ್ ಆಗಿರುವುದರಿಂದ, ತನ್ನ ಅಂದಾಜಿನ ಇಳಿಕೆಯ ವಿಷಯವನ್ನು ಪಕ್ಕಕ್ಕಿಟ್ಟು ನಮಗೆ ನಾಲ್ಕನೇ ಸ್ಥಾನವನ್ನು ನೀಡಿದೆ. ವ್ಯತ್ಯಾಸ ಎಷ್ಟು? 0.001 ಟ್ರಿಲಿಯನ್ ಅಥವ 1 ಬಿಲಿಯನ್. 2025ರ ವೇಳೆಗೆ ಅದನ್ನು ಐದು ಟ್ರಿಲಿಯನ್ ಡಾಲರ್‌ಗಳಿಗೆ ಹೆಚ್ಚಿಸುವುದಾಗಿ ಬಿಜೆಪಿ ನಾಯಕರು ಬಡಾಯಿ ಕೊಚ್ಚಿಕೊಂಡಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬೇಕು.

ಹತ್ತು ವರ್ಷಗಳಲ್ಲಿ ನಮ್ಮ ಜಿಡಿಪಿ ಶೇ. 105ರಷ್ಟು ಹೆಚ್ಚಾಗಿದೆ ಎಂದು ಯಾವ ಐಎಂಎಫ್ ಹೇಳಿತ್ತೋ, ಅದೇ ಸಂಸ್ಥೆ 2025ರ ತಲಾ ಜಿಡಿಪಿಯಲ್ಲಿ 141ನೇ ಸ್ಥಾನ ಎಂದೂ ಕೂಡಾ ಭವಿಷ್ಯ ನುಡಿದಿದೆ. ದಿವಾಳಿಯಾಗಿದೆ ಎಂದು ಹೇಳಲಾಗುವ ಶ್ರೀಲಂಕಾ 133ನೇ ಸ್ಥಾನದಲ್ಲಿ, ಬಾಂಗ್ಲಾದೇಶ 143ನೇ ಸ್ಥಾನದಲ್ಲಿ, ಪಾಕಿಸ್ತಾನ 159ನೇ ಸ್ಥಾನದಲ್ಲಿ ಮತ್ತು ಕ್ಸಿ ಜಿನ್‌ಪಿಂಗ್ ಆಳ್ವಿಕೆಯಲ್ಲಿ ಕುಸಿದಿದೆ ಎಂದು ಕೆಲವರು ಹೇಳುವ ಚೀನಾ 71ನೇ ಸ್ಥಾನದಲ್ಲಿದೆ (ಇತ್ತೀಚೆಗೆ 70) ಎಂದು ಐಎಂಎಫ್ ಹೇಳಿದೆ.

ಹಿಂದಿನ ಯಾವುದೇ ಸರ್ಕಾರ ಸಾಧಿಸಿಲ್ಲವೇ?

ಸ್ವಾತಂತ್ರ್ಯ ಬಂದ ನಂತರ ಇಂತಹ ಅಭಿವೃದ್ಧಿಯನ್ನು ಯಾವುದೇ ಸರ್ಕಾರ ಸಾಧಿಸಿಲ್ಲ ಎಂದು ಬಿಜೆಪಿ ಐಟಿ ಸೆಲ್ ಮಾಳವಿಯಾ ಹೇಳಿದ್ದಾರೆ. ವಾಸ್ತವ ಏನಿದೆ? 2004ರಲ್ಲಿ ಮನಮೋಹನ್ ಸಿಂಗ್ ಅಧಿಕಾರಕ್ಕೆ ಬಂದಾಗ, ಜಿಡಿಪಿ 709 ಬಿಲಿಯನ್ ಡಾಲರ್ ಗಳಷ್ಟಿದ್ದದ್ದು 2014ರ ಹೊತ್ತಿಗೆ ಅದು 2030 ಬಿಲಿಯನ್‌ಗೆ ಏರಿತ್ತು. ಯುಪಿಎ ಆಡಳಿತದ ಅವಧಿಯಲ್ಲಿ ಬೆಳವಣಿಗೆಯ ದರವು ಶೇ. 186 ಹೆಚ್ಚು.


ತಲಾವಾರು ಜಿಡಿಪಿಯಲ್ಲಿ.....

ತಲಾವಾರು ಜಿಡಿಪಿ (GDP per capita) ದಲ್ಲಿ ಭಾರತವು ಜಾಗತಿಕವಾಗಿ 188 ದೇಶಗಳಲ್ಲಿ 136ನೇ ಸ್ಥಾನದಲ್ಲಿದೆ. ಇದರರ್ಥ, ಸರಾಸರಿಯಾಗಿ, ಭಾರತದ ಪ್ರತಿ ವ್ಯಕ್ತಿಯ ಆದಾಯವು ಜಾಗತಿಕ ಸರಾಸರಿಗೆ ಹೋಲಿಸಿದರೆ ಕಡಿಮೆಯಾಗಿದೆ ಮತ್ತು 135 ಇತರ ದೇಶಗಳಿಗಿಂತ ಕಡಿಮೆಯಾಗಿದೆ. ಭಾರತದ ತಲಾವಾರು ಜಿಡಿಪಿ ಪುಟ 15 ಕ್ಕೆ

ಹಂಗಾದ್ರೆ, ಈಗ ನನಗೆ ಉದ್ಯೋಗ ಸಿಗಬಹುದೇ?
ನಾವು ಅಮೆರಿಕವನ್ನು ಹಿಂದಿಕ್ಕಿದ ನಂತರ!



ವ್ಯಂಗ್ಯಚಿತ್ರ: ಸತೀಶ ಆಚಾರ್ಯ@ ಫೇಸ್‌ಬುಕ್



ಪಹಲ್‌ಗಾಂ ದಾಳಿಯ ನಂತರ ನಾನು ಪ್ರತಿಯೊಬ್ಬ ಭಾರತೀಯರನ್ನು ರಕ್ಷಣಾ ತಜ್ಞರಾಗಿ ಪರಿವರ್ತಿಸಿದೆ! ಈಗ ನಾನು ಅವರನ್ನೆಲ್ಲ ಪರಿಣತ ಅರ್ಥಶಾಸ್ತ್ರಜ್ಞರಾಗಿ ಮಾಡಿದ್ದೇನೆ!

ವ್ಯಂಗ್ಯಚಿತ್ರ: ಪೊನ್ನಪ್ಪ @ ಎಕ್ಸ್

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **S.Y.GURUSHANTH**